Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE
ಸಂಪುಟ–16 । ಸಂಚಿಕೆ–47 । ನವೆಂಬರ್ 14–20, 2022 । ಪುಟ 16 । ರೂ.10/-
Volume: 16 । Issue:47 । November 14-20, 2022 । Pages:16 । Price: 10/-
https://janashakthi.wordpress.com e-mail : js_weekly@yahoo.com



ಕೈಗಾರಿಕೆಯಲ್ಲಿನ ಹೊಸ ಸಂಬಂಧಗಳು ಮತ್ತು ಕಾರ್ಮಿಕರ ಬದಲಾದ ಸನ್ನಿವೇಶಗಳು






ಆರ್ಥಿಕ ದುರ್ಬಲ ವಿಭಾಗಗಳ ಮೀಸಲಾತಿ : ಬಡವರನ್ನು ವಂಚಿಸುವ ಮಾನದಂಡಗಳು ಬದಲಾಗಲಿ

ಸಾಮಾನ್ಯರ ಕೈಗೆ ಎಟುಕದ 'ವಂದೇ ಭಾರತ್' ರೈಲು

ಜಾಗತಿಕ ಹೂಡಿಕೆದಾರರ ಸಭೆ: ಮಂತ್ರಕ್ಕಿಂತ ಉಗುಳೇ ಜಾಸ್ತಿ!

'ವೀರ' ಸಾವರ್ಕರ್– ಏಳು ಮಿಥ್ಯೆಗಳು

ಭಾಗ – 3



74 ವರ್ಷಗಳ ಹಿಂದೆ ಸ್ವತಂತ್ರ ಭಾರತದ ಮೊದಲ ಗೃಹಮಂತ್ರಿ ಸರ್ದಾರ್ ವಲ್ಲಭಭಾಯಿ ಪಟೇಲ್ ಮಹಾತ್ಮ ಗಾಂಧಿಯವರ ಹತ್ಯೆಗೆ ಕಾರಣರಾದವರೆಂದು ಹೇಳಿದ್ದ ವಿ.ಡಿ.ಸಾವರ್ಕರ್ ರವರನ್ನು ಇಂದು ದೇಶವನ್ನು ಆಳುತ್ತಿರುವ ಮಂದಿ ಸ್ವಾತಂತ್ರ್ಯ ಸಮರದ 'ವೀರ' ಎನ್ನುತ್ತಿದ್ದಾರೆ. ಈ ಕುರಿತ ಮಿಥ್ಯೆಗಳನ್ನು ಹೆಣೆಯುವ, ಪಸರಿಸುವ ಪ್ರಯತ್ನಗಳು ನಡೆಯುತ್ತಿವೆ, ಸಹಜವಾಗಿ ಈ ಮಿಥ್ಯೆಗಳನ್ನು ಬಯಲಿಗೆಳೆಯುವ ಪ್ರಯತ್ನಗಳೂ ನಡೆದಿವೆ. ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್ಡ್' ಅಂತಹ ಒಂದು ಪ್ರಮುಖ ಕೃತಿ. ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಈ ಕೃತಿ ಹಿಂದೂ ಮಹಾಸಭಾ, ಆರೆಸೆಸ್ ಮತ್ತು ಭಾರತ ಸರಕಾರದ ಪತ್ರಾಗಾರಗಳಲ್ಲಿ ಇರುವ ಮೂಲ ದಸ್ತಾವೇಜುಗಳು ಮತ್ತು ಅಂಡಮಾನ್ ಜೈಲಿನಲ್ಲಿ ಸಾವರ್ಕರ್ ಜತೆಗಿದ್ದ ಕ್ರಾಂತಿಕಾರಿಗಳ ಸ್ಮರಣೆಗಳನ್ನು ಆಧರಿಸಿದೆ. ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಈ ಕೃತಿಯ ಪ್ರಸ್ತಾವನೆಯಲ್ಲಿ ಸಾವರ್ಕರ್ ಅವರನ್ನು ರಾಷ್ಟ್ರೀಯ ನೇತಾರನನ್ನಾಗಿ ಬಿಂಬಿಸುವ ಯಾವುದೇ ಯೋಜನೆ 1998 ಕ್ಕೂ ಮುಂಚೆ ಹಿಂದುತ್ವ ಬ್ರಿಗೇಡಿಗೆ ಇರಲಿಲ್ಲ, ನಂತರ ಅದು ಮುನ್ನೆಲೆಗೆ ಬರುವಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರವೂ ಇದೆ ಎಂಬುದನ್ನು ಪರಿಶೀಲಿಸುತ್ತ ಸಾವರ್ಕರ್ ಅವರ ಹೊಗಳುಭಟರ ತಂಡದಲ್ಲಿ ಕಾಂಗ್ರೆಸ್ ಕೂಡ ಸೇರಿಕೊಂಡದ್ದು ವಿಷಾದದ ಸಂಗತಿ, ಸಾವರ್ಕರ್ ಅವರಿಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿದರೆ ಜನರಿಗೆ ನಿಜವಾದ ಸಾವರ್ಕರ್ ಗೊತ್ತಾಗುತ್ತದೆ ಎಂದು ಲೇಖಕರು ಹೇಳಿರುವುದನ್ನು ಓದಿದ್ದೀರಿ... ಮುಂದೆ ಅವರು ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ಒಂದೊಂದಾಗಿ ಈ ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತಾರೆ.

ಡಾ.ಶಮ್ಸುಲ್ ಇಸ್ಲಾಂ **ಅನು: ಟಿ.ಸುರೇಂದ್ರ ರಾವ್**

ಮಿಥ್ಯೆ 1–'ಸಾವರ್ಕರ್ ಒಬ್ಬ ದಂತ ಕತೆಯಾದ ಸ್ವಾತಂತ್ರ್ಯ ಹೋರಾಟಗಾರ'

ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ. ಸಾವರ್ಕರ್ ಅಸಾಧಾರಣ ಧೈರ್ಯ ಪ್ರದರ್ಶಿಸಿದರು. ಬ್ರಿಟಿಷ್ ಆಳರಸರೊಂದಿಗೆ ಅವರು ಎಂದೂ ಶಾಮೀಲಾಗಲಿಲ್ಲ!

'ಸಾವರ್ಕರ್‌ರವರ ಪ್ರಾಮಾಣಿಕತೆ, ಭಾರತದ ಸ್ವಾತಂತ್ರ್ಯಕ್ಕಾಗಿನ ಅವರ ಉತ್ಕಟೇಚ್ಛೆ ಮತ್ತು ತ್ಯಾಗಪ್ರಜ್ಞೆಯೇ ಹೆಗ್ಗುರುತಾಗಿರುವ ಅವರ ಸಾರ್ವಜನಿಕ ಜೀವನಕ್ಕಾಗಿ' ಅವರನ್ನು ಅತ್ಯಂತ ಗೌರವಯುತವಾಗಿ ಕಾಣಬೇಕು ಎಂದು ಸಾವರ್ಕರ್‌ವಾದಿಗಳು ಹೇಳಿಕೊಳ್ಳುತ್ತಾರೆ. ಬ್ರಿಟಿಷ್ ಆಳ್ವಿಕೆಯ ವಿರುದ್ಧ ಭಾರತದ ಪ್ರತಿರೋಧದ ಮಹಾನ್ ವ್ಯಕ್ತಿತ್ವ ಅವರದು ಎಂದು ಸಾವರ್ಕರ್ ಬಂಟರು ಮಾತ್ರ ಆಗ್ರಹಪೂರ್ವಕವಾಗಿ ಹೇಳುತ್ತಿಲ್ಲ. "ಅವರೊಬ್ಬ ದೇಶಪ್ರೇಮಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ" ಎಂದು ಕಾಂಗ್ರೆಸ್ ಪ್ರಧಾನ ಮಂತ್ರಿಗಳೊಬ್ಬರು ಘೋಷಿಸುವ ಮೂಲಕ ಸಾವರ್ಕರ್ ಬಂಟರೊಂದಿಗೆ ಸೇರುತ್ತಾರೆ ಎನ್ನುವುದನ್ನು ಈ ಹಿಂದಿನ ಅಧ್ಯಾಯದಲ್ಲಿ ನಾವು ನೋಡಿದ್ದೇವೆ. ಕಾಲಾ ಪಾನಿ ಅಥವಾ ಕರಿ ನೀರಿನ ಎಂದು ಕರೆಯಲ್ಪಡುವ ಅಂಡಮಾನಿನ ಭಯಂಕರ ಸೆಲ್ಯುಲರ್ ಜೈಲಿನಲ್ಲಿ ಸಾವರ್ಕರ್ ಮಾತ್ರ ಕಠಿಣ ಕಾರಾಗೃಹವಾಸದಲ್ಲಿದ್ದರು ಎಂದು ಬಿಂಬಿಸುವ ಯೋಜಿತ ಪ್ರಯತ್ನ ನಡೆದಿದೆ. ಗೂಡಿನಂತಿರುವ ಸಣ್ಣ ಕೋಣೆಗಳಲ್ಲಿ ಭೀಕರ ಕ್ರೌರ್ಯಗಳಿಗೆ ಒಳಗಾದವರು ಸಾವರ್ಕರ್ ಒಬ್ಬರೇ ಎಂದು ಬಿಂಬಿಸಲು ಬಿಜೆಪಿ ನೇತೃತ್ವದ ಸರ್ಕಾರವು ಶತಪ್ರಯತ್ನ ಮಾಡುತ್ತಿರುವಂತೆ ಕಾಣುತ್ತಿದೆ. 2002–2003 ರ ಅವಧಿಯಲ್ಲಿ ಆ ನಿಟ್ಟಿನಲ್ಲಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಯಿತು; ಸಂಸತ್ತಿನ ಕೇಂದ್ರೀಯ ಸಭಾಂಗಣದಲ್ಲಿ ಸಾವರ್ಕರ್ ಅವರ ಭಾವಚಿತ್ರವನ್ನು ಅಂದಿನ ಲೋಕಸಭಾ ಅಧ್ಯಕ್ಷರಾದ ಮನೋಹರ್ ಜೋಶಿ (ಶಿವಸೇನಾ) ಯವರು ಅನಾವರಣ ಮಾಡಿದರು; ಲಾಲ್ ಕೃಷ್ಣ ಅಡ್ವಾಣಿಯವರು ಪೋರ್ಟ್ ಬ್ಲೇರ್ ವಿಮಾನನಿಲ್ದಾಣವನ್ನು ವೀರ ಸಾವರ್ಕರ್ ವಿಮಾನ ನಿಲ್ದಾಣವೆಂದು ಮರುನಾಮಕರಣ ಮಾಡಿದರು; ಮತ್ತು ಅತ್ಯಂತ ಕೆಟ್ಟದ್ದೆಂದರೆ, ಅಂಡಮಾನ್ ಜೈಲಿನ ಆವರಣದಲ್ಲಿ ಸ್ಮಾರಕ ಜ್ಯೋತಿಸ್ತಂಭವನ್ನು ನಿಲ್ಲಿಸುವಾಗ ಬಿಜೆಪಿಯ ರಾಮ ನಾಯಕ್‌ರವರು ಸಾವರ್ಕರ್ ಹೆಸರನ್ನು ಮಾತ್ರ ಉಲ್ಲೇಖಿಸಿದರು. ಅಂಡಮಾನ್ ಜೈಲಿಗೆ ಭೇಟಿ ನೀಡುವುದು ಅಸಹನೀಯ ಸನ್ನಿವೇಶವನ್ನು ಉಂಟುಮಾಡುತ್ತದೆ. ಬೆಳಕು ಮತ್ತು ಧ್ವನಿ(ಲೈಟ್ ಅಂಡ್ ಸೌಂಡ್) ಯಂತಹ ಕಾರ್ಯಕ್ರಮಗಳ ಎಲ್ಲಾ ದೃಶ್ಯ ಚಿತ್ರಗಳು ಸಾವರ್ಕರ್ ಅವರನ್ನು ಮಾತ್ರ ತೋರಿಸುತ್ತವೆ. ಅಲ್ಲಿ ಕ್ರೌರ್ಯ ಅನುಭವಿಸಿದವ ವ್ಯಕ್ತಿ ಸಾವರ್ಕರ್ ಒಬ್ಬರೇ ಎಂಬಂತೆ ಬಿಂಬಿಸಲಾಗುತ್ತದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾವರ್ಕರ್ ಅವರ ಪಾತ್ರವನ್ನು ಯಾವರೀತಿಯಲ್ಲೂ ವಿಮರ್ಶೆಗೆ ಒಳಪಡಿಸುವುದನ್ನು ತಡೆಯುವ ಸಲುವಾಗಿ, ಇಡೀ ಚರ್ಚೆಯ ದಿಕ್ಕನ್ನೇ ಬದಲಾಯಿಸಿ ಭಾವುಕ ವಿಷಯವಾಗಿ ತಿರುಗಿಸುವ ಸತತ ಯತ್ನ ಮಾಡಲಾಗುತ್ತದೆ; 'ಭಾರತದ ಗೌರವಾನ್ವಿತ ಸ್ವಾತಂತ್ರ್ಯ ಹೋರಾಟಗಾರರ ಮಹಾಪುರುಷರ ಸಾಲಿನಲ್ಲಿ ಸಾಕಷ್ಟು ಕಾಲ ಇರುವವರನ್ನು ಕೆಸರೆರಚಾಟಕ್ಕೆ ಎಳೆಯುವುದು ಸರಿಯಲ್ಲ' ಎಂದು ವಾದಿಸುತ್ತಾರೆ.

ವಾಸ್ತವಾಂಶಗಳು

ಆದರೆ, ಸತ್ಯಸಂಗತಿಗಳು ಅಷ್ಟು ಸರಳವಾಗಿಲ್ಲ, ಅವು ಬೇರೆ –ಗಾಬರಿ ಹುಟ್ಟಿಸುವ – ಕತೆಯನ್ನೇ ಹೇಳುತ್ತವೆ. ಆ ಸೆಲ್ಯುಲರ್ ಜೈಲಿನ ಕೆಲವು ಮಹತ್ವಪೂರ್ಣ ನೈಸರ್ಗಿಕ ಹಾಗೂ ಚಾರಿತ್ರಿಕ ವಿವರಗಳನ್ನು ಆರಂಭದಲ್ಲೇ ತಿಳಿಸುವುದು ಬಹಳ ಮುಖ್ಯವಾಗುತ್ತದೆ. ಅಲ್ಲಿ ಬ್ಯಾರಾಕುಗಳಿರಲಿಲ್ಲ, ಖೈದಿಗಳನ್ನು ಯಾವಾಗಲೂ ಸೆಲ್‌ಗಳಲ್ಲೇ ಒಂಟಿಯಾಗಿ ಬಂಧಿಸಿಡುತ್ತಿದ್ದರು ಎನ್ನುವುದಕ್ಕಾಗಿಯೇ ಅದಕ್ಕೆ ಆ ಹೆಸರು ಬಂದಿದ್ದು. ಆ ಜೈಲು ಒಟ್ಟು 700 ಸೆಲ್‌ಗಳನ್ನು 7 ವಿಭಾಗಗಳಲ್ಲಿ ಹೊಂದಿದೆ. ಏಕಕಾಲದಲ್ಲಿ ಕೇವಲ 700 ಖೈದಿಗಳನ್ನು ಮಾತ್ರ ಅಲ್ಲಿಡಬಹುದು. ಎಲ್ಲಾ ಖೈದಿಗಳು ರಾಜಕೀಯದವರಲ್ಲ ಮತ್ತು 10 ಕ್ಕೂ ಹೆಚ್ಚು ಮಹಿಳೆಯರು ಜೈಲಿನಲ್ಲಿ ಇರುತ್ತಿದ್ದರು.


ಆ ಜೈಲಿನ ಬಗ್ಗೆ ಆರ್.ಸಿ.ಮಜುಮ್‌ದಾರ್ ಶ್ರಮವಹಿಸಿ ಬರೆದ ಕೃತಿಯ ಪ್ರಕಾರ, ಈಸ್ಟ್ ಇಂಡಿಯಾ ಕಂಪನಿ ಆಳ್ವಿಕೆಯ ವಿರುದ್ಧದ 1857ರ ಬಂಡಾಯದಲ್ಲಿ ರಾಜಕೀಯ ಖೈದಿಗಳ ಮೊದಲ ತಂಡವನ್ನು ಸೆಲ್‌ಗಳ ಆ ಜೈಲಿಗೆ ಕರೆತಂದರು. ಅವರ ಪ್ರಕಾರ,

ಬಹಳ ದೊಡ್ಡ ಸಂಖ್ಯೆಯಲ್ಲಿ ಬಂಡಾಯಗಾರರನ್ನು ಅಂಡಮಾನಿಗೆ ರವಾನಿಸಿದ್ದರೂ, ಅವರ ಒಟ್ಟು ಸಂಖ್ಯೆ ಗೊತ್ತಿಲ್ಲ ಮತ್ತು ಪ್ರತಿಯೊಬ್ಬ ಖೈದಿಯ ವಿಶ್ವಾಸಾರ್ಹ ವೈಯಕ್ತಿಕ ದಾಖಲೆಗಳು ಲಭ್ಯವಿಲ್ಲ. ಆದರೆ ಆ ಬಂಡಾಯದ ಇಬ್ಬರು ಪ್ರಮುಖ ಮುಖಂಡರು –ತಮ್ಮ ನೈತಿಕ ಚಾರಿತ್ರ್ಯ ಹಾಗೂ ಉನ್ನತ ತಿಳುವಳಿಕೆಯಿಂದಾಗಿ ಚಿರಪರಿಚಿತವಾಗಿದ್ದವರು– ಅಲ್ಲಿ ಜೀವಿಸಿದ್ದರು ಹಾಗೂ ಖೈದಿಗಳಾಗಿ ಅಂಡಮಾನಿನಲ್ಲೇ ಪ್ರಾಣತೆತ್ತರು ಎಂದು ತಿಳಿದಿದೆ. ಅವರು ಅಲ್ಲಮ ಫಜಲಿ ಹಕ್ ಖೈರಾಬಾದಿ ಮತ್ತು ಮೌಲಾನಾ ಲಿಯಾಕತ್ ಅಲಿ ಆಗಿದ್ದರು. ಮತ್ತೊಬ್ಬ ಬಂಡಾಯಗಾರ ಮಿರ್ ಜಫರ್ ಅಲಿ ಥಾನೇಶ್ವರಿಯವರು ಅಂಡಮಾನಿನಲ್ಲಿ 20 ವರ್ಷಗಳ ಕಠಿಣ ಸಜಾವನ್ನು ಕಳೆದರು.

ಮೌಲ್ವಿ ಫಜಲ್–ಎ–ಹಕ್ ಖೈರಾಬಾದಿ

ಅವರು ಪ್ರಸಿದ್ಧ ನ್ಯಾಯಶಾಸ್ತ್ರ ಪರಿಣಿತರು, ಲೇಖಕರು, ಕವಿಯಾಗಿದ್ದರು; ಅವರು ಸಂಯುಕ್ತ ಪ್ರಾಂತ್ಯಗಳ ಖೈರಾಬಾದಿನಲ್ಲಿ (ಈಗಿನ ಉತ್ತರ ಪ್ರದೇಶದ ಸೀತಾಪುರ್ ಜಿಲ್ಲೆ) ಹುಟ್ಟಿದರು. ಬ್ರಿಟಿಷರ ಆಳ್ವಿಕೆಯ ದೆಹಲಿಯಲ್ಲಿ ಮುಖ್ಯ ನ್ಯಾಯಾಧೀಶ (ಸರಿಶ್ತದಾರ್) ರಾಗಿದ್ದರು. ಮೇ 1857 ರಲ್ಲಿ ದೆಹಲಿಯು ಬ್ರಿಟಿಷರ ಆಳ್ವಿಕೆಯಿಂದ ಮುಕ್ತವಾದ ನಂತರ ಅವರು ವಿಮೋಚನಾ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದರು. ಕ್ರಾಂತಿಕಾರಿ ಸಮರ ಮಂಡಳಿ (ರೆವಲ್ಯೂಷನರಿ ವಾರ್ ಕೌನ್ಸಿಲ್) ಯ ಪ್ರಮುಖ ಸದಸ್ಯರಾಗಿದ್ದರು ಮತ್ತು ದೆಹಲಿಯ ಮರುಸ್ಥಾಪಿತ ಮುಘಲ್ ಸರ್ಕಾರದ ಸಂವಿಧಾನವನ್ನು ಅವರು ಸಿದ್ಧಪಡಿಸಿದರು. ಭಾರತದ ವಿಮೋಚನೆಗಾಗಿ ಜನರನ್ನು ಹುರಿದುಂಬಿಸುವಲ್ಲಿ ಅವರು ಧೀರೋದಾತ್ತ ಪಾತ್ರ ವಹಿಸಿದ್ದರು.

ಷಹಜಹಾನ್‌ಪುರ, ಲಕ್ನೋ ಮತ್ತು ಬರೇಲಿಯ ಬ್ರಿಟಿಷ್ ಮಿಲಿಟರಿ –ವಿರೋಧಿ ಹೋರಾಟದಲ್ಲಿ ಅವರು ಭಾಗವಹಿಸಿದರು. ಕ್ರಾಂತಿಕಾರಿ ಶಕ್ತಿಗಳ ಸೋಲಿನ ನಂತರ ಅವರು ತಮ್ಮ ಸ್ವಂತ ಊರಾದ ಖೈರಾಬಾದಿಗೆ ಹೋದರು; ಅಲ್ಲಿ ಬ್ರಿಟಿಷರು ಅವರನ್ನು ಬಂಧಿಸಿದರು ಮತ್ತು ದೇಶದ್ರೋಹಕ್ಕಾಗಿ ವಿಚಾರಣೆ ನಡೆಸಿದರು. ಬ್ರಿಟಿಷರ ಟ್ರಿಬ್ಯುನಲ್ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿ ಅಕ್ಟೋಬರ್ 8, 1859 ರಂದು ಅಂಡಮಾನಿನ ಸೆಲ್ಯುಲರ್ ಜೈಲಿಗೆ ಕಳಿಸಿತು. ಅಲ್ಲಿ ಅವರು ಆಗಸ್ಟ್ 21, 1861 ರಲ್ಲಿ ನಿಧನರಾದರು.



ಅವರು ಇಸ್ಲಾಮಿನ ಅಧ್ಯಯನ ಮತ್ತು ಮತಧರ್ಮಶಾಸ್ತ್ರದ ವಿದ್ವಾಂಸರು ಮಾತ್ರವಲ್ಲದೇ, ಉರ್ದು, ಅರೇಬಿಕ್ ಹಾಗೂ ಪರ್ಶಿಯನ್ ಸಾಹಿತ್ಯದ ಲೇಖಕರೂ ಆಗಿದ್ದರು. ಅರೇಬಿಕ್‌ನಲ್ಲಿ ಬಹಳ ದ್ವಿಪದಿಗಳು ಅವರ ಹೆಸರಿನಲ್ಲಿವೆ. ಅವರು ಮಿರ್ಜಾ ಘಾಲಿಬರ ಕೋರಿಕೆಯ ಮೇರೆಗೆ ಅವರ ಮೊದಲ ದಿವಾನ್ ನ್ನು ಸಂಪಾದಿಸಿದರು. ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ತಮ್ಮ ಬದುಕಿನ ಕತೆಯನ್ನು ಅರಾಬಿಕ್‌ನಲ್ಲಿ ರಿಸಾಲ–ಅಲ್–ಸೂರತ್ ಅಲ್–ಹಿಂದಿಯಾ ಬರೆದರು. ಕಠಿಣ ಕಣ್ಗಾವಲಿದ್ದ ಕಾರಣ, ಬಟ್ಟೆ ಚೂರುಗಳು ಹಾಗೂ ಕಾಗದದ ಚೂರುಗಳ ಮೇಲೆ ಕಲ್ಲಿದ್ದಲಿನಿಂದ ಅವರು ಬರೆದರು ಮತ್ತು ಶಿಕ್ಷೆಯ ಅವಧಿ ಮುಗಿದಿದ್ದರಿಂದ 1860 ರಲ್ಲಿ ಬಿಡುಗಡೆಯಾದ ಅವರ ಸಹ ಖೈದಿ ಮುಫ್ತಿ ಇನಾಯತ್ ಅಹಮದ್ ಕಕೋರ್ವಿಯವರ ಮೂಲಕ ಹೊರಗೆ ಸಾಗಿಸಿದರು. ಅದನ್ನು 1920 ರಲ್ಲಷ್ಟೇ ಬಾಘಿ–ಎ–ಹಿಂದೂಸ್ತಾನ್ (ಭಾರತದ ಬಂಡಾಯಗಾರ) ಎಂದು ಉರ್ದುವಿಗೆ ಅನುವಾದ ಮಾಡಲು ಸಾಧ್ಯವಾಯಿತು. ಸೆಲ್ಯುಲರ್ ಜೈಲಿನಲ್ಲಿ ಫಜಲ್ ಹಕ್ ಬರೆದ ಅವರ ಈ ಆತ್ಮಕಥನವು ಸೆರೆಯಾಳುಗಳ ಬದುಕು ಎಷ್ಟು ಘೋರವಾಗಿತ್ತು ಎಂಬುದರ ಅತ್ಯಂತ ಪ್ರಮಾಣಪೂರ್ವಕ ಕಥನಗಳು ಮಾತ್ರವಾಗಿರದೆ ಭಾರತವನ್ನು ದಾಸ್ಯಕ್ಕೊಳಪಡಿಸುವ ಬ್ರಿಟಿಷರ ಯೋಜನೆ ಹಾಗೂ ಅದರ ವಿರುದ್ಧ ನಡೆದ ಬಂಡಾಯ ಮತ್ತು ಅದು ಹೇಗೆ ವಿಫಲವಾಯಿತು ಎಂಬುದರ ಬಗೆಗಿನ ಶಾಸ್ತ್ರಗ್ರಂಥ ಕೂಡ ಆಗಿತ್ತು. ಫಜಲ್ ಹಕ್ ಖೈರಾಬಾದಿಯವರು ನಮ್ಮ ದೇಶದ ಈಗಿನ ಪ್ರಸಿದ್ಧ ಕವಿ ಜಾವೇದ್ ಅಖ್ತರ್ ಅವರ ಅಜ್ಜಿಯ ತಂದೆಯಾಗಿದ್ದರು ಎನ್ನುವುದು ಆಸಕ್ತಿದಾಯಕ ಸಂಗತಿಯಾಗಿದೆ.

ಮೌಲ್ವಿ ಲಿಯಾಕತ್ ಅಲಿ ಅಲಹಾಬಾದಿ

ಮೌಲ್ವಿ ಲಿಯಾಕತ್ ಅಲಿ ಅಲಹಾಬಾದಿ ಒಬ್ಬ ಪ್ರಖ್ಯಾತ ಆಡಳಿತಗಾರ, ಯುನಾನಿ ವೈದ್ಯರು ಮತ್ತು ಮಿಲಿಟರಿ ಸಮರತಂತ್ರ ಪ್ರವೀಣರಾಗಿದ್ದರು. ಅಲಹಾಬಾದಿನಲ್ಲಿ ಬೀಡುಬಿಟ್ಟಿದ್ದ ಮೊಘಲ್ ಸೇನೆಯ ದಳಪತಿ (ಕಮಾಂಡರ್) ಆಗಿದ್ದರು. 1857ರ ವಿಮೋಚನಾ ಸಮರದಲ್ಲಿ ಅಲಹಾಬಾದಿನ ಸುತ್ತಮುತ್ತಲು ಬ್ರಿಟಿಷ್ ಸೇನೆಯ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಅಧಿಪತ್ಯದಲ್ಲಿನ ಸೇನೆಯಿಂದಾಗಿ ಕ್ರಾಂತಿಕಾರಿಗಳು ಅಲಹಾಬಾದಿನ ಬಹುಪಾಲು ಪ್ರದೇಶವನ್ನು ಮುಕ್ತಗೊಳಿಸಿದ್ದರು. ಅವರನ್ನು ಬಿಡುಗಡೆ ಹೊಂದಿದ ಪ್ರದೇಶಗಳ ರಾಜ್ಯಪಾಲನನ್ನಾಗಿ ದೆಹಲಿಯ ಮೊಘಲ್ ದರ್ಬಾರು ನೇಮಿಸಿತು. ಬ್ರಿಟಿಷ್ ಸೇನೆಯ ವಿರುದ್ಧ

ಪುಟ 14 ಕ್ಕೆ

ಸಂಪಾದಕೀಯ

ಪ್ರತಿಮೆಗಳ ಅನಾವರಣದ ರಾಜಕಾರಣ

ಎಲ್ಲಾ ರಂಗಗಳಲ್ಲಿಯೂ ವಿಫಲವಾಗಿ ಜನರ ಅತೃಪ್ತಿಯನ್ನು ಎದುರಿಸುತ್ತಿರುವ ಬಿಜೆಪಿ ಪಕ್ಷ ದೇಶದಾದ್ಯಂತ 'ಪ್ರತಿಮಾ ರಾಜಕಾರಣ' ಕ್ಕೆ ಇಳಿದಿದೆ. ಗುಜರಾತ್ ನಲ್ಲಿ ಲಿಬರ್ಟಿ ಮೀರಿಸುವ ಜಗತ್ತಿನಲ್ಲೇ ಎತ್ತರದ ಸರ್ದಾರ್ ವಲ್ಲಭಾಯ್ ಪಟೇಲ್ ರವರ ಪ್ರತಿಮೆಯನ್ನು ಅನಾವರಣ ಮಾಡುವ ಮೂಲಕ ಕಾಂಗ್ರೆಸ್ ಪಕ್ಷದ ಪಟೇಲರನ್ನು ತಮ್ಮವರನ್ನಾಗಿಸಿಕೊಳ್ಳುವ ಪ್ರಯತ್ನ ನಡೆಸಲಾಯಿತು. ಬಂಡವಾಳಶಾಹಿ ಬೆಳವಣಿಗೆಗೆ ಅತಿ ಅಗತ್ಯವಾದ ಒಂದು ರಾಜ್ಯಾಡಳಿತದ ಸಂರಚನೆಯನ್ನು ಮಾಡಿದ ಪಟೇಲರನ್ನು ಐಕ್ಯತೆಯ ಸಂಕೇತವೆಂದು ಬಿಂಬಿಸಿ ಅಬ್ಬರದ ಪ್ರಚಾರವನ್ನೂ ಮಾಡಲಾಯಿತು. ವಿಚಿತ್ರವೆಂದರೆ ಅದನ್ನು ಮಾಡಿದ ಕಾಂಗ್ರೆಸ್ ಪಕ್ಷದ ವಿರುದ್ಧವೇ ಪಟೇಲರನ್ನು ಬಳಸಿಕೊಂಡು ತನ್ನ ಸೈದ್ಧಾಂತಿಕ ವಾದಕ್ಕೆ, ಇಂದಿನ ಮತೀಯವಾದಿ ರಾಜಕೀಯ ಅಜೆಂಡಾಕ್ಕೆ ಜನರನ್ನು ಪ್ರಭಾವಿಸಿದ್ದು. ಅದಾದ ಬಳಿಕ ಎಲ್ಲೆಡೆಗಳಲ್ಲಿ ಬೃಹತ್ ಪ್ರತಿಮೆಗಳ ಸ್ಥಾಪನೆಯ ಒಂದು ಟ್ರೆಂಡನ್ನೇ ಸೃಷ್ಟಿಸಲಾಯಿತು.ಇಂತಹವುಗಳ ಜೊತೆ ಧಾರ್ಮಿಕ ಕೇಂದ್ರಗಳ ಹೈಟೆಕ್ ' ಜೀರ್ಣೋದ್ಧಾರ, ಹೊಸ ದೇವಸ್ಥಾನಗಳ ಸಂಕೀರ್ಣ ಗಳ ನಿರ್ಮಾಣ ಮತ್ತು ಅನಾವರಣಗಳ ಸರಣಿಯನ್ನೇ ಆರಂಭಿಸಲಾಯಿತು. ಇದಕ್ಕೆ ಅಭಿವೃದ್ಧಿಗೆಂದು ಮೀಸಲಿಟ್ಟ ಸಾರ್ವಜನಿಕರ ಹಣವನ್ನು ಖರ್ಚು ಮಾಡುತ್ತಿರುವುದು. ತನ್ನ ಲಾಭಕ್ಕಾಗಿ ಅದು ಖಾಸಗಿ ರಂಗದಲ್ಲಿಯೂ ವ್ಯಯಿಸುತ್ತಿದೆ.

ಈಗಲೂ ಕರ್ನಾಟಕದ ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಯವರು ಅನಾವರಣಗೊಳಿಸಿದ ಕೆಂಪೇಗೌಡರ ಪ್ರತಿಮೆಯ ನಿರ್ಮಾಣಕ್ಕೆ ಬಳಸಿದ್ದು ಸರಕಾರದ ಹಣವನ್ನು. ಅದಕ್ಕೆಸರಕಾರದ ಬದಲು ವಿಮಾನ ನಿಲ್ದಾಣದ ಮಾಲೀಕರು ವ್ಯಯಿಸಬಹುದಿತ್ತು ಎನ್ನುವ ಟೀಕೆಗಳೂ ವ್ಯಕ್ತವಾಗಿವೆ. ಇದನ್ನು ಬಿಜೆಪಿ ತನ್ನ ಹೆಗ್ಗಳಿಕೆ ಎಂಬಂತೆ, ಪ್ರಗತಿಯ ಸಂಕೇತವೆಂದು ಕರೆದು ತಾನೇ ಆ ಪರಂಪರೆಗೆ ಸರ್ವ ವಾರಸುದಾರನೆಂಬಂತೆ ಬಿಂಬಿಸಿಕೊಳ್ಳುತ್ತಿರುವುದು ಒಂದು ಕೀಳು ರಾಜಕೀಯ ತಂತ್ರವೆಂದೂ ಟೀಕೆಗಳು ವ್ಯಕ್ತಗೊಂಡಿವೆ. ಈ ಮೂಲಕ ಅದು ಮುಂಬರುವ ಚುನಾವಣೆಯಲ್ಲಿ ಮತ ಸೆಳೆಯುವ ಜಾತಿ ಓಲೈಕೆಯ ತಂತ್ರವನ್ನು ಅನುಸರಿಸುತ್ತಿದೆ. ಈ ಧಾವಂತದಿಂದ ಕೆಂಪೇಗೌಡರು ಎಲ್ಲರಿಗೂ ಸೇರಿದವರು ಎನ್ನುವ ಭಾವನೆಯನ್ನೆ ಒಡೆಯುತ್ತದೆ ಎನ್ನುವುದೇ ಮುಖ್ಯ ಅಂಶ.

ಈಗಾಗಲೇ ಚುನಾವಣೆಯ ಸಿದ್ಧತೆಯಲ್ಲಿ ಮುಳುಗಿರುವ ಬಿಜೆಪಿ ಪಕ್ಷ 'ಸಾಮಾಜಿಕ ಇಂಜನೀಯರಿಂಗ್' ಎಂದು ಕರೆದು ಕೊಳ್ಳುವ ಜಾತಿಗಳ ಓಲೈಕೆಯ ಕೀಳು ತಂತ್ರಕ್ಕೆ ಇಳಿದಾಗಿದೆ. ಬಹುತೇಕ ಬಲಪಂಥೀಯ ಪಕ್ಷಗಳು ಈ ಸ್ಪರ್ಧೆಗೆ ಇಳಿಯುತ್ತಿವೆ. ಇತ್ತೀಚೆಗೆ ಬಿಜೆಪಿ ಕಲಬುರ್ಗಿಯಲ್ಲಿ ಹಿಂದುಳಿದ ಜಾತಿಗಳ ಸಮಾವೇಶವನ್ನು ನಡೆಸಿತು. ಇದೇ ನವೆಂಬರ್ 21ರಂದು ಬಳ್ಳಾರಿಯಲ್ಲಿ ಮೀಸಲಾತಿ ಪ್ರಮಾಣದ ಹೆಚ್ಚಳವನ್ನೇ ನೆಪವಾಗಿರಿಸಿ ಎಸ್.ಸಿ ಮತ್ತು ಎಸ್.ಟಿ.ಗಳ ಸಮಾವೇಶವನ್ನು ಸಂಘಟಿಸಿ ದೂರವಾಗುತ್ತಿರುವ ಬೆಂಬಲವನ್ನು ಕ್ರೋಢೀಕರಿಸಲು ಯತ್ನಿಸುತ್ತಿದೆ. ಮೋದಿಯವರಿಂದ ಈಗ ನಡೆದ ಕೆಂಪೇಗೌಡರ ಗುಣಗಾನ ಮತ್ತು ಅಭಿವೃದ್ದಿಯ ಭಾಷಣವೂ ಅದೇ ಸರಣಿಯಲ್ಲಿರುವುದು ಸ್ಪಷ್ಟ.



ಕರ್ನಾಟಕದಲ್ಲಿ ಮತ್ತೇ ಅಧಿಕಾರಕ್ಕೆ ಮರಳ ಬೇಕೆಂದರೆ 150 ಸ್ಥಾನಗಳನ್ನು ಗೆಲ್ಲುವ ಮಿಷನ್ 150ನ್ನು ಮೋ–ಶಾ ನಿಗದಿ ಮಾಡಿದ್ದಾರೆ. ಅದರ ಜಾರಿಯಲ್ಲಿ ದಕ್ಷಿಣ ಕರ್ನಾಟಕ ಬಹಳ ಮುಖ್ಯ ಇದೆ. ಮತ್ತು ಅದಕ್ಕಾಗಿ ಅದೆಷ್ಟೇ ಸಂಪನ್ಮೂಲ ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಆಡಳಿತದ ಅಧಿಕಾರ ಬಳಸಲು ಸಿದ್ದವಾಗಿದೆ. ತನ್ನ ಗುರಿಯನ್ನು ಸಾಧಿಸಬೇಕಾದರೆ ಅದರಲ್ಲೂ ಜೆಡಿ ಎಸ್ ಮತ್ತು ಕಾಂಗ್ರೆಸ್ ಪಕ್ಷಗಳ ಜೊತೆಗಿರುವ ಒಕ್ಕಲಿಗರನ್ನು ಹೇಗಾದರೂ ಮಾಡಿ ಸೆಳೆದುಕೊಳ್ಳದೇ ಇದು ಅಸಾಧ್ಯ. ಇದಕ್ಕಾಗಿ ಕೆಂಪೇಗೌಡರ ಮೇಲಿನ ಅಭಿಮಾನವನ್ನು ಹೀಗೆ ಮತ್ತು ಮಠಾಧೀಶರ ಮೂಲಕ ಬಳಸಲು ಯತ್ನಿಸುತ್ತಿದೆ. ವೈಧಿಕ ಪರಂಪರೆಗೆ ಭಿನ್ನವಾಗಿರುವ, ಪ್ರತಿರೋಧದ ಸಂಸ್ಕೃತಿ ಹೊಂದಿರುವ ಆದಿಚುಂಚಲಗಿರಿಯ ಪೀಠಗಳನ್ನೂ ವೈಧಿಕತೆಯ ತನ್ನ ಸೈದ್ಧಾಂತಿಕತೆಗೆ ಸೆಳೆಯುವ, ಪ್ರಭಾವಿಸುವ ಮಟ್ಟಕ್ಕೆ ಹೋಗಿರುವುದೂ ಗಮನಾರ್ಹ.

ವಿಜಯನಗರ ಸಾಮ್ರಾಟರ ಅಧೀನದಲ್ಲಿನ ಪಾಳೇಗಾರನಾಗಿದ್ದ ಕೆಂಪೇಗೌಡ ರವರು ಅಂದಿನ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ ಇದ್ದ ಅವಕಾಶಗಳನ್ನು ಗ್ರಹಿಸಿ ಬೆಂಗಳೂರು ನಗರಕ್ಕೆ ಅಸ್ಥಿಭಾರ ಹಾಕಿ, ವಿಸ್ತರಿಸುವ ಕ್ಷಿತಿಜಗಳನ್ನೂ ನೀಡಿದ ದೂರಾಲೋಚನೆಯ ಮುತ್ಸದ್ದಿ. ಇಂದು ಬೆಂಗಳೂರು ಗೌಡರ 'ಕನಸಿನ' ಗಡಿಗಳನ್ನೂ ದಾಟಿ ಅಂದು ಊಹಿಸಲಾರದಷ್ಟು ಮುಂದಕ್ಕೆ ಬೆಳೆದಿರುವಲ್ಲಿ ಆಧುನಿಕತೆಯನ್ನು ಕಾಲದಿಂದ ಕಾಲಕ್ಕೆ ಮೈಗೂಡಿಸಿಕೊಂಡಿರುವುದು ಮತ್ತು ಆಯಾ ಕಾಲದಲ್ಲಿ ಆಳಿದ ಅರಸರು, ಪ್ರಜಾಪ್ರತಿನಿಧಿಗಳ ಕೊಡುಗೆ ಅಪಾರವಿದೆ. ಈ ಪ್ರಕ್ರಿಯೆಯಲ್ಲಿ ಕೆಂಪೇಗೌಡರನ್ನೂ ಒಳಗೊಂಡು ಯಾವುದೇ ಆಡಳಿತಗಾರರನ್ನು ಜಾತಿಯ ಜೊತೆ ನಂಟು ಹಾಕುವುದು ಸರಿಯಲ್ಲ. ಅದು ಅವರಿಗೆ ಮಾಡುವ ಅವಮಾನ. ಕೆಂಪೇಗೌಡರ ಬಳಿಕ ಬೆಂಗಳೂರು ಒಳಗೊಂಡು ಇಡೀ ಈ ದಕ್ಷಿಣ ಕರ್ನಾಟಕ ಬೆಳೆಯುವಲ್ಲಿ ಹೈದರಾಲಿ, ಟಿಪ್ಪು ಸುಲ್ತಾನ್, ಮೈಸೂರಿನ ಅರಸರ ಕೊಡುಗೆಗಳು ಅತ್ಯಧಿಕವಿದೆ. ಹಾಗೆಯೇ ವಸಾಹತುಶಾಹಿ ಆಡಳಿತದಲ್ಲಿ ಬ್ರಿಟೀಷರ ಪಾಲು ನಗಣ್ಯವಲ್ಲ.

ಭಾರತ ಸ್ವತಂತ್ರ ಪಡೆದ ನಂತರ ನಮ್ಮ ಪ್ರಜಾಸತ್ತಾತ್ಮಕ ಗಣರಾಜ್ಯದ ಆಧುನಿಕ ಸರಕಾರ ಪ್ರಧಾನಿ ಪಂ.ಜವಹರಲಾಲ್ ನೆಹರೂ, ಮುಂತಾದವರ ಅನುಪಮ ಕೊಡುಗೆಗಳೂ ಇವೆ. ಇವನ್ನೆಲ್ಲಾ ಮರೆಸುವ ಪ್ರಯತ್ನ ಮೇಲಾಗಿ ಬೆಂಗಳೂರು ನಿಜಕ್ಕೂ ಕಟ್ಟಿದವರು ಶ್ರಮಿಕರು. ಆದರೆ ಇವರನ್ನೆಲ್ಲೂ ನೆನೆಯುವುದಿಲ್ಲ. ಆದರೆ ಬಿಜೆಪಿ ಇವನ್ನೆಲ್ಲವನ್ನೂ ಗೌಣ ಮಾಡಿ ಉಳಿದವರನ್ನೆಲ್ಲಾ ಮರೆಗೆ ಸರಿಸುವ ಉದ್ದೇಶ ಸಂಕುಚಿತವಾದೀ ಚುನಾವಣಾ ರಾಜಕಾರಣವೇ ಆಗಿದೆ. ತನ್ನ ಈ ಉದ್ದೇಶಕ್ಕೆ ಸರಕಾರದ ಹಣವನ್ನು ಅದಕ್ಕಾಗಿ ವಿನಿಯೋಗಿಸಿದ್ದು ಖಂಡನೀಯ.

ಇಂತಹ ಪ್ರತಿಮೆಗಳನ್ನೇನೋ ಸ್ಥಾಪನೆ ಮಾಡುತ್ತಾರೆ. ಆದರೆ ಅವರ ವಿಚಾರಧಾರೆಗಳನ್ನು ಮರೆಯುತ್ತಾರೆ ಅಥವಾ ಅದಕ್ಕೆ ತದ್ವಿರುದ್ಧ ನಡೆಯುವುದು ಹೊಸದೇನಲ್ಲ. ಬಿಜೆಪಿ ಸಂಘ ಪರಿವಾರ ಇಂತಹ ಪ್ರತಿಮೆಗಳು, ಸ್ಥಾವರಗಳ ನಿರ್ಮಾಣದಲ್ಲಿ ಮುಂದೆ ಇರುತ್ತದೆ. ಒಂದು ಪ್ರತಿಮೆಗೆ ಒಂದು ಅಸ್ಮಿತತೆ, ಒಂದು ಅಸ್ಮಿತತೆಗೆ ಪ್ರತಿಮೆಯ ಸೃಷ್ಟಿ ಅದರ ಸೈದ್ಧಾಂತಿಕ, ರಾಜಕೀಯ ತಂತ್ರಕ್ಕೆ ಸರಿ ಹೊಂದುತ್ತದೆ. ವ್ಯಕ್ತಿಗಳೊಂದಿಗೆ ಸೃಷ್ಟಿಗೊಳ್ಳುವ ಜಾತಿ, ಮತಧರ್ಮದಂತಹ ಒಂದು ಅಸ್ಮಿತತೆ ದುರ್ಬಳಕೆ ಮಾಡಿಕೊಳ್ಳಲು ಸುಲಭ ಹಾದಿ ಮಾಡಿ ಕೊಡುತ್ತದೆ.

ಇಂತಹ ಅಸ್ಮಿತತೆಗಳು ಇತರರಲ್ಲೂ ಇಲ್ಲವೆಂದೇನಲ್ಲ. ಮೈಸೂರಿನಲ್ಲಿ ಟಿಪ್ಪು ಪುಟ 5 ಕ್ಕೆ

ಜಾರಬಾರದ ಹೇಳಿಕೆಗಳು

ಈ ವಾರ

ಎಸ್.ವೈ. ಗುರುಶಾಂತ್

ಕೆ.ಪಿ.ಸಿ.ಸಿ. ಕಾರ್ಯಾಧ್ಯಕ್ಷ, ಮಾಜಿ ಸಚಿವ ಸತೀಶ ಜಾರಕಿಹೊಳಿ ಯವರು ಆಡಿದ ಒಂದು ಮಾತು ಸಂಘಪರಿವಾರ ಬಾಯಿಗೆ 'ರಸಗವಳ' ಆಗಿದೆ. ಬೆಳಗಾವಿ ಜಿಲ್ಲೆಯಲ್ಲಿ 'ಮಾನವ ಬಂಧುತ್ವ ವೇದಿಕೆ'ಯ ಕಾರ್ಯಕ್ರಮವೊಂದರಲ್ಲಿ 'ಹಿಂದು' ಶಬ್ದದ ಉತ್ಪತ್ತಿ, ಚಾರಿತ್ರಿಕವಾಗಿ ವಿವಿಧ ಕಾಲಘಟ್ಟಗಳಲ್ಲಿ ಅದು ಬಳಕೆಯಾದ ಬಗೆ, ಅದರ ಅರ್ಥ ಹಾಗೂ ಅನರ್ಥಗಳ ಕುರಿತಾಗಿ ಆಡಿದ ಮಾತು ಅವರ ಮೇಲಿನ ಧಾಳಿಗೆ ಕಾರಣವಾಗಿದೆ. ಅದು ಚರ್ಚೆಯ ವಸ್ತುವಾಗಿಯಾಗಲೀ ಅಥವಾ ವ್ಯಕ್ತಿಗತ ನೆಲೆಗೆ ನಿಲ್ಲದೇ ಕಾಂಗ್ರೆಸ್ ಪಕ್ಷಕ್ಕೂ ಸುತ್ತಲಾಗಿದೆ. ಹಾಗೆ ಮಾಡುವುದರಿಂದ ಮಾತ್ರವೇ ತನಗೆ ಲಾಭ ಎನ್ನುವುದು ಚೆನ್ನಾಗಿ ಗೊತ್ತಿರುವ ಬಿಜೆಪಿ ಕಾಂಗ್ರೆಸ್ಸಿನ ಇತರೆ ನಾಯಕರನ್ನೂ ಆರೋಪಿಸಿ ವಿವಾದಕ್ಕೆ ಎಳೆದುಕೊಳ್ಳಲೂ ನೋಡುತ್ತಿದೆ. ಹೀಗಾಗಿ ಅದು ಯಾವ ಚಾರಿತ್ರಿಕ ದಾಖಲೆ, ತರ್ಕ ವಾದಗಳ ವಿವೇಚನೆಗೆ ಆಸ್ಪದ ನೀಡದೇ ಇಡೀ ಹಿಂದೂಗಳನ್ನೇ ಅವಮಾನಿಸಲಾಗಿದೆ ಎಂದೂ ಬಾವೋದ್ರಿಕ್ತಗೊಳಿಸಲು ಅಬ್ಬರಿಸುತ್ತಿದೆ. ಇದಕ್ಕಾಗಿಯೇ ಕಾದು ಕುಳಿತಿರುವ ಮುತಾಲಿಕ, ಸೂಲಿಬೆಲೆ, ಪ್ರತಾಪಸಿಂಹ, ಯತ್ನಾಳ, ಯವರಂತಹ ನಾಗರ ನಾಲಿಗೆಯ 'ದ್ವೇಷ ಭಕ್ತ'ರು, ಪದವಿ ಮತ್ತು ಪದಾರ್ಥಗಳ ಜತನದಲ್ಲಿರುವ ಮುಖ್ಯಮಂತ್ರಿ ಬೊಮ್ಮಾಯಿ ಯವರು ತಮಗೆ ವಹಿಸಿದ ಕೆಲಸವನ್ನು ಮಾಡುತ್ತಿರುವ ಬಗ್ಗೆ 'ಕೇಶವ ಕೃಪಾ'ದಲ್ಲಿ 'ಗುತ್ತಿಗೆಯ ಲೈಸನ್ಸ್ 'ನವೀಕರಿಸಿಕೊಳ್ಳುತ್ತಿದ್ದಾರೆ.

ಜಾರಕಿಹೊಳಿ ಯವರ ಹೇಳಿಕೆ ತರಬಹುದಾದ ಮತಗಳ ಡ್ಯಾಮೇಜ್ ಬಗ್ಗೆ ಬೆಚ್ಚಿ ಬಿದ್ದ ಕಾಂಗ್ರೆಸ್ ಪಕ್ಷ ಬಿಜೆಪಿಯವರಿಗಿಂತಲೂ ಮೊದಲು 'ಖಂಡಿಸಿ' ಅಂತರ ಕಾಯ್ದುಕೊಳ್ಳಲು ಮುಂದಾಯಿತು. ಬಿಜೆಪಿ ಇದನ್ನು ಹೇಗೆಲ್ಲಾ ದುರ್ಬಳಕೆ ಮಾಡಬಲ್ಲದು ಎಂಬುದರ ಪ್ರಾಯೋಗಿಕ ಅಂದಾಜಿಲ್ಲದೇ ಮುಗ್ಧವಾಗಿರಲು ಸಾಧ್ಯವಿಲ್ಲ ಎನ್ನುವುದು ನಿಜ. ಆದರೆ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ರವರು ಹಿಂದು ಶಬ್ದ ಮತ್ತು ಧರ್ಮ, ಧರ್ಮಾಚರಣೆ ಮುಂತಾದವುಗಳ ಬಗ್ಗೆ ಮಾಡಿದ ವ್ಯಾಖ್ಯಾನ 'ವೇ ಚಿತೋಹಾರಿ'! ತಮ್ಮ ಅನುಯಾಯಿ ಹೇಳಿಕೆಯ ಬಗ್ಗೆ ಅವರದ್ದೇನೂ ಹೇಳದೇ ಕಾಂಗ್ರೆಸ್ ರಾಜ್ಯ ಉಸ್ತುವಾರಿ ಸುರ್ಜೇವಾಲಾ ಹೇಳಿಕೆಯತ್ತ ತೋರು ಬೆರಳು ತೋರಿಸಿ ಸಿದ್ಧರಾಮಯ್ಯನವರು ಸುಮ್ಮನಾಗಿದ್ದಾರೆ. ಬಹುಶಃ ಅದಕ್ಕಿಂತಲೂ ಹೆಚ್ಚು ಹೇಳಲು, ಮಾಡಲು ಕಷ್ಟ ಸಾಧ್ಯವಿರಬಹುದು. ಹೀಗೆ ಒಟ್ಟು ಪ್ರಕರಣದ ರಾಜಕೀಯ ದುರ್ಬಳಕೆ, ಸ್ವಪಕ್ಷದಲ್ಲಿನ ಸನ್ನಿವೇಶ ಸೂಕ್ಷ್ಮತೆ, ಮಿತಿಗಳನ್ನು, ಒತ್ತಡಗಳನ್ನು ಒಬ್ಬ ಸಾಮಾಜಿಕ ಚಿಂತಕನಂತಲ್ಲದೇ ರಾಜಕೀಯ ನಾಯಕನಾಗಿರುವ ಸತೀಶ ಜಾರಕಿಹೊಳಿ ಯವರು ಅರಿತುಕೊಂಡರು. ತಾವು ಆಡಿದ ಮಾತು ತಿರುಚುತ್ತಿರುವುದನ್ನು ಖಂಡಿಸುತ್ತಾ, ಅಪಾರ್ಥಗೊಂಡು ಯಾರಿಗಾದರೂ ನೋವುಂಟು ಮಾಡಿದ ಬಗ್ಗೆ ವಿಷಾದ ವ್ಯಕ್ತ ಪಡಿಸಿದ್ದಾರೆ. ತಮ್ಮ ಅಭಿಪ್ರಾಯಕ್ಕೆ ದಾಖಲೆಗಳನ್ನು ನೀಡಲು, ವಿಚಾರಣೆ ನಡೆಸಲು ಕೋರಿ ಮುಖ್ಯಮಂತ್ರಿಗಳಿಗೆ ಪತ್ರವನ್ನೂ ಬರೆದಿದ್ದಾರೆ. ವಿಚಾರಣೆಗೆ ಆದೇಶಿಸುವುದರ ಔಚಿತ್ಯವನ್ನು ಮುಖ್ಯಮಂತ್ರಿ ನಿರಾಕರಿಸಿದ್ದಾರೆ. ಅಕಾಡೆಮಿಕ್ ಔಚಿತ್ಯವನ್ನು ಕಟ್ಟಿಕೊಂಡು ಅವರಿಗೇನಾಗಬೇಕಿದೆ?

ಸತೀಶ ಜಾರಕಿಹೊಳಿ ಯವರು ಒಬ್ಬ ಅನುಭವಿ ಹಿರಿಯ ರಾಜಕಾರಣಿ. ಜನ ಬೆಂಬಲವುಳ್ಳವರೂ ಕೂಡ. ಹಾಗೆ ಒಬ್ಬ ಉದ್ಯಮಿ. ಮೇಲಾಗಿ ಸಾಮಾಜಿಕ ಚಿಂತನೆ, ಕಳಕಳಿಯುಳ್ಳ ಕಾರ್ಯಕರ್ತ. ಇಂದಿನ ರಾಜಕೀಯ ಉದ್ಯಮದ ವಾತಾವರಣ ದಲ್ಲಿಯೂ ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವದ ಬೆಳೆ ಬೆಳೆಯಲು ತಮ್ಮ ಭಾಗಶಃ ಸಮಯ, ಸಂಪನ್ಮೂಲಗಳನ್ನು ವ್ಯಯಿಸುತ್ತಿರುವ ಭಿನ್ನ ರಾಜಕಾರಣಿ. ಅವರದ್ದೇ ಆಗಿರುವ ಮಾನವ ಬಂಧುತ್ವ ವೇದಿಕೆಯಲ್ಲಿ ಆಡಿದ ಒಟ್ಟು ಮಾತುಗಳ ಇಂಗಿತ ಹಿಂದುತ್ವದ ರಾಜಕಾರಣವನ್ನು ಬಯಲಿಗೆಳೆಯುವುದೇ ಆಗಿದೆ. ಉದ್ದೇಶವೇನೋ ಸರಿ, ಆದರೆ 'ಹಿಂದು' ಮತ್ತು 'ಹಿಂದುತ್ವ' ಕ್ಕಿರುವ ವ್ಯತ್ಯಾಸ ಹಾಗೂ ಹಿಂದುತ್ವದ ಮತೀಯ ರಾಜಕಾರಣವನ್ನು ಎದುರಿಸಲು ಬೇಕಾದ ಎಚ್ಚರ, ಸೂಕ್ಷ್ಮತೆಗಳು ಯಾವುದೇ ಸಾಮಾಜಿಕ ಕಾರ್ಯಕರ್ತನಿಗೆ ಸದಾ ಇರಲೇ ಬೇಕು. ಅದರಲ್ಲೂ ಒಬ್ಬ ರಾಜಕಾರಣಿ ಆಡುವ ಪ್ರತಿ ಮಾತುಗಳು, ಜನರು ಅದನ್ನು ಗ್ರಹಿಸಬಹುದಾದ ರೀತಿ, ಅಭಿಪ್ರಾಯವನ್ನು ಮನವರಿಕೆ ಮಾಡಲು ಇಲ್ಲವಾಗುವ ಮಿತಿಗಳು, ವಿರೋಧಿಗಳು ಅದನ್ನು ಬಳಸಬಲ್ಲ ಸಾಧ್ಯತೆಗಳು ಈ ಎಲ್ಲವುಗಳ ಬಗ್ಗೆ ಎಚ್ಚರದ ಜೊತೆ ಸೂಕ್ಷ್ಮತೆಗಳನ್ನೂ ಹೊಂದಿರ ಬೇಕು. ವೈಚಾರಿಕತೆ ಮೂಡಿಸುವ ಭರದಲ್ಲಿ ಹಿಂದು ಧರ್ಮವನ್ನೂ ಹಿಂದುತ್ವದೊಂದಿಗೆ ಸಮೀಕರಿಸುವಂತೆ ಸನ್ನಿವೇಶ ಸೃಷ್ಟಿಸುವುದು ಸರಿಯಲ್ಲ. ಸಂಘಪರಿವಾರಕ್ಕೆ ಬೇಕಿರುವುದೂ ಇದೇ. ಈ ಗೊಂದಲಗಳಿಂದ ಜಾರಕಿಹೊಳಿಯವರು ಮಾತ್ರವಲ್ಲ ಕಾಂಗ್ರೆಸ್ ಪಕ್ಷವೇ ಹೊರತಿಲ್ಲ. ತಾವು ಹಿಂದುಗಳ ಮತ, ಬೆಂಬಲ ಕಳೆದು ಕೊಳ್ಳಬೇಕಾದಿತೆಂದು ಹಿಂದುತ್ವವನ್ನು ಅವರದೇ ಶೈಲಿಯಲ್ಲಿ ಸ್ವಲ್ಪವಾದರೂ ಅನುಸರಿಸುತ್ತಲೇ ಇರುವುದನ್ನು ಕಾಣುತ್ತಲೇ ಇದ್ದೇವೆ. ಬಿಜೆಪಿಗಿಂತಲೂ ತಾವು ಉತ್ತಮ ಹಿಂದುಗಳೆಂದು, ಹಿಂದುತ್ವವನ್ನು ಕಾಯುವವರೆಂದೂ ಸ್ಪರ್ಧೆಗೆ ಇಳಿದು ಮೂತಿ ಸುಟ್ಟುಕೊಂಡಿರುವುದನ್ನು ಕಾಂಗ್ರೆಸ್ ನೆನಪಿಸಿಕೊಳ್ಳುವುದಿಲ್ಲ. ಇಂತಹ ಇಬ್ಬಂದಿ, ಅವಕಾಶವಾದಿ ರಾಜಕಾರಣ ಗುಜರಾತ್ ನಂತಹ ಕಡೆಗಳಲ್ಲಿ ಉಗ್ರ ಹಿಂದುತ್ವವಾದಿ ಫ್ಯಾಶಿಸ್ಟ್ ಶಕ್ತಿಗಳನ್ನು, ಬಿಜೆಪಿಯನ್ನು ಬಲಗೊಳಿಸಿದೆ.

ಜಾರಕಿಹೊಳಿಯವರ ಅಭಿಪ್ರಾಯಗಳನ್ನು ಅಕಾಡೆಮಿಕ್ ವಲಯದಲ್ಲಿ ಅಥವಾ ಶಿಬಿರಗಳಲ್ಲಿ ಚರ್ಚಿಸಬಹುದು. ತಪ್ಪೇನಿಲ್ಲ. ಆದರೆ ಮಾಧ್ಯಮದವರನ್ನೂ ಇಟ್ಟುಕೊಂಡು ಸಾರ್ವಜನಿಕವಾಗಿ ಇಂತಹ ಹೇಳಿಕೆ ನೀಡುವುದು ಅದೆಷ್ಟೇ ಸಾಧಾರಗಳಿದ್ದರೂ ಅಪಾರ್ಥಕ್ಕೆ ದುರ್ಬಳಕೆಯ ಗೊಂದಲಕ್ಕೆ ಎಡೆ ಮಾಡಬಲ್ಲದು.

ಈ ಗೊಂದಲ ನಿವಾರಣೆಯಾಗಲಿ, ಫ್ಯಾಶಿಸ್ಟ್ ಹಿಂದುತ್ವದ ಅಸಲಿ ಮುಖವನ್ನು ಜನತೆ ಇನ್ನಷ್ಟು ಹೆಚ್ಚು ಅರಿಯಲಿ.

ನಾಲ್ಕು ವರ್ಷದಲ್ಲಿ ಕಬ್ಬು ಖರೀದಿ ದರ ಕೆಜಿಗೆ ಇಪ್ಪತ್ತೈದು ಪೈಸೆ ಮಾತ್ರ ಹೆಚ್ಚಳ!

ಟಿ. ಯಶವಂತ

ರಾಜ್ಯದ ಕಬ್ಬು ಬೆಳೆಗಾರ ರೈತರು ಮತ್ತೊಮ್ಮೆ ಬೀದಿಗೆ ಇಳಿದಿದ್ದಾರೆ. ಅಫಜಲ್ ಪುರ, ಹಳಿಯಾಳ ಸೇರಿದಂತೆ ರಾಜ್ಯದ ಎಲ್ಲೆಡೆ ಕಬ್ಬು ಬೆಳೆಗಾರರ ಕೂಗು ಮಾರ್ದನಿಸುತ್ತಿದೆ. ಕಬ್ಬು ಬೆಳೆಗಾರರ ಆಕ್ರೋಶದ ಬಿಸಿಗೆ ರಾಜ್ಯದ ಹಲವೆಡೆ ಆಡಳಿತರೂಢ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ಜನ ಸಂಕಲ್ಪ ಯಾತ್ರೆಯೇ ರದ್ದುಗೊಂಡಿದೆ. ರೈತರ ಪ್ರತಿಭಟನೆ ಭಯದಿಂದ ಮಂತ್ರಿಗಳು ಹೆಚ್ಚುವರಿ ಪೊಲೀಸ್ ಭದ್ರತೆಯೊಂದಿಗೆ ಸಂಚರಿಸುತ್ತಿದ್ದಾರೆ.

ಈ ಮಧ್ಯೆ ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅಧಿಕಾರಿಗಳು, ಕಬ್ಬು ಬೆಳೆಗಾರರ ಸಂಘಟನೆ ಹಾಗೂ ಸಕ್ಕರೆ ಕಾರ್ಖಾನೆ ಮಾಲೀಕರ ಜಂಟಿ ಸಭೆ ಕರೆದು ಸಕ್ಕರೆ ಕಾರ್ಖಾನೆಗಳ ಉಪ ಉತ್ಪನ್ನಗಳ ಲಾಭಾಂಶದ ಬಗ್ಗೆ ವರದಿ ನೀಡಲು ಸಕ್ಕರೆ ನಿರ್ದೇಶನಾಲಯ ಆಯುಕ್ತರ ಅಧ್ಯಕ್ಷತೆಯಲ್ಲಿ ತಾಂತ್ರಿಕ ತಜ್ಞರ ಸಮಿತಿ ರಚಿಸಲಾಗುವುದು ಹಾಗೂ ಈ ಸಮಿತಿಯಿಂದ ಹತ್ತು ದಿನಗಳಲ್ಲಿ ವರದಿ ಪಡೆದು ಅನಂತರ ದರ ನಿರ್ಧರಿಸಲಾಗುವುದು ಎಂದು ಪ್ರಕಟಿಸಿದ್ದಾರೆ.

ಉಪ ಉತ್ಪನ್ನಗಳ ಲಾಭಾಂಶದಲ್ಲಿ ಶೇಕಡಾ 50ರಷ್ಟನ್ನು ರೈತರಿಗೆ ಪಾವತಿಸಬೇಕು ಎಂದು ಕಬ್ಬು ಬೆಳೆಗಾರರು ನ್ಯಾಯಯುತವಾಗಿ ಆಗ್ರಹಿಸುತ್ತ ಬಂದಿರುವುದು ವಾಸ್ತವವಾಗಿದ್ದರೂ ಕಬ್ಬು ಖರೀದಿ ದರಕ್ಕೆ ಇದನ್ನು ಜೋಡಿಸುವುದನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ರಾಜ್ಯದ ರೈತರು ತಮ್ಮ ಉತ್ಪಾದನಾ ವೆಚ್ಚವನ್ನು ಆಧರಿಸಿ ಎಂ.ಎಸ್ ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಶೇಕಡಾ 50 ರಷ್ಟು ಹೆಚ್ಚುವರಿ ಖರೀದಿ ದರಕ್ಕೆ ಆಗ್ರಹಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಹೀಗಿದ್ದರೂ ಉಪ ಉತ್ಪನ್ನಗಳ ಲಾಭಾಂಶದ ಅಧ್ಯಯನದ ನೆಪದಲ್ಲಿ ಖರೀದಿ ದರ ಪ್ರಕಟಿಸದೇ ರೈತರನ್ನು ವಂಚಿಸುವ ಹೀನ ಪ್ರಯತ್ನವನ್ನು ಬಿಜೆಪಿ ಸರ್ಕಾರ ನಡೆಸಿದೆ. ಇದು ಅತ್ಯಂತ ಖಂಡನೀಯ.

ಏಕೆ ಈ ಆಕ್ರೋಶ

ಕಬ್ಬು ಬೆಳೆಯ ಉತ್ಪಾದನಾ ವೆಚ್ಚ ನಿರಂತರವಾಗಿ ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ರಸಗೊಬ್ಬರ, ಡೀಸೆಲ್, ಕೀಟನಾಶಕಗಳು ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ದುಬಾರಿಯಾಗಿವೆ. ಅದೇ ಸಂದರ್ಭದಲ್ಲಿ ಕಟಾವು ಮತ್ತು ಸಾಗಾಣಿಕೆ ವೆಚ್ಚ ಕಬ್ಬು ಬೆಳೆಗಾರರನ್ನು ಗೋಳು ಹುಯ್ಯುಕೊಳ್ಳುವ ಸಾಧನವಾಗಿ ಮಾರ್ಪಟ್ಟು ಕಟಾವು ಮಾಡಲೇಬೇಕಾದ ಒತ್ತಡಕ್ಕೆ ಒಳಗಾದಂತೆಲ್ಲಾ ದರ ಏರಿಸಿ ಶೋಷಣೆಗೆ ಗುರಿಪಡಿಸಲಾಗಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಸಕ್ಕರೆ ದರದಲ್ಲಾಗುವ ಏರಿಳಿತವನ್ನು ಅನುಸರಿಸಿ ಸಕ್ಕರೆ ಕಾರ್ಖಾನೆಗಳು ತಮ್ಮ ಗರಿಷ್ಠ ಲಾಭಾಂಶವನ್ನು ಖಾತರಿಪಡಿಸಿಕೊಳ್ಳುವ ಸಲುವಾಗಿ ಕಾರ್ಖಾನೆಯನ್ನು ವಿಳಂಬವಾಗಿ ಆರಂಭಿಸುವುದು, ಕಬ್ಬು ಅರೆಯುವಲ್ಲಿ ಉದ್ದೇಶಪೂರ್ವಕ ವಿಳಂಬ ಮಾಡುವುದು, ಕರಾರು ಹಾಗೂ ಸ್ಥಳೀಯ ರೈತರ ಕಬ್ಬು ಅರೆಯುವ ಬದಲು ದೂರದ ಕಬ್ಬು ಅರೆಯಲು ಆದ್ಯತೆ ನೀಡುವುದು, ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎಫ್‌ಆರ್‌ಪಿ (ನ್ಯಾಯಯುತ ಹಾಗೂ ಲಾಭದಾಯಕ ದರ) ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಇದ್ದರೂ ಅದನ್ನು ಕೂಡ ಪಾವತಿಸದೇ ಸತಾಯಿಸುವುದು ಮತ್ತು ಈ ದರದಲ್ಲೂ ವರ್ಷಗಟ್ಟಲೆ ಬಾಕಿ ಉಳಿಸಿಕೊಳ್ಳುವುದು ಹೀಗೆ ವಿವಿಧ ರೀತಿಯಲ್ಲಿ ಕಬ್ಬು ಬೆಳೆಗಾರರಿಗೆ ಕಿರುಕುಳ ನೀಡಿ ಶೋಷಿಸುತ್ತಿವೆ. ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅಂದರೆ ಈ ಒಂಬತ್ತು ವರ್ಷಗಳಲ್ಲಿ ಕಬ್ಬಿನ ಎಫ್‌ಆರ್‌ಪಿ ದರ ಕೇವಲ ಟನ್ ಗೆ 72 ರೂ ಮಾತ್ರ ಹೆಚ್ಚಾಗಿದೆ ಮಾತ್ರವಲ್ಲ ಎಫ್‌ಆರ್‌ಪಿ ದರ ಪಾವತಿಗೆ ಇದ್ದ ಬೇಸ್ ಲೇನ್ ಅನ್ನೇ ಕಾರ್ಖಾನೆಗಳ ಮಾಲೀಕರ ದರೋಡೆಗೆ ಅನುಕೂಲವಾಗುವಂತೆ ಬದಲಾಯಿಸಲಾಗಿದೆ. ಶೇಕಡಾ 9.5 ಇಳುವರಿಗೆ ಇದ್ದ ಬೇಸ್ ಲೇನ್ (ಒಂದು ಟನ್ ಕಬ್ಬು ಅರೆದರೆ 95 ಕೆಜಿ ಸಕ್ಕರೆ ಉತ್ಪತ್ತಿ) ಅನ್ನು ಮೋದಿ ಸರ್ಕಾರ ಶೇಕಡಾ 10.25 ಕ್ಕೆ (ಒಂದು ಟನ್ ಕಬ್ಬು ಅರೆದರೆ ಒಂದು ಕ್ವಿಂಟಾಲ್ ಇಪ್ಪತ್ತೈದು ಕೆಜಿ ಸಕ್ಕರೆ ಉತ್ಪತ್ತಿ) ಬದಲಾಯಿಸಿದೆ. ಅಂದರೆ ಈ ಒಂಬತ್ತು ವರ್ಷಗಳಲ್ಲಿ ಹೆಚ್ಚಳವಾಗಿರುವ ಕನಿಷ್ಠಾತಿಕನಿಷ್ಠ ಮೊತ್ತವು ಕೂಡ ರೈತರಿಗೆ ಸಿಗದಂತೆ ಆಗಿದೆ.

ಈ ಕಳೆದ 4 ವರ್ಷಗಳ ಏರಿಕೆ ಪ್ರಮಾಣ ಪರಿಗಣಿಸಿದರೆ ಅಂದರೆ 2018–19 ರಿಂದ 2022–23 ರವರೆಗಿನ ಅವಧಿಯಲ್ಲಿ ಕಬ್ಬಿನ ಖರೀದಿ ದರ ಕೆಜಿಗೆ ಕೇವಲ ಇಪ್ಪತ್ತೈದು ಪೈಸೆ ಮಾತ್ರ ಹೆಚ್ಚಳ ಆಗಿದೆ.

ಒಂದು ಕಡೆ ರಸಗೊಬ್ಬರ, ಡೀಸೆಲ್, ಕೀಟನಾಶಕ, ಕಟಾವು, ಸಾಗಾಣಿಕೆ ವೆಚ್ಚ ನಾಗಾಲೋಟದಲ್ಲಿ ನೂರಾರು ರೂ.ಗಳ ಲೆಕ್ಕದಲ್ಲಿ ಏರಿಕೆ ಆಗುತ್ತಿದ್ದರೆ ಇನ್ನೊಂದು ಕಡೆ ಕಬ್ಬು ಖರೀದಿ ದರ ಮಾತ್ರ ಕುಂಟುತ್ತಾ, ತೆವಳುತ್ತಾ ಪೈಸೆಗಳಲ್ಲಿ ಏರಿಕೆ ದಾಖಲಿಸಿದೆ. ಈ ಅನ್ಯಾಯವೇ ಕಬ್ಬು ಬೆಳೆಗಾರರು ಆಕ್ರೋಶಗೊಳ್ಳಲು ಕಾರಣ.

ಏನಿದು ಎಫ್‌ಆರ್‌ಪಿ ಮತ್ತು ಎಸ್‌ಎಪಿ

2012ರಲ್ಲಿ ಅಸ್ತಿತ್ವಕ್ಕೆ ಬಂದ ರಂಗರಾಜನ್ ಸಮಿತಿ 2013ರಲ್ಲಿ ತನ್ನ ವರದಿ ನೀಡಿತು. ಇಡೀ ಸಕ್ಕರೆ ಉದ್ಯಮವನ್ನು ಸಂಪೂರ್ಣ ನಿಯಂತ್ರಣ ಮುಕ್ತ ಮಾಡುವ ಶಿಫಾರಸ್ಸು ಮಾಡಿದ ಈ ಸಮಿತಿ ಅದುವರೆಗೆ ಜಾರಿಯಲ್ಲಿ ಇದ್ದ ಎಸ್‌ಎಂಪಿ (ಶಾಸನಬದ್ಧ ಕನಿಷ್ಠ ದರ) ಹಾಗೂ ಎಸ್‌ಎಪಿ (ರಾಜ್ಯ ಸಲಹಾ ದರ) ಪದ್ಧತಿಯನ್ನು ರದ್ದುಪಡಿಸಿತು. ಸಕ್ಕರೆ ಮಾಲೀಕರ ಕಪಿಮುಷ್ಠಿಯಲ್ಲಿ ಇದ್ದ ಸರ್ಕಾರಗಳು ರೈತರ ವಿರೋಧವನ್ನು ಲೆಕ್ಕಿಸದೇ ರಂಗರಾಜನ್ ವರದಿಯನ್ನು ಸಂಪೂರ್ಣವಾಗಿ ಒಪ್ಪಿ ಜಾರಿ ಮಾಡಲು ಆರಂಭಿಸಿದವು. ಎಸ್‌ಎಂಪಿ ಹಾಗೂ ಎಸ್‌ಎಪಿ ಪದ್ಧತಿಯ ಬದಲಿಗೆ ಎಫ್‌ಆರ್‌ಪಿ (ನ್ಯಾಯಯುತ ಹಾಗೂ ಲಾಭದಾಯಕ ದರ) ವ್ಯವಸ್ಥೆಯನ್ನು ಜಾರಿಗೆ ತಂದವು. ಸಿಎಸಿಪಿ (ಕೃಷಿ ವೆಚ್ಚ ಮತ್ತು ದರ ಆಯೋಗ) ನಿಗದಿಪಡಿಸಿದ ಉತ್ಪಾದನಾ ವೆಚ್ಚವನ್ನು ಆಧರಿಸಿ ಎಫ್‌ಆರ್‌ಪಿ ಯನ್ನು ಕೇಂದ್ರ ಸರ್ಕಾರ ಪ್ರಕಟಿಸುತ್ತಾ ಬಂದಿದೆ. ಸಿಎಸಿಪಿಯು ಲೆಕ್ಕ ಹಾಕುವ ಉತ್ಪಾದನಾ ವೆಚ್ಚ ರೈತನ ಬಂಡವಾಳ ಮತ್ತು ಮೂಲಸೌಕರ್ಯಗಳ ಮೇಲೆ ಮಾಡಿರುವ ವೆಚ್ಚವನ್ನಾಗಲಿ ಹಾಗೂ ನಿರ್ವಹಣಾ ಶ್ರಮವನ್ನಾಗಲಿ ಒಳಗೊಳ್ಳುವುದಿಲ್ಲ. ಕೇವಲ ಆಯಾ ಸೀಸನ್ನಿನ ಕೃಷಿ ವೆಚ್ಚವನ್ನು ಮಾತ್ರ ಪರಿಗಣಿಸುತ್ತದೆ. ಈ ಕೃಷಿ ವೆಚ್ಚವೂ ಕೂಡ ಹೋಲಿಕೆಯಲ್ಲಿ ಅತ್ಯಂತ ಕಡಿಮೆ ಇರುವ ಕೃಷಿ ವೆಚ್ಚವನ್ನೇ ಸಂಪೂರ್ಣ ಆಧರಿಸಿದೆ. ಹೀಗೆ ಉತ್ಪಾದನಾ ವೆಚ್ಚದ ಲೆಕ್ಕದಲ್ಲೇ ಬಹಳ ಅನ್ಯಾಯ ಸಿಎಸಿಪಿ ಲೆಕ್ಕಾಚಾರದಲ್ಲಿ ಆಗುತ್ತಿದೆ. ಇದನ್ನು ಆಧರಿಸಿದ ಎಫ್‌ಆರ್‌ಪಿ ದರ ನ್ಯಾಯ ಮತ್ತು ಲಾಭದ ಅಣಕವಷ್ಟೇ.

ಕೇಂದ್ರ ಸರ್ಕಾರ ಎಸ್‌ಎಂಪಿ (ಶಾಸನಬದ್ಧ ಕನಿಷ್ಠ ದರ) ಪ್ರಕಟಿಸುತ್ತಿದ್ದಾಗ ಪ್ರತಿ ಕಬ್ಬು ಬೆಳೆಯುವ ರಾಜ್ಯವು ರಾಜ್ಯ ಸಲಹಾ ದರವನ್ನು ಪ್ರಕಟಿಸುತ್ತಿತ್ತು. ಇದು ಎಸ್‌ಎಂಪಿ ಗಿಂತ ಹೆಚ್ಚು ಇರುತ್ತಿತ್ತು. ಸಹಜವಾಗಿ ರೈತರು ತಮ್ಮ ಪ್ರತಿಭಟನೆಗಳ ಮೂಲಕ ಕೇಂದ್ರ ಸರ್ಕಾರಕ್ಕಿಂತ ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹಾಕುವ ಸಾಮರ್ಥ್ಯ ಹೆಚ್ಚಾಗಿರುತ್ತದೆ. ಆದರೆ ಯಾವಾಗ ಎಫ್‌ಆರ್‌ಪಿ ವ್ಯವಸ್ಥೆ ಬಂತೋ ಆಗ ರಾಜ್ಯ ಸಲಹಾ ದರ ಪ್ರಕಟಿಸುವ ಪದ್ಧತಿಯನ್ನು ಸಕ್ಕರೆ ಕಾರ್ಖಾನೆಗಳ ಲಾಬಿಗೆ ಮಣೆ ಹಾಕಿ ಕೈ ಬಿಟ್ಟವು.

ಆದರೂ ಪ್ರತಿಭಟನೆಗಳು ತೀವ್ರವಾಗಿ ನಡೆದಾಗಲೆಲ್ಲಾ ಆಗಾಗ್ಗೆ ರಾಜ್ಯ ಸಲಹಾ ದರವನ್ನು ರಾಜ್ಯ ಸರ್ಕಾರಗಳು ಪ್ರಕಟಿಸಿವೆ. ರಂಗರಾಜನ್ ಸಮಿತಿ ಶಿಫಾರಸ್ಸು ಜಾರಿಗೆ ಬಂದ ಮೇಲೆ ರಾಜ್ಯ ಸರ್ಕಾರಕ್ಕೆ ಆಗಲಿ, ಕೇಂದ್ರ ಸರ್ಕಾರಕ್ಕೆ ಆಗಲಿ ದರ ನಿಗದಿಪಡಿಸುವ ಅಧಿಕಾರ ಇಲ್ಲ ಎಂದು ಸಕ್ಕರೆ ಕಾರ್ಖಾನೆಗಳ ಮಾಲೀಕರು ತಮ್ಮ ಪ್ರಭಾವಿ ಸಂಘಟನೆ ಮೂಲಕ ಕರ್ನಾಟಕ ಹೈಕೋರ್ಟ್ ಕದ ತಟ್ಟಿದಾಗ ಮಾಲೀಕರ ವಿರುದ್ಧವಾಗಿ ತೀರ್ಪು ಬಂತು. ಈ ತೀರ್ಪಿಗೆ ಮೇಲ್ಮನವಿ ಸಲ್ಲಿಸಿದಾಗ ಸುಪ್ರೀಂ ಕೋರ್ಟ್ ನ ಸಂವಿಧಾನ ಪೀಠ ಆಗಸ್ಟ್ 2020 ರಲ್ಲಿ ಕಬ್ಬು ಖರೀದಿ ದರ ನಿಗದಿ ಮಾಡುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಹಾಗೂ ಕೇಂದ್ರ ಸರ್ಕಾರಕ್ಕೆ ಇದೆ ಎಂದು ತೀರ್ಪು ನೀಡಿತು.

ಹೀಗೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳು ರಾಜ್ಯ ಸಲಹಾ ದರ ನಿರ್ಧರಿಸುವ ರಾಜ್ಯ ಸರ್ಕಾರಗಳ ಅಧಿಕಾರವನ್ನು ಎತ್ತಿ ಹಿಡಿದಿದ್ದರೂ ತಮ್ಮ ಅಧಿಕಾರ ಚಲಾಯಿಸಲು ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸುತ್ತಿಲ್ಲ.

ಕಾರ್ಖಾನೆ ಆರಂಭಕ್ಕೂ ಮುಂಚೆ ಕಬ್ಬು ಬೆಳೆ ಉತ್ಪಾದನಾ ವೆಚ್ಚ ಆಧರಿಸಿ ರಾಜ್ಯ ಸಲಹಾ ದರವನ್ನು ನಿಗದಿಪಡಿಸುವ ಬದಲು ಉಪ ಉತ್ಪನ್ನಗಳ ಲಾಭಾಂಶ ಮತ್ತು ಕಾರ್ಖಾನೆಗಳ ರೆವಿನ್ಯೂವನ್ನು ಪರಿಗಣಿಸುವ ಬಿಜೆಪಿ ಸರ್ಕಾರದ ವರಸೆ ಕಬ್ಬು ಬೆಳೆಗಾರರಿಗೆ ಮೋಸ ಮಾಡುವ ದುರುದ್ದೇಶವನ್ನು ಹೊಂದಿರುವಂತಹದ್ದು. ಲಾಭವನ್ನು ನಷ್ಟವಾಗಿ ತೋರಿಸಿಕೊಳ್ಳುವುದು ಕಾರ್ಖಾನೆಗಳ ಮಾಲೀಕರಿಗೆ ಚೆನ್ನಾಗಿ ಗೊತ್ತು.



ರಾಜ್ಯ ಸಲಹಾ ದರ ನಿಗದಿಯನ್ನು ಯಾವುದೇ ಕಾರಣಕ್ಕೂ ಮುಂದಕ್ಕೆ ಹಾಕಬಾರದು ಮತ್ತು ಉಪ ಉತ್ಪನ್ನಗಳ ಲಾಭಾಂಶದಲ್ಲಿ ಶೇಕಡಾ 50ರಷ್ಟು ಪಾಲು ಕಬ್ಬು ಪೂರೈಸಿರುವ ರೈತರಿಗೆ ಸಿಗಬೇಕು. ಇದರಲ್ಲಿ ಯಾವ ವಂಚನೆಯನ್ನು ಕಬ್ಬು ಬೆಳೆಗಾರರು ಸಹಿಸುವುದಿಲ್ಲ.

ಈಗ ಎದ್ದಿರುವ ಹೋರಾಟವನ್ನು ಮತ್ತಷ್ಟು ಬಲಪಡಿಸಲು ಇದೇ ನವೆಂಬರ್ 28, 2022ರಂದು ಹುಬ್ಬಳ್ಳಿಯಲ್ಲಿ ಕಬ್ಬು ಬೆಳೆಗಾರರ ಸಂಘಟನೆಯ ಕಾರ್ಯಕರ್ತರ, ಬೆಳೆಗಾರರ ಸಭೆ ನಡೆಯಲಿದ್ದು ಅಖಿಲ ಭಾರತ ಕಬ್ಬು ಬೆಳೆಗಾರರ ಒಕ್ಕೂಟದ ರವೀಂದ್ರನ್ ಅವರನ್ನು ಆಹ್ವಾನಿಸಲಾಗಿದೆ.

ಸುರತ್ಕಲ್ ಟೋಲ್‌ಗೇಟ್ ತೆರವಿಗೆ ಆಗ್ರಹಿಸಿ ಧರಣಿ 15ನೇ ದಿನಕ್ಕೆ

ವರದಿ: ವಾ.ಉಚ್ಚಿಲ್



ಟೋಲ್‌ಗೇಟ್ ಹೋರಾಟ ಸಮಿತಿ ಮತ್ತು ಸಮಾನ ಮನಸ್ಕ ಸಂಘಟನೆಗಳು ಸುರತ್ಕಲ್ ಟೋಲ್‌ಗೇಟ್ ತೆರವಿಗಾಗಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ 14 ದಿನಗಳನ್ನು ಪೂರೈಸಿದೆ. ನವಂಬರ್ 10 ರಂದು ಧರಣಿಯಲ್ಲಿ ಬೀದಿಬದಿ ವ್ಯಾಪಾರಸ್ಥರು ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿ ಬೆಂಬಲ ಸೂಚಿಸಿದರು.

ಈ ಸಂದರ್ಭ ಮಾತನಾಡಿದ ಬೀದಿ ಬದಿ ವ್ಯಾಪಾರಸ್ಥರ ಸಂಘದ ಗೌರವಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅಕ್ರಮ ಟೋಲ್‌ಗೇಟ್‌ಗಳಿರುವುದನ್ನು ಒಪ್ಪಿಕೊಂಡು ಸತ್ಯವನ್ನು ಹೇಳಿದ್ದರೂ ನಮ್ಮ ಸಂಸದರು ಇದರ ತೆರವಿಗೆ ಶ್ರಮಿಸುತ್ತಿಲ್ಲ. ಸುರತ್ಕಲ್ ಸೇರಿದಂತೆ 36 ಅಕ್ರಮ ಟೋಲ್‌ಗೇಟ್‌ಗಳ ಹಣವನ್ನು ಬಿಜೆಪಿ ಒಪ್ಪಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಉತ್ಪನ್ನಗಳ ಮಾರಾಟದ ಕುರಿತು ಬೀದಿಬದಿ ವ್ಯಾಪಾರಿಗಳಿಗೆ ಸಂಸ್ಥೆಯೊಂದು 10 ದಿನಗಳ ಶಿಬಿರವನ್ನು ಆಯೋಜಿಸಿತ್ತು. ಆದರೆ ಅಲ್ಲಿನ ಶಾಸಕ ವೇದವ್ಯಾಸ ಕಾಮತ್ ಅಧಿಕಾರವನ್ನು ದುರುಪಯೋಗಪಡಿಸಿ ಅದನ್ನು ಮೂರೇ ದಿನಕ್ಕೆ ನಿಲ್ಲಿಸಿದ್ದಾರೆ. ಸಭೆಯೊಂದರಲ್ಲಿ ಬೀದಿ ಬದಿ ವ್ಯಾಪಾರಿಗಳ ಸಂಘದ ಕಾರ್ಯಕರ್ತರನ್ನು ಬೈದು, ನಿಂದಿಸಿ ನಿಮಗೆ ಯಾಕೆ ಟೋಲ್‌ಗೇಟ್ ಉಸಾಬರಿ ಎಂದು ಕೇಳಿದ್ದರು. ಇದಕ್ಕೆ ಅದೇ ಸಂದರ್ಭದಲ್ಲಿ ಕಾರ್ಯಕರ್ತರು ತಕ್ಕ ಉತ್ತರವನ್ನು ನೀಡಿದ್ದು, ಟೋಲ್‌ಗೇಟ್ ಅಕ್ರಮವಾಗಿರುವ ಕಾರಣ ಅದರ ವಿರುದ್ಧ ಹೋರಾಟ ನಡೆಸಿಯೇ ಸಿದ್ಧ ಎಂದು ಶಾಸಕರಿಗೆ ಉತ್ತರಿಸಿದ್ದೇವೆ ಎಂದರು.

ಬ್ಲಾಕ್ ಕಾಂಗ್ರೆಸ್ ಮುಖಂಡ ಮಹಮ್ಮದ್ ಕೂಳೂರು, ಮಾಜಿ ಸಚಿವ ಅಭಯಚಂದ್ರ ಜೈನ್, ಹೋರಾಟ ಸಮಿತಿಯ ಮುನೀರ್ ಕಾಟಿಪಳ್ಳ, ಸಹ ಸಂಚಾಲಕ ರಾಘವೇಂದ್ರ ರಾವ್ ಹಾಗೂ ವಿವಿಧ ಸಂಘಟನೆಗಳ ಪ್ರಮುಖರು ಮಾತನಾಡಿದರು.

ಸಾಮಾನ್ಯರ ಕೈಗೆಟುಕದ 'ವಂದೇ ಭಾರತ್' ರೈಲು

ಮೋದಿ ಭರವಸೆ ಕೊಟ್ಟಿದ್ದು ಅತಿ ವೇಗದ ಬುಲೆಟ್ ರೈಲು. ಬಂದದ್ದು ಸೆಮಿ ಹೈ ಸ್ಪೀಡ್ ಹೊಂದಿರುವ 'ವಂದೇ ಭಾರತ್' ರೈಲು!

ಸಿ.ಸಿದ್ಧಯ್ಯ



ದಕ್ಷಿಣ ಭಾರತದ ಮೊದಲ ಚೆನ್ನೈ–ಬೆಂಗಳೂರು–ಮೈಸೂರು ಮಾರ್ಗದ 'ವಂದೇ ಭಾರತ್' ರೈಲಿಗೆ ನವೆಂಬರ್ 11ರಂದು ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಅಧಿಕೃತ ಚಾಲನೆ ನೀಡಿದರು. ದೇಶದಾದ್ಯಂತ ಈಗ ನಾಲ್ಕು ಮಾರ್ಗಗಳಲ್ಲಿ ಒಟ್ಟು ಎಂಟು ವಂದೇ ಭಾರತ್ ರೈಲುಗಳು ಸಂಚರಿಸುತ್ತಿವೆ. ಇವು ಗಂಟೆಗೆ 160 ಕಿಮೀ ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆಯಂತೆ. (ಕೆಲವು ಮಾದರಿ ಕಾರುಗಳೂ ಗಂಟೆಗೆ 150 ರಿಂದ 200 ಕಿಮಿ ವೇಗದಲ್ಲಿ ಓಡುವ ಸಾಮರ್ಥ್ಯ ಹೊಂದಿವೆ. ಆದರೆ ನಮ್ಮಲ್ಲಿನ ರಸ್ತೆಗಳು ಅದಕ್ಕೆ ಪೂರಕವಾಗಿ ನಿರ್ಮಾಣಗೊಂಡಿಲ್ಲ) ಆದರೆ ಈ ರೈಲುಗಳನ್ನು ದೇಶದ ಎಲ್ಲಾ ಮಾರ್ಗಗಳಲ್ಲೂ ಸರಾಸರಿ 70 ಕಿಮೀ ವೇಗದಲ್ಲಿ ಓಡಿಸಲಾಗುತ್ತಿದೆ. ನಮ್ಮಲ್ಲಿ ವಂದೇ ಭಾರತ್ ರೈಲುಗಳನ್ನು ವೇಗವಾಗಿ ಓಡಿಸಲು ಸಾಧ್ಯವಿರುವಂತಹ ಹಳಿ, ನಿಲ್ದಾಣ ಮತ್ತು ಸಿಗ್ನಲಿಂಗ್ ವ್ಯವಸ್ಥೆಯಂತಹ ಮೂಲಸೌಕರ್ಯಗಳು ಇಲ್ಲದೆ ಇರುವುದೇ ಇವು ವೇಗವಾಗಿ ಓಡದಿರಲು ಪ್ರಮುಖ ಕಾರಣ. ಈ ಎಂಟೂ ರೈಲುಗಳಲ್ಲಿ ಯಾವೊಂದರ ಸರಾಸರಿ ವೇಗವೂ ಗಂಟೆಗೆ 100 ಕಿ.ಮೀ. ಮೀರುವುದಿಲ್ಲ. ಭಾರತದಲ್ಲಿ ಇಂತಹ 400 ಕ್ಕೂ ಹೆಚ್ಚು ರೈಲುಗಳು ಬರಲಿವೆ ಎನ್ನಲಾಗುತ್ತಿದೆ.

ದೆಹಲಿ–ವಾರಾಣಸಿ ಮಧ್ಯೆ ಸಂಚರಿಸುವ ವಂದೇ ಭಾರತ್ ರೈಲು ಮಾತ್ರ ಕೆಲ ನಿಲ್ದಾಣಗಳ ಮಧ್ಯೆ ಗಂಟೆಗೆ 130 ಕಿ.ಮೀ. ವೇಗದಲ್ಲಿ ಓಡುತ್ತದೆ. ಇದರ ಸರಾಸರಿ ವೇಗ 95 ಕಿ.ಮೀ. ಮಾತ್ರ. ಇದು ದೇಶದಲ್ಲಿ ಈಗಾಗಲೇ ಇರುವ ಸೆಮಿಹೈಸ್ಪೀಡ್ ರೈಲು, ದೆಹಲಿ–ಆಗ್ರಾ ಗತಿಮಾನ್ ಎಕ್ಸ್‌ಪ್ರೆಸ್‌ನ (ಗಂಟೆಗೆ 160 ಕಿ.ಮೀ. ಗರಿಷ್ಠ ವೇಗ) ವೇಗಕ್ಕಿಂತ ಕಡಿಮೆ.

497 ಕಿಮೀ ಉದ್ದದ ಚೆನ್ನೈ–ಬೆಂಗಳೂರು–ಮೈಸೂರು ಮಾರ್ಗದಲ್ಲಿ ಈಗಾಗಲೇ ಸಂಚರಿಸುತ್ತಿರುವ ಶತಾಬ್ದಿ ರೈಲು 7 ಗಂಟೆ ತೆಗೆದುಕೊಂಡರೆ, ಸಾಮಾನ್ಯ ಎಕ್ಸ್‌ಪ್ರೆಸ್ ರೈಲುಗಳು 8–9 ಗಂಟೆ ತೆಗೆದುಕೊಳ್ಳುತ್ತವೆ. ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು 6.30 ಗಂಟೆ ತೆಗೆದುಕೊಳ್ಳುತ್ತದೆ. ಅಂದರೆ, ಶತಾಬ್ದಿ ಎಕ್ಸ್‌ಪ್ರೆಸ್ ಗಿಂತ ವಂದೇ ಭಾರತ್ ಎಕ್ಸ್‌ಪ್ರೆಸ್ ನಲ್ಲಿ ಪ್ರಯಾಣಿಸಿದರೆ ಚೆನ್ನೈನಿಂದ ಮೈಸೂರಿಗೆ ಅರ್ಧ ಗಂಟೆ ಮಾತ್ರ ಕಡಿಮೆಯಾಗುತ್ತದೆ. ಶತಾಬ್ದಿಯ ಸರಾಸರಿ ವೇಗಕ್ಕಿಂತ, ವಂದೇ ಭಾರತ್ ರೈಲಿನ ಸರಾಸರಿ ವೇಗ 2 ಕಿ.ಮೀ.ನಷ್ಟು ಮಾತ್ರ ಹೆಚ್ಚು. ಶತಾಬ್ದಿಗಿಂತಲೂ ಹೆಚ್ಚಿನ ವೇಗವನ್ನು ನೀಡದ ಮತ್ತು ಪ್ರಯಾಣದ ಅವಧಿಯನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡದ ಈ ವಂದೇ ಭಾರತ್ ಎಕ್ಸ್‌ಪ್ರೆಸ್‌ನಿಂದ ಪ್ರಯಾಣಿಕರಿಗೆ ಹೆಚ್ಚೇನೂ ಉಪಯೋಗವಿಲ್ಲ.

160 ಕಿಮೀ ವೇಗದಲ್ಲಿ ಓಡುವ ಸಾಮರ್ಥ್ಯವಿದ್ದರೂ ವಂದೇ ಭಾರತ್ ರೈಲುಗಳನ್ನು ಕಡಿಮೆ ವೇಗದಲ್ಲಿ ಓಡಿಸುತ್ತಿರುವುದಕ್ಕೆ ರೈಲ್ವೆ ಇಲಾಖೆಯ ತಜ್ಞರು ಹಲವು ಕಾರಣಗಳನ್ನು ಪಟ್ಟಿ ಮಾಡಿದ್ದಾರೆ. ಹೀಗೆ ಪಟ್ಟಿ ಮಾಡಲಾದ ತೊಡಕುಗಳನ್ನು ನಿವಾರಿಸದೇ ಇದ್ದರೆ, ಈ ರೈಲುಗಳನ್ನು ವೇಗವಾಗಿ ಓಡಿಸಲು ಸಾಧ್ಯವಿಲ್ಲ.

ಮೈಸೂರು–ಬೆಂಗಳೂರು ನಡುವಿನ ದರ ದುಬಾರಿ:

ಪ್ರಯಾಣಿಕರು ಮೈಸೂರು ಮತ್ತು ಬೆಂಗಳೂರಿನ ನಡುವೆ 35 ರೂಪಾಯಿ ಟಿಕೇಟ್ ಖರೀದಿಸಿ ಪ್ಯಾಸೆಂಜರ್ ರೈಲು ಹತ್ತಿ ಮೂರು ಗಂಟೆಯಲ್ಲಿ ತಲುಪಬಹುದು. 80 ರಿಂದ 95 ರೂಪಾಯಿವರೆಗೆ ಹಣ ಕೊಟ್ಟು ಕಾಚಿಗುಡ ಎಕ್ಸ್‌ಪ್ರೆಸ್, ರಾಜ್ಯ ರಾಣಿ ಎಕ್ಸ್‌ಪ್ರೆಸ್ ಮುಂತಾದ ಎಕ್ಸ್‌ಪ್ರೆಸ್ ರೈಲುಗಳಲ್ಲಿ ಪ್ರಯಾಣಿಸಿದರೆ ಎರಡೂವರೆ ಗಂಟೆಯಲ್ಲಿ ಈ ಅಂತರವನ್ನು ತಲುಪಬಹುದು. ಅಬ್ಬರದ ಪ್ರಚಾರದ ಮೂಲಕ ನಮ್ಮ ಪ್ರಧಾನಿ ಮೋದಿ ಅವರು ಉದ್ಘಾಟನೆ ಮಾಡಿದ ವಂದೇ ಭಾರತ್ ರೈಲು ಮೈಸೂರಿನಿಂದ ಬೆಂಗಳೂರು ತಲುಪಲು ಒಂದು ಗಂಟೆ ಐವತ್ತು ನಿಮಿಷ ಬೇಕಾಗುತ್ತದೆ. ಈ ಮಾರ್ಗದಲ್ಲಿ ಈಗಾಗಲೇ ಸಿರಿವಂತರಿಗೆ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನ ಸಂಚಾರವಿದೆ. ವಂದೇ ಭಾರತ್ ರೈಲಿನಲ್ಲಿ ಪ್ರಯಾಣಿಸಿದರೆ ಶತಾಬ್ದಿ ಪ್ರಯಾಣಕ್ಕಿಂತ 10 ನಿಮಿಷಗಳ ಉಳಿತಾಯವಷ್ಟೆ. ವಂದೇ ಭಾರತ್ ರೈಲಿನ ಟಿಕೆಟ್ ದರ 368 ಮತ್ತು 768 ರೂಪಾಯಿಗಳಂತೆ. ಸಿರಿವಂತರು ಇಷ್ಟಪಡುವ ಎಕಾನಮಿ ಕ್ಲಾಸ್ ಮತ್ತು ಎಕ್ಸಿಕ್ಯೂಟಿವ್ ಕ್ಲಾಸ್ ಮಾತ್ರ. ಈ ಎರಡೂ ಎಕ್ಸ್ ಪ್ರೆಸ್ ರೈಲುಗಳಲ್ಲಿ ಸಾಮಾನ್ಯರ ಕೈಗೆಟುಕುವ ದರದ ಸಾಮಾನ್ಯ ದರ್ಜೆಯ ಬೋಗಿಗಳಿಲ್ಲ. ಸಾಮಾನ್ಯರ ಕೈಗೆಟುಕದ, ಸಿರಿವಂತರಿಗಾಗಿ ತಂದಿರುವ ಐಷಾರಾಮಿ ವ್ಯವಸ್ಥೆ ಹೊಂದಿರುವ ವಂದೇ ಭಾರತ್ ರೈಲುಗಳಿವು.

ವೇಗವಾಗಿ ಚಲಿಸಲು ಹಲವು ತೊಡಕುಗಳು:

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳನ್ನು, ಸಾಮಾನ್ಯ ಲೋಕೊಮೋಟಿವ್ ಎಂಜಿನ್ ರೈಲುಗಳನ್ನು ಓಡಿಸುವ ಮಾರ್ಗದಲ್ಲೇ ಓಡಿಸಬಹುದು. ಆದರೆ, ರೈಲುಮಾರ್ಗವು ನೇರವಾಗಿ ಇರಬೇಕು. ರೈಲುಮಾರ್ಗವು ನೇರವಾಗಿ ಇರದೇ ಇದ್ದರೆ ಮತ್ತು ತಿರುವುಗಳಿಂದ ಕೂಡಿದ್ದರೆ ಇವುಗಳನ್ನು ವೇಗವಾಗಿ ಓಡಿಸಲು ಸಾಧ್ಯವಿಲ್ಲ. ತಿರುವುಗಳಲ್ಲಿ ಈ ರೈಲುಗಳು ವೇಗವಾಗಿ ಓಡಿದರೆ, ಹಳಿತಪ್ಪುವ ಮತ್ತು ಉರುಳುವ ಅಪಾಯವಿರುತ್ತದೆ. ಈಗಾಗಲೇ ಇರುವ ಮಾರ್ಗಗಳಲ್ಲೇ ಇವು ಸಂಚರಿಸುತ್ತಿರುವುದರಿಂದ ಗರಿಷ್ಠ ವೇಗ ಸಾಧ್ಯವಾಗುತ್ತಿಲ್ಲ.

ರೈಲು ಮಾರ್ಗವು ಸಾಗುವ ಪ್ರದೇಶವು ಹಳ್ಳದಿಣ್ಣೆಗಳಿಂದ ಕೂಡಿದ್ದರೆ, ಮಾರ್ಗವೂ ಉಬ್ಬು–ತಗ್ಗಾಗಿರುತ್ತದೆ. ಅಂತಹ ಮಾರ್ಗದಲ್ಲಿ ಕಡಿಮೆ ವೇಗದ ರೈಲುಗಳು ಯಾವುದೇ ಅಪಾಯವಿಲ್ಲದೇ ಸಂಚರಿಸಬಹುದು. ಆದರೆ, ವೇಗದ ರೈಲುಗಳು ವೇಗವಾಗಿ ಸಂಚರಿಸಿದರೆ ಹಳಿತಪ್ಪುವ ಅಪಾಯವಿರುತ್ತದೆ. ಮೈಸೂರು–ಬೆಂಗಳೂರು–ಚೆನ್ನೈ ಮಾರ್ಗವೂ ಈ ರೀತಿಯ ತಿರುವು ಮತ್ತು ಉಬ್ಬು–ತಗ್ಗುಗಳಿಂದ ಕೂಡಿದೆ. ಹೀಗಾಗಿ ವಂದೇ ಭಾರತ್ ರೈಲನ್ನು ಗರಿಷ್ಠ ವೇಗದಲ್ಲಿ ಓಡಿಸಲು ಸಾಧ್ಯವಾಗುವುದಿಲ್ಲ.

ದೇಶದಲ್ಲಿರುವ ರೈಲುಮಾರ್ಗಗಳಿಗೆ ಬೇಲಿ ವ್ಯವಸ್ಥೆ ಇಲ್ಲ. ದೆಹಲಿ–ಆಗ್ರಾ ಮಧ್ಯೆ ಸಂಚರಿಸುವ ಗತಿಮಾನ್ ರೈಲಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ 90 ಕಿ.ಮೀ.ನಷ್ಟು ಅಂತರದ ಮಾರ್ಗಕ್ಕೆ ಮಾತ್ರ ಎರಡೂ ಬದಿಯಲ್ಲಿ ಬೇಲಿ ಹಾಕಲಾಗಿದೆ. ಜನರು, ಜಾನುವಾರುಗಳು ಮತ್ತು ಪ್ರಾಣಿಗಳು ಈ ಬೇಲಿಯನ್ನು ದಾಟಿ ಬರುವ ಸಾಧ್ಯತೆ ಇಲ್ಲದೇ ಇರುವ ಕಾರಣ ರೈಲು ವೇಗವಾಗಿ ಸಂಚರಿಸಲು ಸಾಧ್ಯವಾಗುತ್ತದೆ. ಆದರೆ, ವಂದೇ ಭಾರತ್ ರೈಲುಗಳು ಸಂಚರಿಸುತ್ತಿರುವ ಮಾರ್ಗಗಳಲ್ಲಿ ಇಂತಹ ಬೇಲಿಯ ವ್ಯವಸ್ಥೆ ಇಲ್ಲ. ಬೇಲಿ ವ್ಯವಸ್ಥೆ ಇಲ್ಲದೇ ಇರುವ ಮಾರ್ಗಗಳಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ವೇಗಕ್ಕೆ ನಿರ್ಬಂಧ ಹೇರಲಾಗಿದೆ. ಕಳೆದ ಒಂದು ತಿಂಗಳ ಅವಧಿಯಲ್ಲಿ ಜಾನುವಾರುಗಳಿಗೆ ವಂದೇ ಭಾರತ್ ರೈಲುಗಳು ಡಿಕ್ಕಿ ಹೊಡೆದ ಮೂರು ಪ್ರಕರಣಗಳು ವರದಿಯಾಗಿದ್ದವು.

ದೇಶದ ರೈಲು ಮಾರ್ಗಗಳು ಹಾದುಹೋಗುವ ಪ್ರಮುಖ ನಿಲ್ದಾಣಗಳಲ್ಲಿ ರೈಲುಗಳು ಬಹುತೇಕ ಸಂದರ್ಭದಲ್ಲಿ ಹಳಿ ಬದಲಾವಣೆ ಮಾಡಬೇಕಾಗುತ್ತದೆ. ಬಹುತೇಕ ಸಂದರ್ಭದಲ್ಲಿ ಹಳಿ ಬದಲಾವಣೆ ಮಾಡುವಾಗ ರೈಲುಗಳ ವೇಗ ಗಂಟೆಗೆ 10 ಕಿ.ಮೀ. ಗಿಂತಲೂ ಕಡಿಮೆ ಇರಬೇಕು. ವಂದೇ ಭಾರತ್ ರೈಲುಗಳೂ ಈ ನಿಲ್ದಾಣಗಳನ್ನು ಹಾದು ಹೋಗಬೇಕಿರುವ ಕಾರಣ, ಅವೂ ಸಹ ಕಡಿಮೆ ವೇಗದಲ್ಲೇ ಹಳಿ ಬದಲಾವಣೆ ಮಾಡಬೇಕಾಗುತ್ತದೆ. ಹಳಿ ಬದಲಾವಣೆ ಮಾಡದೆಯೇ ನಿಲ್ದಾಣಗಳನ್ನು ಹಾದುಹೋಗುವಂತೆ ವ್ಯವಸ್ಥೆ ಮಾಡಿದರಷ್ಟೇ, ಈ ರೈಲುಗಳು ಉತ್ತಮ ವೇಗವನ್ನು ಕಾಯ್ದುಕೊಳ್ಳಲು ಸಾಧ್ಯ. ಕಡಿಮೆ ವೇಗದ ರೈಲುಗಳನ್ನು ಹಿಂದಿಕ್ಕಿ ಹೋಗಲೂ ಸಾಧ್ಯವಿಲ್ಲದೇ ಇರುವ ಕಾರಣ ವಂದೇ ಭಾರತ್ ರೈಲುಗಳು ವೇಗವನ್ನು ಕಾಯ್ದುಕೊಳ್ಳಲು ಸಾಧ್ಯವಿಲ್ಲ.

ರೈಲು ನಿಲ್ದಾಣಗಳಲ್ಲಿ ಜನರು ಒಂದು ಪ್ಲಾಟ್‌ಫಾರ್ಮ್‌ನಿಂದ ಮತ್ತೊಂದು ಪ್ಲಾಟ್‌ಫಾರ್ಮ್‌ಗೆ ಹೋಗಲು ಸಾಮಾನ್ಯವಾಗಿ ಮೇಲ್ಸೇತುವೆಯನ್ನು ನಿರ್ಮಿಸಲಾಗಿರುತ್ತದೆ. ಆದರೂ ಜನರು ಹಳಿಗಳನ್ನು ದಾಟಿಕೊಂಡೇ ಒಂದು ಪ್ಲಾಟ್‌ಫಾರ್ಮ್‌ನಿಂದ ಮತ್ತೊಂದು ಪ್ಲಾಟ್‌ಫಾರ್ಮ್‌ಗೆ ಹೋಗುವುದು ಸಾಮಾನ್ಯ. ಹೀಗಾಗಿಯೇ ರೈಲು ನಿಲ್ದಾಣವನ್ನು ಹಾದುಹೋಗುವಾಗ ರೈಲುಗಳ ವೇಗವನ್ನು ತಗ್ಗಿಸುವಂತೆ ಸೂಚಿಸಲಾಗುತ್ತದೆ. ವಂದೇ ಭಾರತ್ ಸೇರಿದಂತೆ ಎಲ್ಲಾ ಸೆಮಿ ಹೈಸ್ಪೀಡ್ ರೈಲುಗಳಿಗೂ ಇದು ಅನ್ವಯವಾಗುತ್ತದೆ. ಹೀಗಾಗಿಯೇ ವಂದೇ ಭಾರತ್ ರೈಲುಗಳೂ ಇಂತಹ ನಿಲ್ದಾಣವನ್ನು ಹಾದುಹೋಗುವಾಗ ವೇಗವನ್ನು ತಗ್ಗಿಸುತ್ತವೆ. ಈ ಕಾರಣದಿಂದ ಅವುಗಳು ಉತ್ತಮ ವೇಗ ಕಾಯ್ದುಕೊಳ್ಳಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಅವುಗಳ ಸರಾಸರಿ ವೇಗ ಕಡಿಮೆಯಾಗುತ್ತದೆ.

ಹಾಗಿದ್ದರೆ, ಇಷ್ಟೊಂದು ಪ್ರಚಾರ, ಇದೊಂದು ಮೋದಿಯವರ ದೊಡ್ಡ ಸಾಧನೆ ಎಂಬಂಥ ಮಾತುಗಳೆಲ್ಲ ಈಗಲೇ ಯಾಕೆ? ರೈಲುಗಳು 160 ಕಿಮೀ ವೇಗದಲ್ಲಿ ಚಲಿಸಲು ಅನುಕೂಲವಾದ ಮೂಲಸೌಕರ್ಯ ಒದಗಿಸಿದ ನಂತರ ಈ ರೀತಿಯ ಪ್ರಚಾರ ಮಾಡಿದ್ದರೆ ಅದಕ್ಕೊಂದು ಬೆಲೆ ಸಿಗುತ್ತಿತ್ತು.

(ಆಧಾರ: ಪ್ರಜಾವಾಣಿ, ಪಿಟಿಐ, ರೈಲ್ವೆ ಇಲಾಖೆ, ಭಾರತೀಯ ಹೈಸ್ಪೀಡ್ ರೈಲ್ ನಿಗಮ ಮೂಲಗಳಿಂದ)

ಪ್ರತಿಮೆಗಳ ಅನಾವರಣದ ರಾಜಕಾರಣ

ಪುಟ 3 ರಿಂದ

ಜಯಂತಿಯಂದು ಮಾಜಿ ಸಚಿವ, ಶಾಸಕ ತನ್ವೀರ್ ಸೇಠ್ ರವರು ಟಿಪ್ಪು ಸುಲ್ತಾನರ ಪ್ರತಿಮೆ ಸ್ಥಾಪನೆ ಮಾಡುವ ಪ್ರಕಟನೆ ಸಂಘಪರಿವಾರಕ್ಕೆ ಬಹು ದೊಡ್ಡ ಅಪರಾಧವಾಗಿ ಕಾಣುತ್ತಿದೆ. ಉಗ್ರಹಿಂದುತ್ವವಾದಿ ಪ್ರಮೋದ ಮುತಾಲಿಕ ಆಕ್ಷೇಪಿಸಿ ಅದನ್ನು ಧ್ವಂಸಗೊಳಿಸುವ ಬೆದರಿಕೆ ಹಾಕಿರುವುದು ಗಂಭೀರ ವಿಚಾರ. ಬ್ರಿಟೀಶರ ವಿರುದ್ಧ ಪ್ರಾಣ ಪಣಕ್ಕಿಟ್ಟು ಹೋರಾಡಿದ ಟಿಪ್ಪುವಿನ ಬಗ್ಗೆ ಹೋರಾಡದ ಮತ್ತು ಕೈಜೋಡಿಸಿದ್ದ ಸಂಘಪರಿವಾರಕ್ಕೆ ಸಿಟ್ಟು ಬರುವುದು ಸಹಜವೇ ಆಗಿದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಮುತಾಲಿಕರಂಥವರು ಟಿಪ್ಪು ಜಯಂತಿ ಆಚರಿಸಿದ ಹುಬ್ಬಳ್ಳಿಯ ಈದ್ಗಾ ಮೈದಾನವನ್ನು ಗೋಮೂತ್ರದಿಂದ ಶುದ್ಧಗೊಳಿಸಲು ಹೋಗಿದ್ದಕ್ಕೆ ಏನರ್ಥವಿದೆ? ಜಾತಿಯ ಮೇಲರಿಮೆ ಮತ್ತು ಅನ್ಯಮತದ್ವೇಷದ ಪ್ರಕಟನೆಯಲ್ಲವೇ? ಶುದ್ಧಗೊಳ್ಳಬೇಕಾದ್ದು ಮೈದಾನವಲ್ಲ ಮುತಾಲಿಕರಂಥವರ ಮತೋನ್ಮಾದದ ಕಲುಷಿತ ಮನಸ್ಸು, ಮೆದುಳು.

ಇಂತಹ ಚಿಂತನೆ ಮತ್ತು ಕೃತ್ಯಗಳಿಂದ ಮಹನೀಯರನ್ನು ಜನರೆದುರು ಕುಬ್ಜರನ್ನಾಗಿಸುತ್ತಾರೆ. ಆದರೆ ತಾತ್ಕಾಲಿಕವಾಗಿ ಕೆಲವರು ಪ್ರಭಾವಕ್ಕೊಳಗಾದರೂ ಇವೆಲ್ಲವನ್ನೂ ಮೀರುವ ಪ್ರಬುದ್ಧತೆ ನಮ್ಮ ನಾಡಿನ ಜನತೆಗಿದೆ.

ಪ್ರತಿಮೆಗಳನ್ನೇ ಬಳಸಿ ದ್ವೇಷ, ಅಸಹನೆ, ರಾಜಕೀಯ ದುರುದ್ದೇಶಗಳನ್ನು ಬೆಳೆಸುವುದಕ್ಕೆ ತಡೆ ಹಾಕುವುದು ಸಂಪನ್ಮೂಲಗಳ ಉಳಿತಾಯದ ಹಾಗೂ ಸಮಾಜದ ಸ್ವಾಸ್ಥ್ಯ ಕಾಯುವ ದೆಸೆಯಿಂದಲೂ ಅಗತ್ಯ. ಈಗಲೂ ಮಳೆಹಾನಿಗೀಡಾದ ಜನರಿಗೆ ಪರಿಹಾರವಿಲ್ಲ. ವಸತಿ ಹೀನತೆ, ಬೆಲೆ ಏರಿಕೆ, ನಿರುದ್ಯೋಗ, ಕೈಗಾರಿಕಾ ಉತ್ಪಾದನೆ ಕುಸಿತ ದಂತಹ ಪ್ರಶ್ನೆಗಳ ಪರಿಹಾರ ಸರಕಾರದ ಆದ್ಯತೆ ಆಗಬೇಕೇ ಹೊರತು ಸಂಕುಚಿತ ರಾಜಕಾರಣ ಅಲ್ಲ.

ಜಾಗತಿಕ ಹೂಡಿಕೆದಾರರ ಸಭೆ ಮಂತ್ರಕ್ಕಿಂತ ಉಗುಳೇ ಜಾಸ್ತಿ



ಕರ್ನಾಟಕದ ಹಿಂದಿನ ಜಾಗತಿಕ ಹೂಡಿಕೆಗಳ ಸಭೆಗಳ ಲಕ್ಷಣಗಳು– ನಂಬಲನರ್ಹ ಅಂಕಿ ಅಂಶಗಳು ಮತ್ತು ಹೂಡಿಕೆಯ ಅಪಾಯಕಾರಿ ಕೇಂದ್ರೀಕರಣಗಳು–ಈ ಬಾರಿಯೂ ಪುನರಾವರ್ತನೆಯಾಗುತ್ತಿವೆ.

ವಿ.ಶ್ರೀಧರ್ (ಮೂಲ: ದಿ ಫೆಡೆರಲ್) ಅನುವಾದ: **ಟಿ.ಸುರೇಂದ್ರರಾವ್**

ಕರ್ನಾಟಕ ರಾಜ್ಯ ಸರ್ಕಾರವು ನವಂಬರ್ 2 ರಿಂದ ಮೂರು ದಿನಗಳ ಕಾಲ ಆಯೋಜಿಸಿದ್ದ 'ಜಾಗತಿಕ ಹೂಡಿಕೆದಾರರ ಸಭೆ' (ಜಿ.ಐ.ಎಂ)ಯು ಭಾರಿ ಸಂಭ್ರಮ, ಸಡಗರ ಹಾಗೂ ಅಬ್ಬರದ ಪ್ರಚಾರದೊಂದಿಗೆ ಮುಗಿದಿದೆ. ಭರವಸೆಗಳ ಮಹಾಪೂರವೇ ಹರಿದಿದೆ. ಆದರೆ ಈ ಹಿಂದಿನ ಅಂತಹ ಹಲವಾರು ಸಭೆಗಳ ಅನುಭವಗಳನ್ನು ಪರಿಶೀಲಿಸಿದಾಗ 'ಗುಡ್ಡ ಅಗೆದು ಇಲಿ ಹಿಡಿದಂತೆ' ಎಂಬ ಗಾದೆಯಂತೆ ಆಗಲಿವೆ ಎನ್ನುವುದಕ್ಕೆ ಬೇರೆ ಪುರಾವೆಗಳು ಬೇಕಿಲ್ಲ.

ಮುಂಬರಲಿರುವ ವಿಧಾನ ಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಈ ಸಭೆ ನಡೆಯಿತು ಎನ್ನುವುದಕ್ಕೆ ಮಾನ್ಯ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಮಾಡಿದ ಉದ್ಘಾಟನಾ ಭಾಷಣವೇ ಸಾಕ್ಷಿ: 'ಡಬಲ್ ಇಂಜಿನ್ ಸರ್ಕಾರದೊಂದಿಗೆ ಅದ್ಭುತ ಕೈಗಾರಿಕಾ ಅಭಿವೃದ್ಧಿಯಾಗಲಿದೆ' ಎಂದು ಅವರು ಭರವಸೆ ನೀಡಿದ್ದಾರೆ.

ಅಂತರ್ರಾಷ್ಟ್ರೀಯ ಹೂಡಿಕೆದಾರರು ಚೈನಾ ಹಾಗೂ ಯೂರೋಪಿನಿಂದ ಬಂಡವಾಳ ಹಿಂತೆಗಿದಿದ್ದರಿಂದ ದೊರೆತ ಅವಕಾಶಗಳನ್ನು ಬಳಸಿಕೊಳ್ಳಿ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೈಗಾರಿಕೋದ್ಯಮಿಗಳಿಗೆ ಕರೆ ನೀಡಿದ್ದಾರೆ. ಕೆಲವೇ ವಾರಗಳ ಹಿಂದಷ್ಟೆ ನಿರ್ಮಲಾ ಸೀತಾರಾಮನ್ ಅವರು 'ತನ್ನ ಸರ್ಕಾರ ಎಷ್ಟೇ ಆಮಿಷ ಒಡ್ಡಿದರೂ ಖಾಸಗಿ ಕೈಗಾರಿಕೋದ್ಯಮಿಗಳು ಹೂಡಿಕೆ ಮಾಡಿಲ್ಲ' ಎಂಬ ಹತಾಶ ಭಾವನೆ ಹೊಂದಿದ್ದರು.

'ಕಾಗದದ ಮೇಲಿನ ಈ ಹೂಡಿಕೆಯನ್ನು' ವಾಸ್ತವಕ್ಕೆ ಪರಿವರ್ತಿಸಲು ಸರ್ಕಾರ ಉತ್ಸುಕವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಅಂಕಿ ಅಂಶಗಳನ್ನು ನಂಬಬಹುದೆ?

ಕರ್ನಾಟಕ ಸರ್ಕಾರದ ಪ್ರಕಾರ ಮೊದಲ ದಿನದ ಕೊನೆಯಲ್ಲೇ ಪ್ರಸ್ತಾಪಿತ ಹೂಡಿಕೆಯ ಒಪ್ಪಂದಗಳ ಮೊತ್ತವು ರೂ.2.1 ಲಕ್ಷ ಕೋಟಿ ಸಾಕಾರಗೊಂಡಿದೆ. ಅದರ ಆಧಾರದಲ್ಲಿ ಮೂರು ದಿನಗಳ ನಂತರ ಬಹಳ ಸುಲಭವಾಗಿ ಅದು ರೂ.5 ಲಕ್ಷ ಕೋಟಿ ಗುರಿಯನ್ನು ತಲುಪುತ್ತದೆ. ಈ ಭರವಸೆಗಳನ್ನು ಗಮನಿಸಿದರೆ ಈ ಹಿಂದೆ 2010 ಹಾಗೂ 2012 ರಲ್ಲಿ ಆಗಿನ ಬಿಜೆಪಿ ಸರ್ಕಾರ ಆಯೋಜಿಸಿದ್ದ ಜಾಗತಿಕ ಹೂಡಿಕೆದಾರರ ಸಭೆಯಲ್ಲಿ ಮಾಡಿದ ಅಂದಾಜಿನಂತೆಯೇ ಇದೆ ಎಂಬುದು ಸ್ಪಷ್ಟ.

ವಾಸ್ತವದಲ್ಲಿ, ಈ ಹಿಂದಿನ 2010 ಹಾಗೂ 2012 ರ ಸಭೆಯ ಸಂದರ್ಭದಲ್ಲಿಯೂ ಸಚಿವರಾಗಿದ್ದ ಈಗಿನ ರಾಜ್ಯ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿಯವರು ಈ ತಂತ್ರಗಳ ಬಗ್ಗೆ ಅರಿವಿದ್ದವರಾಗಿ 'ಸರ್ಕಾರ ಈಗಾಗಲೇ ರೂ.8 ಲಕ್ಷ ಕೋಟಿಯಷ್ಟು ಹೂಡಿಕೆಯ ಪ್ರಸ್ತಾಪಗಳನ್ನು ಪಡೆದುಕೊಂಡಿದೆ' ಎಂದು ತಿಳಿಸಿದರು. ಇದೇ ವೇಗದಲ್ಲಿ ಅದು ಮುಂದುವರಿದಿದ್ದೇ ಆದರೆ ಸಮಯ ಮುಗಿಯುವುದರೊಳಗೆ ಅದು ರೂ.10 ಲಕ್ಷ ಕೋಟಿ ತಲುಪುವುದರಲ್ಲಿ ಯಾವುದೇ ಅಚ್ಚರಿಪಡಬೇಕಾಗಿಲ್ಲ.

ನಿಜ ಸಂಗತಿಯೇನೆಂದರೆ ಒಬ್ಬರು ರೂ.2.1 ಲಕ್ಷ ಕೋಟಿ ಹೂಡಿಕೆ ಪ್ರಸ್ತಾಪಗಳನ್ನು ಒಪ್ಪಿಕೊಳ್ಳಲಾಗಿದೆ ಎಂದು ಹೇಳುತ್ತಿರುವಾಗ, ಅತ್ತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಆ ಸಂಖ್ಯೆಯನ್ನು ರೂ.2.8 ಲಕ್ಷ ಕೋಟಿ ಎಂದು ತಿಳಿಸುತ್ತಿದ್ದಾರೆ. ಸ್ವಲ್ಪ ಹೊತ್ತಿನ ನಂತರ ನಿರ್ಮಲಾ ಸೀತಾರಾಮನ್ ಅವರು ಹೇಳಿದ್ದಾರೆಂದು ಮಾಧ್ಯಮಗಳ ವರದಿಗಳು ರೂ.7.5 ಲಕ್ಷ ಕೋಟಿ ಮೊತ್ತದ ಸಂಖ್ಯೆಯನ್ನು ಪ್ರಸಾರ ಮಾಡುತ್ತಿದ್ದಾರೆ. ಇಂತಹ ಅಂಕಿ ಅಂಶಗಳನ್ನು ನಂಬಬಹುದೇ?

ಹೂಡಿಕೆಗಳ ಅಪಾಯಕಾರಿ ಕೇಂದ್ರೀಕರಣ

ಈ ಅಂಕಿ ಅಂಶಗಳನ್ನು ಗಂಭೀರವಾಗಿಯೇ ತೆಗೆದುಕೊಂಡರೂ ಕೂಡ, ಏರುಪೇರಾದ ಆದ್ಯತೆಗಳ ಹೊಸದೇನೂ ಅಲ್ಲದ ಸಮಸ್ಯೆ ಹಾಗೆಯೇ ಉಳಿಯುತ್ತದೆ. 'ಅನುಮೋದಿಸಲ್ಪಟ್ಟ' ಯೋಜನೆಗಳತ್ತ ಕಣ್ಣು ಹಾಯಿಸಿದರೆ, ಕ್ಷೇತ್ರಗಳಲ್ಲಿ ಮಾತ್ರವಲ್ಲ ವಾಗ್ದಾನ ಮಾಡಿದ ಕಾರ್ಪೊರೇಟ್ ಸಂಸ್ಥೆಗಳಲ್ಲಿ ಕೂಡ ಈ ಹಿಂದಿನಂತೆಯೇ ಈ ಬಾರಿ ಕೂಡ, ಪ್ರಸ್ತಾಪಗಳ ಭಾರಿ ಕೇಂದ್ರೀಕರಣ ಇರುವುದನ್ನು ಕಾಣುತ್ತೇವೆ.

ಮೊದಲನೆಯ ದಿನ ಹೂಡಿಕೆಯ ವಾಗ್ದಾನ ಮಾಡಿದ ಒಟ್ಟು ಪ್ರಸ್ತಾಪಗಳಲ್ಲಿನ ಐದನೇ ಮೂರು ವೇದಾಂತ ಗುಂಪು ಮತ್ತು ಎಬಿಸಿ ಕ್ಲೀನ್‌ಟೆಕ್ ಕಂಪನಿಗಳಿಗೆ ಸೇರಿದವಾಗಿವೆ. ವೇದಾಂತವು ಸುಪ್ರಸಿದ್ಧ ಕೈಗಾರಿಕಾ ವಾಣಿಜ್ಯ ಕೂಟವಾಗಿದೆಯಾದರೂ ಎಬಿಸಿ ಕ್ಲೀನ್‌ಟೆಕ್ ಹೈದರಾಬಾದ್ ಕೇಂದ್ರಿತ ಖಾಸಗಿ ಕಂಪನಿಯಾಗಿದ್ದು ಕೇವಲ ಏಳು ತಿಂಗಳ ಹಿಂದಷ್ಟೇ ಸ್ಥಾಪಿಸಲ್ಪಟ್ಟಿದ್ದು.

ಈ ಎರಡೂ ಕಂಪನಿಗಳ ಪ್ರಸ್ತಾಪಗಳ ಒಟ್ಟು ಹೂಡಿಕೆಯು–ವೇದಾಂತ ರೂ.80,000 ಕೋಟಿ ಮತ್ತು ಕ್ಲೀನ್‌ಟೆಕ್ ರೂ.50,000 ಕೋಟಿ– ಮೊದಲ ದಿನದ ವಾಗ್ದಾನ ಮಾಡಿದ ಹೂಡಿಕೆಯ ಬಹುಪಾಲು ಮೊತ್ತವಾಗಿದೆ ಮಾತ್ರವಲ್ಲ, ಅವೆರಡೂ ನವೀಕರಿಸಬಹುದಾದರಂಗದಲ್ಲಿದ್ದು ಒಂದೇ ವಲಯದ್ದಾಗಿವೆ. ವೇದಾಂತದ ಹೂಡಿಕೆಯಲ್ಲಿನ ನಿಜವಾದ ಅಂಕಿ ಅಂಶಗಳು ಸ್ಪಷ್ಟವಾಗಿಲ್ಲವಾದರೂ, ಜಾಗತಿಕ ಹೂಡಿಕೆ ಸಭೆಯಲ್ಲಿನ ವದಂತಿಯೇನೆಂದರೆ ರಾಜ್ಯದಲ್ಲಿನ 'ಹಸಿರು' ಜಲಜನಕ ಯೋಜನೆಗಳಲ್ಲಿ ಭಾರಿ ಹೂಡಿಕೆಯ ಪ್ರಸ್ತಾಪಗಳು ಇವೆ ಎಂಬುದಾಗಿದೆ. ಪಾಲ್ಗೊಳ್ಳುತ್ತಿರುವ ಗುಂಪುಗಳು ಮತ್ತು ವಲಯಗಳ ಕೇಂದ್ರೀಕರಣದ ಪರಿಭಾಷೆಯಲ್ಲಿ ಹೇಳುವುದಾದರೆ ಪ್ರಸ್ತಾಪಿತ ಹೂಡಿಕೆಗಳ ಏರುಪೇರಾದ ಸ್ವರೂಪವು ಈ ಹಿಂದಿನ ಸಭೆಗಳಲ್ಲಿ ಕಾಡಿದ ಅದೇ ಹಳೆಯ ಪ್ರಶ್ನೆಗಳನ್ನು ಎತ್ತುತ್ತವೆ.

ತೀರ ಪರಿಚಿತ ಕ್ಷಣ

2012 ರಲ್ಲಿ ಕರ್ನಾಟಕ ಬಿಜೆಪಿ ಸರ್ಕಾರ ಆಯೋಜಿಸಿದ್ದ ಜಾಗತಿಕ ಹೂಡಿಕೆದಾರರ ಸಭೆ ಮುಗಿದ ಕೂಡಲೇ, ಒಪ್ಪಿರುವ ಯೋಜನೆಗಳ ಜಾರಿಯಲ್ಲಿ 'ಪಾರದರ್ಶಕತೆಯ ಕೊರತೆ'ಯ ಬಗ್ಗೆ ಹಲವಾರು ಕೈಗಾರಿಕಾ ಸಂಸ್ಥೆಗಳು ತಮ್ಮ ಆತಂಕ ವ್ಯಕ್ತಪಡಿಸಿದ್ದವು. ಆಗ ರೂ.8.27 ಕೋಟಿ ಮೊತ್ತದ ಪ್ರಸ್ತಾಪಗಳನ್ನು ಇರಿಸಲಾಗಿತ್ತು. ಹೂಡಿಕೆದಾರರ ಸಭೆಯನ್ನು ಆಯೋಜಿಸುವಲ್ಲಿ ರಾಜ್ಯ ಸರ್ಕಾರದೊಂದಿಗೆ ಪಾಲುದಾರರಾಗಿದ್ದ ಭಾರತೀಯ ಉದ್ದಿಮೆದಾರರ ಒಕ್ಕೂಟ (ಕನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ)ದ ಹಿರಿಯ ಅಧಿಕಾರಿಯೊಬ್ಬರು "ನಂಬಲರ್ಹವಾದ ಅಂಕಿ ಅಂಶಗಳ ಕೊರತೆಯೇ ಬಹು ದೊಡ್ಡ ಸವಾಲು" ಎಂದು ಆವಾಗಲೇ ಹೇಳಿದ್ದರು.

ಹೆಚ್ಚು ಪ್ರಮಾಣದ ಹೂಡಿಕೆಗಳು ಅನಿಲ ಆಧಾರಿತ ವಿದ್ಯುತ್ ಯೋಜನೆಗಳಿಗೆ ಕೇಂದ್ರೀಕರಣವಾಗಿವೆ, ಆದರೆ ಆ ಯೋಜನೆಗಳಿಗೆ ಅನಿಲದ ಲಭ್ಯತೆ ಬಗ್ಗೆ ಯಾವುದೇ ಖಾತರಿ ಸಿಕ್ಕಿಲ್ಲ ಎಂಬ ಅಂಶವನ್ನು ಗಮನಿಸಬೇಕು. ಈ ಹಿಂದೆ, 2012 ರಜಿಐಎಂ ಸಭೆಯಲ್ಲಿ ಏರೋಸ್ಪೇಸ್ ವಲಯಕ್ಕೆ ಆದ್ಯತೆ ನೀಡಲಾಗಿತ್ತು. ಆಗಿನ ಕೈಗಾರಿಕಾ ಸಚಿವ ನಿರಾಣಿಯವರು ಆ ನಿಟ್ಟಿನಲ್ಲಿ ಒಂದು ವಿಶ್ವವಿದ್ಯಾಲಯವನ್ನೇ ಆರಂಭಿಸುವುದಾಗಿ ಆಶ್ವಾಸನೆ ನೀಡಿದ್ದರು. ಆ ಭರವಸೆ ಐದು ವರ್ಷಗಳ ನಂತರವೂ ಇನ್ನೂ ಭರವಸೆಯಾಗಿಯೇ ಉಳಿದಿದೆಯೇ ವಿನಃ ಬೆಳಕು ಕಾಣಲೇ ಇಲ್ಲ.

2010 ರಜಿಐಎಂ ಸಭೆಯಲ್ಲಿ ಹೆಚ್ಚಿನ ಆದ್ಯತೆ ಅಂದರೆ ಸರಿಸುಮಾರು ಮೂರನೇ ಎರಡರಷ್ಟು ಯೋಜನೆಗಳು ಕಬ್ಬಿಣ ಮತ್ತು ಉಕ್ಕು ಕ್ಷೇತ್ರಗಳಿಗೆ ನೀಡಲಾಗಿತ್ತು. ಆದರೆ ಆ ನಂತರ ರಾಜ್ಯದಲ್ಲಿ ಉದ್ಭವಿಸಿದ ಗಣಿ ಹಗರಣದಿಂದಾಗಿ ನಿರಾಣಿಯವರು ಮಾತ್ರವಲ್ಲದೇ ಆಗಿನ ಮುಖ್ಯಮಂತ್ರಿ ಯಡಿಯೂರಪ್ಪನವರೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾದ ಶೋಚನೀಯ ಪರಿಸ್ಥಿತಿ ಉಂಟಾಗಿತ್ತು. ಇಡೀ ಕಬ್ಬಿಣ ಅದಿರು ಗಣಿಗಳನ್ನೇ ಮುಚ್ಚಬೇಕಾದ ಅನಿವಾರ್ಯತೆ ಉಂಟಾಗಿ 2010 ಜಿಐಎಂ ತೀರ್ಮಾನಗಳು ಮೂಲೆಗುಂಪಾದವು ಎನ್ನುವುದನ್ನು ಕರ್ನಾಟಕದ ಜನರು ಮರೆತಿಲ್ಲ.

'ಹಸಿರು' ಜಲಜನಕದ ಸಡಗರ

ಈ ಬಾರಿಯ ಜಿಐಎಂ ಸಭೆಯಲ್ಲಿ ಹಸಿರು ಜಲಜನಕ ಬಹಳ ಸದ್ದು ಮಾಡಿತು. ಸರ್ಕಾರದ ಮೂಲಗಳ ಪ್ರಕಾರ ಏಳು ಕಂಪನಿಗಳು ಈ ವಲಯದಲ್ಲಿ ಆಸಕ್ತಿ ವ್ಯಕ್ತಪಡಿಸಿವೆ ಮತ್ತು ಮಂಗಳೂರಿನಲ್ಲಿ ಸ್ಥಾಪಿಸುವುದಾಗಿ ಪ್ರಕಟಿಸಿವೆ ಕೂಡ. ಅವು ಸರಿಸುಮಾರು ರೂ.2.91 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಹೇಳಿದ್ದಾವಾದರೂ ಕೇವಲ ಹಸಿರು ಜಲಜನಕ ಮಾತ್ರವಲ್ಲದೇ 'ಹಸಿರು' ಅಮೋನಿಯಾ ಯೋಜನೆಗಳಿಗೂ ಬಳಸುವುದಾಗಿ ಹೇಳಿವೆ. ರಾಜ್ಯ ಸರ್ಕಾರವು ಆ ಗುಂಪನ್ನು ಕಾಡಿ ಬೇಡಿ ಜಪಾನ್, ದಕ್ಷಿಣ ಕೊರಿಯ ಹಾಗೂ ಯೂರೋಪಿನ ಮಾರುಕಟ್ಟೆಗಳಿಗೂ ರಫ್ತು ಮಾಡುವ ಸಾಮರ್ಥ್ಯ ಪಡೆಯಬೇಕು ಎಂದಿದೆ.

ಆದರೆ ವಾಸ್ತವವೇ ಬೇರೆ. ಆ ಉದ್ದಿಮೆಯ ಒಂದು ಮೂಲದ ಪ್ರಕಾರ ಕಲ್ಲಿದ್ದಲಿಗೆ ಪರ್ಯಾಯವಾಗಿ ಈಗ ತಾನೇ ಹುಟ್ಟಿರುವ 'ಹಸಿರು' ಜಲಜನಕ ಉದ್ದಿಮೆಯೆದುರು ಹಲವಾರು ಅಂದಾಜು ಮಾಡಲಾಗದ ಅಡಚಣೆಗಳಿವೆ. ಮೊದಲನೆಯದಾಗಿ ಅದು ಹೆಚ್ಚು ಬಂಡವಾಳ ಬೇಡುವ ಉದ್ದಿಮೆ. ಎರಡನೆಯದಾಗಿ ಅದು ಉಕ್ಕು, ಸಿಮೆಂಟ್, ರಸಗೊಬ್ಬರ ಮತ್ತು ಪ್ಲ್ಯಾಸ್ಟಿಕ್ ನಂತಹ ಕಲ್ಲಿದ್ದಲು ಆಧಾರಿತ ಉದ್ದಿಮೆಗಳು ಅದರ ಸಂಭಾವ್ಯ ಗ್ರಾಹಕ ಉದ್ಯಮಗಳು. ಇವುಗಳಲ್ಲಿ ಕೆಲವು ಉದ್ದಿಮೆಗಳು ಹೊಸ ಇಂಧನದ ದುಬಾರಿ ವೆಚ್ಚವನ್ನು ತಡೆದುಕೊಳ್ಳುವ ಸ್ಥಿತಿಯಲ್ಲಿ ಇಲ್ಲ.

ಹೊಸ ಇಂಧನದ ಉತ್ಪಾದನೆಯಾಗುವ ತನಕ ಈ ಉದ್ದಿಮೆಗಳು ಕಾರ್ಯಾರಂಭಕ್ಕೆ ಕಾಯಬೇಕಾಗುತ್ತದೆ. ಅದಲ್ಲದೇ, ಜಲಜನಕದ ಸಾಂದ್ರತೆ ಬಹಳ ಕಡಿಮೆ ಇರುವುದರಿಂದ ಮೋಟಾರು ಉದ್ದಿಮೆಗಳು ಎದುರಿಸುತ್ತಿರುವ ಬ್ಯಾಟರಿಗಳ ಸಮಸ್ಯೆಯನ್ನು ಈ ಉದ್ದಿಮೆಗಳೂ ಎದುರಿಸಬೇಕಾಗುತ್ತದೆ. 'ಹಸಿರು' ಜಲಜನಕದ ಸಾಗಾಣಿಕೆಗೆ ಪೈಪ್ ಲೈನುಗಳು ಅಥವಾ ಬೇರಾವುದಾದರೂ ದಾರಿ ಹುಡುಕಬೇಕಾಗುತ್ತದೆ. ಒಟ್ಟಿನಲ್ಲಿ, ಈ ಉದ್ದಿಮೆ ಆರಂಭವಾಗಿ ಯಶಸ್ವಿಯಾಗಲು ಕನಿಷ್ಠ ಮೂಲಸೌಕರ್ಯಗಳನ್ನು ಹೊಂದಿರಬೇಕು. ಜಿಐಎಂ ಸಭೆಗೆ ಬಂದಿದ್ದ ಒಬ್ಬರು "ಕುದುರೆ ಮುಂದೆ ಗಾಡಿಯನ್ನು ಕಟ್ಟಿದಂತೆ" ಎಂದು ವ್ಯಂಗ್ಯಮಾಡಿದರು.

ನರೇಂದ್ರ ಮೋದಿ ಸರ್ಕಾರವು 'ಹಸಿರು' ಜಲಜನಕ ನೀತಿಯನ್ನು ಅನಾವರಣ ಮಾಡಿದೆಯಾದರೂ, ಅದರ ರೂಪರೇಷೆಗಳು ಇನ್ನೂ ಸ್ಪಷ್ಟವಾಗಿಲ್ಲ. ಬಹಳ ಮುಖ್ಯವಾಗಿ ಸಾಮರ್ಥ್ಯ ಗಳಿಸುವ ಸಲುವಾಗಿ ಪ್ರೋತ್ಸಾಹಧನ ಅಥವಾ ಸಬ್ಸಿಡಿಗಳನ್ನು ಹೇಗೆ ರೂಪಿಸುವುದು ಎಂಬುದನ್ನು ಇನ್ನೂ ಸ್ಪಷ್ಟಪಡಿಸಿಲ್ಲ. ಕಲ್ಲಿದ್ದಲು ಆಧಾರಿತ ಸಾಮರ್ಥ್ಯ ಗಳಿಸಿದಷ್ಟು ಸರಾಗವಾಗಿ ಈ ಇಂಧನದ ಸಂಗ್ರಹ ಹಾಗೂ ಸಾಗಾಣಿಕೆಯ ವೆಚ್ಚಗಳನ್ನು ಭರಿಸುವುದು ನಿರ್ಣಾಯಕ ಅಂಶ. ಆದರೆ ಈ ಕುರಿತು ಯಾವುದೇ ಸ್ಪಷ್ಟತೆ ಇಲ್ಲದಿರುವುದರಿಂದ ಅದು ಆರಂಭವಾಗುವುದು ಸುಲಭವಲ್ಲ.

ಹೂಡಿಕೆದಾರರ ಸಭೆಯು 'ಮದುವೆ ಸಮಾರಂಭದಂತೆ'


ಇಷ್ಟೆಲ್ಲಾ ತಕರಾರುಗಳು ಇರುವಾಗ ಉದ್ದಿಮೆದಾರರು ಇಂತಹ ಅದ್ದೂರಿ ಸಮಾರಂಭಗಳಲ್ಲಿ ಭಾಗವಹಿಸಿದ್ದಾದರೂ ಏಕೆ?

ಇದೇ ರೀತಿಯ ಹೂಡಿಕೆದಾರರ ಸಭೆಯನ್ನು ಕರ್ನಾಟಕ, ಗುಜರಾತ್ ಮತ್ತು ಉತ್ತರ

ಇಡಬ್ಲ್ಯುಎಸ್ ಮೀಸಲಾತಿ ಕುರಿತು

ಪ್ರಕಾಶ್ ಕಾರತ್

1990ರಲ್ಲಿ ಇತರ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿಗೆ ಮಂಡಲ್ ಆಯೋಗದ ಅನುಷ್ಠಾನ ಸಮಯದಲ್ಲಿ ಸಾಮಾನ್ಯ ವರ್ಗದ ಬಡವರಿಗೆ ಸ್ವಲ್ಪ ಪ್ರಮಾಣದ ಮೀಸಲಾತಿ ಕಲ್ಪಿಸಬೇಕೆಂಬ ಬೇಡಿಕೆಯನ್ನು ಸಿಪಿಐ(ಎಂ) ಮುಂದಿಟ್ಟಿತ್ತು.



ಸಾಮಾನ್ಯ ವರ್ಗದೊಳಗಿನ (ಜನರಲ್ ಕೆಟಗರಿ) ಆರ್ಥಿಕವಾಗಿ ದುರ್ಬಲ ವಿಭಾಗಗಳಿಗೆ (ಇಡಬ್ಲ್ಯುಎಸ್) ಮೀಸಲಾತಿ ಕಲ್ಪಿಸುವ ಕುರಿತ ಸಂವಿಧಾನದ 103ನೇ ತಿದ್ದುಪಡಿಯ ಸಿಂಧುತ್ವವನ್ನು ಸುಪ್ರೀಂ ಕೋರ್ಟ್‌ನ ಒಂದು ಸಂವಿಧಾನ ಪೀಠ 3–2 ಬಹುಮತದಿಂದ ಎತ್ತಿ ಹಿಡಿದಿದೆ. 2019 ಜನವರಿಯಲ್ಲಿ ಸಂಸತ್ತಿನಲ್ಲಿ ಸಿಪಿಐ(ಎಂ) ಈ ಸಾಂವಿಧಾನಿಕ ತಿದುಪಡಿಗೆ ಬೆಂಬಲ ನೀಡಿತ್ತು.

ಸಾಮಾನ್ಯ ವರ್ಗದ ಇಡಬ್ಲ್ಯುಎಸ್‌ನವರಿಗೆ ಗರಿಷ್ಠ 10% ಮೀಸಲಾತಿ ನೀಡಲು ಈ ತಿದ್ದುಪಡಿ ನೆರವಾಗುತ್ತದೆ. ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕೆಟಗರಿಯಲ್ಲಿ ಬಾರದ ವಿಭಾಗಗಳಿಗೆ ಎಂದು ಇದರ ಅರ್ಥವಾಗಿದೆ. 1990ರಲ್ಲಿ ಇತರ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿಗೆ ಮಂಡಲ್ ಆಯೋಗದ ಅನುಷ್ಠಾನ ಸಮಯದಲ್ಲಿ ಸಾಮಾನ್ಯ ವರ್ಗದ ಬಡವರಿಗೆ ಸ್ವಲ್ಪ ಪ್ರಮಾಣದ ಮೀಸಲಾತಿ ಕಲ್ಪಿಸಬೇಕೆಂಬ ಬೇಡಿಕೆಯನ್ನು ಸಿಪಿಐ(ಎಂ) ಮುಂದಿಟ್ಟಿತ್ತು.

ಒಬಿಸಿಗಳಿಗೆ 27% ಮೀಸಲಾತಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದ ಸಿಪಿಐ(ಎಂ), ಜನರಲ್ ಕೆಟಗರಿಯ ಬಡ ವಿಭಾಗಗಳಿಗೆ ಸ್ವಲ್ಪ ಪ್ರಮಾಣದ ಮೀಸಲಾತಿ ಅಗತ್ಯ ಎಂದು ಪ್ರತಿಪಾದಿಸಿತ್ತು. ಮೀಸಲಾತಿ–ವಿರೋಧಿ ಚಳವಳಿಯೊಂದಿಗೆ ಆಗಿದ್ದ ತೀಕ್ಷ್ಣ ಧ್ರುವೀಕರಣವನ್ನು ಶಾಂತಗೊಳಿಸಲು ಇದು ನೆರವಾಗಬಹುದು ಎಂದು ಪಕ್ಷ ಭಾವಿಸಿತ್ತು. ವರ್ಗ ಧೋರಣೆ ಹೊಂದಿರುವುದರಿಂದ, ಒಬಿಸಿ ಕೋಟಾದೊಳಗೇ ಆರ್ಥಿಕ ಮನದಂಡವನ್ನೂ ಅಳವಡಿಸಬೇಕೆಂದು ಪಕ್ಷ ಅಭಿಪ್ರಾಯ ಪಟ್ಟಿತ್ತು. ಇದರಿಂದಾಗಿ ಈ ವರ್ಗದ ನೈಜ ಅರ್ಹರು ಮೀಸಲಾತಿ ಪಡೆಯಬಹುದು ಎನ್ನುವುದು ಇದರ ಉದ್ದೇಶವಾಗಿತ್ತು. ಅದನ್ನು ನಂತರ ಸುಪ್ರೀಂ ಕೋರ್ಟ್ 'ಕೆನೆ ಪದರ' (ಕ್ರೀಮಿ ಲೇಯರ್) ರೂಪದಲ್ಲಿ ಅಂಗೀಕರಿಸಿತ್ತು.

ಶತಮಾನಗಳ ಕಾಲದ ದಬ್ಬಾಳಿಕೆಯ ಜಾತಿ ವ್ಯವಸ್ಥೆಯನ್ನು ಆಧರಿಸಿರುವ 'ಸಾಮಾಜಿಕ ಮತ್ತು ಶೈಕ್ಷಣಿಕವಾಗಿ' ಹಿಂದುಳಿದ ಜಾತಿಗಳ ಮೀಸಲಾತಿಯನ್ನು ಎತ್ತಿ ಹಿಡಿಯುವಾಗಲೇ ದುಡಿಯುವ ಜನರು ಮತ್ತು ಎಲ್ಲ ಜಾತಿ ಮತ್ತು ಸಮುದಾಯಗಳ ಬಡವರನ್ನು ಒಗ್ಗೂಡಿಸುವುದು ಸಿಪಿಐ(ಎಂ) ಕಾಳಜಿಯಾಗಿದೆ. ಈಗಿರುವ ಶೋಷಣಾತ್ಮಕ ಸಾಮಾಜಿಕ–ಆರ್ಥಿಕ ವ್ಯವಸ್ಥೆಯ ವಿರುದ್ಧ ಹೋರಾಡಲು ಇರುವ ಮಾರ್ಗ ಇದಾಗಿದೆ. ಎಲ್ಲ ಜಾತಿಗಳ ಬಡವರನ್ನು ಒಗ್ಗೂಡಿಸಲು ಮತ್ತು ವಿಭಜನೆಗಳನ್ನು ನಿವಾರಿಸಲು ಸಾಮಾನ್ಯ ವರ್ಗದೊಳಗಿನ ಬಡ ವಿಭಾಗಗಳಿಗೆ ಸ್ವಲ್ಪ ಮಟ್ಟಿಗಿನ ಮೀಸಲಾತಿ ಅಗತ್ಯ ಎಂದು ಸಿಪಿಐ(ಎಂ) ಪ್ರತಿಪಾದಿಸಿತ್ತು. ಇದು ಒಬಿಸಿಗಳು, ಎಸ್‌ಸಿ ಮತ್ತು ಎಸ್‌ಟಿಗಳ ಹಾಲಿ ಮೀಸಲಾತಿ ಶೇಕಡಾವಾರಿನ ಮೇಲೆ ಪರಿಣಾಮ ಬೀರುವುದಿಲ್ಲ ಎನ್ನುವುದು ಸ್ಪಷ್ಟ. ಹಾಲಿ ಅಸ್ತಿತ್ವದಲ್ಲಿರುವ ಮೀಸಲಾತಿ ಕೋಟಾ ಪಡೆಯಲು ಆಗದಿರುವ ಎಲ್ಲ ಧಾರ್ಮಿಕ ಗುಂಪುಗಳು ಮತ್ತು ಸಮುದಾಯಗಳನ್ನು ಒಳಗೊಳ್ಳುವಂತೆ ಸಾಮಾನ್ಯ ವರ್ಗದಿಂದ ಇಡಬ್ಲ್ಯುಎಸ್ ಕೋಟಾವನ್ನು ರೂಪಿಸಬೇಕು.

ಆದರೆ, ಯಾರು ಇಡಬ್ಲ್ಯುಎಸ್ ಎನ್ನುವುದನ್ನು ವ್ಯಾಖ್ಯಾನಿಸಲು ಅಧಿಕೃತ ಜ್ಞಾಪನದ ಮೂಲಕ ಮೋದಿ ಸರಕಾರ ನಿಗದಿಪಡಿಸಿದ ಮಾನದಂಡವನ್ನು ಪಕ್ಷ ಟೀಕಿಸಿದೆ. ಉದ್ಯೋಗ ಮತ್ತು ಶಿಕ್ಷಣದಲ್ಲಿ ಕೇಂದ್ರ ಸರಕಾರದ ಮೀಸಲಾತಿಗೆ ಇಡಬ್ಲ್ಯುಎಸ್ ಎಂದರೆ ವಾರ್ಷಿಕ 8 ಲಕ್ಷ ರೂಪಾಯಿಗಿಂತ ಕಡಿಮೆ ವರಮಾನ ಇರುವವರು; ಆದರೆ ಐದು ಎಕರೆಗಿಂತ ಹೆಚ್ಚು ಕೃಷಿ ಜಮೀನು ಇಲ್ಲದವರು, ಅಥವಾ ಅಧಿಸೂಚಿತ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ 1000 ಚದರ ಅಡಿಗಿಂತ ಮೇಲಿನ ವಾಸಸ್ಥಳ (ಮನೆ) ಅಥವಾ 100 ಯಾರ್ಡ್ ಪ್ಲಾಟ್ ಹೊಂದಿರದ ಕುಟುಂಬ ಎಂದು ಅರ್ಥ. ಅಂದರೆ ಯಾರು ಬಡವರಲ್ಲವೋ ಅವರು ಇಡಬ್ಲ್ಯುಎಸ್ ಕೋಟಾ ಸೌಲಭ್ಯ ಪಡೆಯಬಹುದು ಎಂದಾಗುತ್ತದೆ. ಆದಾಯ ತೆರಿಗೆ ವಿನಾಯಿತಿಗೆ ಇರುವ ವಾರ್ಷಿಕ ವರಮಾನ ಮಿತಿ 2.5 ಲಕ್ಷ ರೂಪಾಯಿ. ಅದಕ್ಕಿಂತ ಮೇಲಿನ ಆದಾಯಕ್ಕೆ ಆದಾಯ ತೆರಿಗೆ ಕಟ್ಟಬೇಕಾಗುತ್ತದೆ. ಅದೇ ರೀತಿ, ಐದು ಎಕರೆ ಕೃಷಿ ಭೂಮಿ ಹೊಂದಿರುವವರು ಬಡವರಾಗುವುದಿಲ್ಲ. ಹಾಗಾಗಿ, ಸೀಲಿಂಗ್ ಮತ್ತು ಮಿತಿಗಳನ್ನು ಜಾಸ್ತಿ ಮತ್ತು ವಿಶಾಲವಿರಿಸಿರುವುದರಿಂದ ಇಡಬ್ಲ್ಯುಎಸ್ ಮೀಸಲಾತಿಯ ಉದ್ದೇಶವೇ ವಿಫಲವಾಗುತ್ತದೆ. ಈ ಅಧಿಕೃತ ಜ್ಞಾಪನ ಪ್ರಶ್ನಿಸಿ ಹಲವರು ಅರ್ಜಿಗಳನ್ನು ಸಲ್ಲಿಸಿರುವುದರಿಂದ ಸುಪ್ರೀಂ ಕೋರ್ಟ್ ಈ ಅಂಶವನ್ನು ಇನ್ನಷ್ಟೇ ಪರಿಶೀಲಿಸಬೇಕಿದೆ.

ರಾಜ್ಯ ಮಟ್ಟದ ಉದ್ಯೋಗ ಮತ್ತು ಶಿಕ್ಷಣಕ್ಕೆ ಇಡಬ್ಲ್ಯುಎಸ್ ಕೋಟಾ ಕೊಡುವುದು ರಾಜ್ಯಗಳ ವಿವೇಚನೆಗೆ ಬಿಟ್ಟಿದ್ದು. ಇಡಬ್ಲ್ಯುಎಸ್ ಮಾನದಂಡ ಮತ್ತು ಕೋಟಾದ ಮಟ್ಟವನ್ನು ನಿರ್ಧರಿಸಲು ಕೇರಳದ ಎಲ್‌ಡಿಎಫ್ ಸರಕಾರ ಆಯೋಗವೊಂದನ್ನು ರಚಿಸಿದೆ. ಕುಟುಂಬದ ಆದಾಯ ವಾರ್ಷಿಕ 4 ಲಕ್ಷ ರೂಪಾಯಿಗಿಂತ ಕಡಿಮೆ ಇರುವ ಹಾಗೂ 2.5 ಎಕರೆಗಿಂತ ಹೆಚ್ಚು ಕೃಷಿ ಭೂಮಿ ಹೊಂದಿರದ ಕುಟುಂಬ ಇಡಬ್ಲ್ಯುಎಸ್ ಮೀಸಲಾತಿಗೆ ಅರ್ಹ ಎಂದು ಜಸ್ಟಿಸ್ ಶ್ರೀಧರನ್ ನಾಯರ್ ಆಯೋಗ ಹಿಂದೆ ಹೇಳಿತ್ತು. ಕೇರಳ ಸಚಿವ ಸಂಪುಟ 2020ರಲ್ಲಿ ಈ ಶಿಫಾರಸುಗಳನ್ನು ಅಂಗೀಕರಿಸಿತ್ತು. ಕೇರಳದಲ್ಲಿ ಪ್ರಸ್ತುತ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಶೇಕಡ 10 ಮೀಸಲಾತಿ ಅನುಷ್ಠಾನಗೊಳಿಸಲಾಗುತ್ತಿದೆ. ಇಡಬ್ಲ್ಯುಎಸ್ ವ್ಯಾಖಾನಿಸಲು ಅಳವಡಿಸಿಕೊಂಡ ಮಾನದಂಡವು ಸಾಮಾನ್ಯ ವರ್ಗದೊಳಗಿನ ಬಡ ವಿಭಾಗಗಳನ್ನು ಸರಿಯಾಗಿ ನಿರ್ವಹಿಸುತ್ತದೆ.

ಕೋಟಾದ ಲಾಭ ನಿಜವಾಗಿಯೂ ಆರ್ಥಿಕವಾಗಿ ವಂಚಿತರನ್ನು ತಲುಪಬೇಕಾದರೆ ಕೇಂದ್ರ ಸರಕಾರ ಇಡಬ್ಲ್ಯುಎಸ್ ವ್ಯಾಖ್ಯಾನಿಸಲು ಅನುಸರಿಸುವ ಮಾನದಂಡವನ್ನು ತಕ್ಷಣವೇ ಪರಿಷ್ಕರಿಸಬೇಕು.

ಅನು: ವಿಶ್ವ

ಪ್ರದೇಶ ರಾಜ್ಯಗಳಲ್ಲಿ ಭಾಗವಹಿಸಿದ್ದ ಬೆಂಗಳೂರು ನೆಲೆಯ ಕೈಗಾರಿಕೋದ್ಯಮಿಯೊಬ್ಬರು ಹೇಳುತ್ತಾರೆ "ಸಹ ಕೈಗಾರಿಕೋದ್ಯಮಿಗಳೊಂದಿಗಿನ ಅನುಭವ ಹಾಗೂ ಸಂವಾದಗಳ ಆಧಾರದಲ್ಲಿ ನನ್ನ ಅಭಿಪ್ರಾಯವೇನೆಂದರೆ ಈ ಭರವಸೆಗಳಲ್ಲಿ ಶೇ.10 ಕ್ಕೂ ಕಡಿಮೆಯ ಹೂಡಿಕೆಯ ಆಶ್ವಾಸನೆಗಳು ಮಾತ್ರ ನಿಜವಾಗಿಯೂ ಈಡೇರುತ್ತವೆ."

ಹಿರಿಯ ಯಂತ್ರೋಪಕರಣಗಳ ಉತ್ಪಾದಕರೊಬ್ಬರು ಹೇಳುತ್ತಾರೆ "ಉದ್ದಿಮೆಯ ಸಂಘಗಳು–ಬಹುಪಾಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು–ಆ ಸಮಾರಂಭಗಳು ಯಶಸ್ವಿಯಾಗುವುದನ್ನು ಉತ್ತೇಜಿಸುವ ಮೂಲ ಉದ್ದೇಶದಿಂದಲೇ ಇಂತಹ ವಾಣಿಜ್ಯ ಪ್ರದರ್ಶನಗಳನ್ನು ಸಂಘಟಿಸುತ್ತವೆ. ಈ 'ಯಶಸ್ಸಿನ' ಮಾನದಂಡಗಳೇನೆಂದರೆ 'ಎಷ್ಟು ಜನ ಭಾಗವಹಿಸಿದ್ದರು', 'ಒಪ್ಪಂದಗಳ ಸಹಿಯೊಂದಿಗೆ ಎಷ್ಟು ಹೂಡಿಕೆಯ ಭರವಸೆಗಳು ಬಂದವು' ಎಂಬುದಾಗಿವೆ. "ನೀವು ಆ ಒಪ್ಪಂದಗಳನ್ನು ನಿಜವಾಗಿಯೂ ನೋಡಿದರೆ, ಅವುಗಳಲ್ಲಿ 'ಆದರೆ ಮತ್ತು ಹೋದರೆ' ಎಂಬುದನ್ನು ಹೆಚ್ಚು ಕಾಣುತ್ತೀರಿ, ಆದರೆ ಆ 'ಆದರೆ ಮತ್ತು ಹೋದರೆ'ಗಳು ಎಂದಿಗೂ ಸಾಕಾರವಾಗುವುದಿಲ್ಲ."

ಹಾಗಾದರೆ ಏಕೆ ಕೈಗಾರಿಕೋದ್ಯಮಿಗಳು ಇಂತಹ ಭಾರಿ ಸಮಾರಂಭಗಳಲ್ಲಿ ಭಾಗವಹಿಸುವ ಬಲವಂತವಾದರೂ ಏನು ಎಂದು ಕೇಳಿದರೆ ಭಾರತೀಯ ಪಾರಂಪರಿಕ ಮದುವೆಯ ಉದಾಹರಣೆಯನ್ನು ಅವರು ನೀಡಿದರು. "ನಿಮಗೆ ಇಷ್ಟವಿರಲಿ ಅಥವಾ ಇಲ್ಲದಿರಲಿ, ಅಂತಹ ಮದುವೆಗಳಲ್ಲಿ ನೀವು ಭಾಗವಹಿಸಲೇಬೇಕು ಎನ್ನುವಂತೆ" ಅದು ಎಂದರು.

"ಸಂಘಟಕರು ಯಾರು ಎನ್ನುವುದು ನಿಮಗೆ ಗೊತ್ತು, ಹಾಗಾಗಿ ಭಾಗವಹಿಸಲೇಬೇಕು. ಸಂಘಟಕರಿಗೂ ಅದು ಗೊತ್ತು. ಹೂಡಿಕೆ ನಿರೀಕ್ಷಿತ ಮಟ್ಟದಲ್ಲಿ ಬರುವುದಿಲ್ಲ ಎಂದು ಅವರಿಗೂ ಗೊತ್ತಿರುತ್ತದೆ. ಬಹಳ ಜನರು ಭಾಗವಹಿಸಿದ ಒಂದು ಉತ್ತಮವಾದ ಸಮಾರಂಭ ಮಾಡಿದೆವು ಎಂಬ ಸಮಾಧಾನ ಅವರಿಗೆ ಅಷ್ಟೆ. ಈ ಕಾರಣಕ್ಕಾಗಿಯೇ, ನನ್ನ ಅಂದಾಜಿನ ಪ್ರಕಾರ ಶೇ.50 ರಿಂದ ಶೇ.60 ರಷ್ಟು ಜನರು ಇದರಲ್ಲಿ ಭಾಗವಹಿಸುತ್ತಾರೆ." ಎಂದು ಹೇಳಿದರು.



ಮತ್ತೊಂದು ಬಹು ಮುಖ್ಯ ಅಂಶವೆಂದರೆ ಕೈಗಾರಿಕೋದ್ಯಮಿಗಳು ಭಾಗವಹಿಸುವುದು ಅಧಿಕಾರದಲ್ಲಿರುವವರ ಜತೆ ಕಾಲ ಕಳೆಯುವ ಮೂಲಕ ತಮ್ಮ 'ವ್ಯವಹಾರ ಸಂಪರ್ಕ' ಗಳಿಸಬಹುದು ಎಂಬ ಕಾರಣಕ್ಕಾಗಿ.

ಆಡಳಿತ ಪ್ರಕ್ರಿಯೆಗಳಲ್ಲಿ ಕಡಿಮೆ ವಿಶ್ವಾಸ

"ಹೂಡಿಕೆಯ ಸಾಮರ್ಥ್ಯವು ಒಟ್ಟಾರೆ ಸಮಸ್ಯೆಯ ಒಂದು ಆಯಾಮವಷ್ಟೆ. ಸ್ಪರ್ಧಾತ್ಮಕತೆ ಈಗ ನಮ್ಮ ದೇಶದ ಗಡಿಗಳಗಷ್ಟೇ ಸೀಮಿತವಾಗಿಲ್ಲ. ತಂತ್ರಜ್ಞಾನದ ಲಭ್ಯತೆ, ವಸ್ತುಗಳ ವೆಚ್ಚ, ಮೂಲಸೌಕರ್ಯದ ವೆಚ್ಚ, ಮತ್ತು ನುರಿತ ಕೆಲಸಗಾರರ ಲಭ್ಯತೆ ಮುಂತಾದವುಗಳೆಲ್ಲ ಹೂಡಿಕೆಯ ಮಟ್ಟವನ್ನು ನಿರ್ಧರಿಸುತ್ತವೆ. ಸಹಾಯ ಧನಗಳಂತಹ ಪ್ರೋತ್ಸಾಹಕಗಳಾಗಲೀ ಅಥವಾ ಜಿ.ಎಸ್.ಟಿ.ಯನ್ನು ಕೆಲವು ವರ್ಷ ಕಡಿಮೆ ಮಾಡುವುದಾಗಲೀ ಉತ್ಪಾದನೆಯನ್ನು ಆರಂಭಿಸಲು ಸಾಕಾಗುವುದಿಲ್ಲ." ಎಂದು ಅನುಭವಿ ಕೈಗಾರಿಕೋದ್ಯಮಿಯೊಬ್ಬರು ಉದ್ದಿಮೆಗಳ ಸಮಸ್ಯೆಗಳನ್ನು ತೆರೆದಿಟ್ಟರು.

ಮತ್ತೊಂದು ಬಹಳ ಮುಖ್ಯವಾದ ವಿಷಯವೆಂದರೆ 'ಸಂಶೋಧನೆ ಮತ್ತು ಅಭಿವೃದ್ಧಿಗೆ ನಾವು ಹೆಚ್ಚಿನ ಗಮನ ನೀಡುತ್ತಿಲ್ಲ. ಸಾಗಾಣಿಕೆ ವ್ಯವಸ್ಥೆ ಹಾಗೂ ಮೂಲಸೌಕರ್ಯಗಳು ಕೂ ಯಾವುದೇ ಕೈಗಾರಿಕೆಗೆ ಬಹಳ ಅಗತ್ಯ' ಎಂದು ಈ ಬಾರಿಯ ಜಿಐಎಂನಲ್ಲಿ ಭಾಗವಹಿಸಿದವರೊಬ್ಬರು ಹೇಳಿದರು.

ಸಣ್ಣ ಕೈಗಾರಿಕೆಗಳ ಸಮಸ್ಯೆಗಳ ನಿರ್ಲಕ್ಷ್ಯ

ಕೋವಿಡ್–19 ರ ಅವಧಿಯಲ್ಲಿ ಸಣ್ಣ ಕೈಗಾರಿಕೆಗಳು ಬಹಳ ಹೊಡೆತ ತಿಂದವು. ಆರ್ಥಿಕತೆಯಲ್ಲಿ ಹೆಚ್ಚು ಉದ್ಯೋಗ ಸೃಷ್ಟಿಸುವ ಹಾಗೂ ರಫ್ತು ಮಾಡುವ ಸಣ್ಣ ಕೈಗಾರಿಕೆಗಳ ಬಗ್ಗೆ ಸರ್ಕಾರ ನಿರ್ಲಕ್ಷ್ಯ ತಾಳಿವೆ. "ಮುಖ್ಯ ಎಂಜಿನ್ನಿಗೇ ಸಾಮರ್ಥ್ಯದ ಕೊರತೆ ಇರುವಾಗ ಡಬಲ್ ಎಂಜಿನ್ ಏನು ಮಾಡಕ್ಕಾಗುತ್ತೇ" ಎಂದು ಸಣ್ಣ ಕೈಗಾರಿಕೆಗಳ ಮಾಲೀಕರೊಬ್ಬರು ಮಾರ್ಮಿಕವಾಗಿ ನುಡಿದರು.



ನವ ಉದಾರೀಕರಣ ಯುಗದಲ್ಲಿ 'ವ್ಯವಹಾರ ಮಾಡುವುದು ಸರ್ಕಾರಗಳ ಕೆಲಸವಲ್ಲ' ಎಂಬ ಧ್ಯೇಯದಡಿಲ್ಲಿ, ಸರ್ಕಾರಗಳು ಸಾರ್ವಜನಿಕ ರಂಗದ ಉದ್ದಿಮೆಗಳನ್ನು ವರ್ಷದಿಂದ ವರ್ಷಕ್ಕೆ ಮುಚ್ಚುತ್ತಾ ಅಥವಾ ಖಾಸಗಿಯವರಿಗೆ ಪರಭಾರೆ ಮಾಡುತ್ತಾ ಉದ್ಯೋಗ ಸೃಷ್ಟಿ ಮತ್ತು ಅಭಿವೃದ್ಧಿ ಕಾರ್ಯಗಳ ಗುರಿಸಾಧನೆಗಾಗಿ ಖಾಸಗಿ ರಂಗವನ್ನು ಅವಲಂಬಿಸಿವೆ. ಇದಕ್ಕಾಗಿ ಕೈಗಾರಿಕೆ ಸ್ಥಾಪಿಸಲು ಭೂಮಿ, ನೀರು, ವಿದ್ಯುತ್, ಮೂಲಭೂತ ಸೌಲಭ್ಯಗಳು ಹಾಗೂ ಹಲವಾರು ಪ್ರೋತ್ಸಾಹನೆ ಮತ್ತು ರಿಯಾಯಿತಿಗಳನ್ನು ಮನಸೋಇಚ್ಛೆ ನೀಡಲಾಗುತ್ತದೆ.

ಅಭಿವೃದ್ಧಿಯ ಭ್ರಮೆ ಸೃಷ್ಟಿಸುವ ಹೂಡಿಕೆ ಸಮಾವೇಶ

ಹರ್ಷ

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ರಾಜ್ಯ ಸರ್ಕಾರವು ನವೆಂಬರ್ 2–4 ರವರೆಗೆ ಏರ್ಪಡಿಸಿತ್ತು.

'ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶ–2022 ಒಟ್ಟು ರೂ. 10 ಲಕ್ಷ ಕೋಟಿ ಬಂಡವಾಳ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಇದರಿಂದ ರಾಜ್ಯದಲ್ಲಿ ಮುಂಬರುವ ವರ್ಷಗಳಲ್ಲಿ 10 ಲಕ್ಷ ಉದ್ಯೋಗಗಳು ಸೃಷ್ಟಿಯಾಗುವ ಸಾಧ್ಯತೆ ಇದೆ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ಹೇಳಿದ್ದಾರೆ. ಇದರಲ್ಲಿ ಈ ಬಾರಿಯ ಹೂಡಿಕೆ ಒಪ್ಪಂದಗಳಲ್ಲಿ ಅತಿ ಹೆಚ್ಚು ಒಪ್ಪಂದ ಇಂಧನ ಕ್ಷೇತ್ರದಲ್ಲಿ ಆಗಿದ್ದು, ಹಸಿರು ಇಂಧನ ವಲಯದಲ್ಲಿ ರೂ.2 ಲಕ್ಷ ಕೋಟಿ, ಗ್ರೀನ್ ಹೈಡ್ರೋಜನ್ ಕ್ಷೇತ್ರದಲ್ಲಿ ರೂ.40 ಸಾವಿರ ಕೋಟಿ ಬಂಡವಾಳ ಹೂಡಿಕೆಗೆ ಒಪ್ಪಂದ ಆಗಿದೆ ಎನ್ನಲಾಗಿದೆ.

ಈ ಅಂಕಿಅಂಶಗಳ ಒಳಹೊಕ್ಕು ನೋಡಿದರೆ ಈಗಾಗಲೇ ಕಾರ್ಯಾಚರಣೆಯಲ್ಲಿರುವ ಜಿಂದಾಲ್ ತರಹದ ಬೃಹತ್ ಉದ್ದಿಮೆಗಳು ತಮ್ಮ ಘಟಕಗಳ ವಿಸ್ತರಣೆಯನ್ನು ಕೈಗೊಂಡಿದ್ದು ಅಂತಹವುಗಳ ಲೆಕ್ಕಹಿಡಿದರೆ ಶೇ. 30 ರಷ್ಟು ಬಂಡವಾಳ ಹೂಡಿಕೆ ಆಗಿರುವುದನ್ನೇ ಎಂ.ಒ.ಯು ಮಾಡಿಕೊಳ್ಳಲಾಗಿದೆ ಎನ್ನಲಾಗುತ್ತಿದೆ. ಅಲ್ಲದೇ ಏಪ್ರಿಲ್ ನಲ್ಲಿ ನವದೆಹಲಿಯಲ್ಲಿ ನಡೆದ ವಿಂಡ್ ಎನರ್ಜಿ 2022 ಸಮ್ಮೇಳನದಲ್ಲಿ ಕ್ರೆಡೆಲ್ (KREDL) ಸಂಸ್ಥೆಯು ರೂ. 61,000 ಕೋಟಿ ಮೊತ್ತದ ಹೊಸ ಪ್ರಸ್ತಾವನೆಗಳಿಗೆ ಎಂ.ಒ.ಯು ಸಹಿ ಮಾಡಿರುವ ಪ್ರಸ್ತಾವನೆಗಳೂ ಸಹ ಸೇರಿವೆ ಎನ್ನಲಾಗಿದೆ.

ಕಳೆದ 4 ವರ್ಷಗಳಲ್ಲಿ 1110 ಕೈಗಾರಿಕಾ ಪ್ರಸ್ತಾವನೆಗಳಿಗೆ ರಾಜ್ಯವು ಅನುಮೋದನೆ ನೀಡಿದ್ದು ಇದರಿಂದ ರೂ. 1.30 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮತ್ತು 4.50 ಲಕ್ಷ ಉದ್ಯೋಗ ಸೃಷ್ಟಿಯಾಗುತ್ತದೆಂದು ಹೇಳಲಾಗಿದೆ. ಆದರೆ ಈಪೈಕಿ ಶೇ. 25 ರಷ್ಟು ಕಾರ್ಯಗತವಾಗುವುದೇ ಹೆಚ್ಚು. ಇಂತಹ ಪ್ರಸ್ತಾವನೆಗಳ ಆಡಿಟ್ ಮಾಡುವುದರಿಂದ ಜನರಿಗೆ ಕೈಗಾರಿಕಾಭಿವೃದ್ಧಿಯ ಬಗ್ಗೆ ನಿಖರ ಮಾಹಿತಿ ಸಿಗುತ್ತದೆ.

ಇಂತಹ ಸಮಾವೇಶಗಳನ್ನು ರಾಜ್ಯವು ಸುಮಾರು 2000ನೇ ವರ್ಷದಿಂದ ಪ್ರತಿ ಮೂರ್ನಾಲ್ಕು ವರ್ಷಗಳಿಗೊಮ್ಮೆ ಆಯೋಜಿಸುತ್ತಾ ಬಂದಿದೆ. ನವ ಉದಾರೀಕರಣ ಕಾಲಘಟ್ಟದಲ್ಲಿ ರಾಜ್ಯ ಸರ್ಕಾರಗಳು ತಾ ಮುಂದು ನಾ ಮುಂದು ಎನ್ನುತ್ತಾ ತಮ್ಮಲ್ಲಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಪ್ರಚುರಪಡಿಸಲು ಮತ್ತು ಹೂಡಿಕೆಗೆ ಹಲವಾರು ಪ್ರೋತ್ಸಾಹನೆ ಮತ್ತು ರಿಯಾಯಿತಿಗಳನ್ನು ನೀಡಿ ವಿಶ್ವ ಬಂಡವಾಳ ಹೂಡಿಕಯನ್ನು ಆಕರ್ಷಿಸಲು ಹಲವು ರಾಜ್ಯಗಳೂ ಸಹ ಆಗಿದ್ದಾಂಗ್ಗೆ ಆಯೋಜಿಸುವುದನ್ನು ಗಮನಿಸಿದ್ದೇವೆ.

ನವ ಉದಾರೀಕರಣ ಯುಗದಲ್ಲಿ 'ವ್ಯವಹಾರ ಮಾಡುವುದು ಸರ್ಕಾರಗಳ ಕೆಲಸವಲ್ಲ' ಎಂಬ ಧ್ಯೇಯದಡಿಲ್ಲಿ, ಸರ್ಕಾರಗಳು ಸಾರ್ವಜನಿಕ ರಂಗದ ಉದ್ದಿಮೆಗಳನ್ನು ವರ್ಷದಿಂದ ವರ್ಷಕ್ಕೆ ಮುಚ್ಚುತ್ತಾ ಅಥವಾ ಖಾಸಗಿಯವರಿಗೆ ಪರಭಾರೆ ಮಾಡುತ್ತಾ ಉದ್ಯೋಗ ಸೃಷ್ಟಿ ಮತ್ತು ಅಭಿವೃದ್ಧಿ ಕಾರ್ಯಗಳ ಗುರಿಸಾಧನೆಗಾಗಿ ಖಾಸಗಿ ರಂಗವನ್ನು ಅವಲಂಬಿಸಿವೆ. ಇದಕ್ಕಾಗಿ ಕೈಗಾರಿಕೆ ಸ್ಥಾಪಿಸಲು ಭೂಮಿ, ನೀರು, ವಿದ್ಯುತ್, ಮೂಲಭೂತ ಸೌಲಭ್ಯಗಳು ಹಾಗೂ ಹಲವಾರು ಪ್ರೋತ್ಸಾಹನೆ ಮತ್ತು ರಿಯಾಯಿತಿಗಳನ್ನು ಮನಸೋಇಚ್ಛೆ ನೀಡಲಾಗುತ್ತದೆ.

ಉದ್ಯೋಗ ಸೃಷ್ಟಿ, ಹೂಡಿಕೆಯ ಲಾಭ ಮತ್ತು ಸಂಪನ್ಮೂಲ, ಪರಿಸರ & ರಿಯಾಯಿತಿಗಳ ನಷ್ಟದ ಲೆಕ್ಕಾಚಾರ:–

ಸರ್ಕಾರಗಳು ಜನತೆಯ ಹಿತವನ್ನು ಬಲಿಕೊಟ್ಟು ಖಾಸಗಿ ರಂಗಕ್ಕೆ ಎಲ್ಲವನ್ನೂ ಧಾರೆ ಎರೆದುಕೊಡಲು ಎಷ್ಟೊಂದು ಬದ್ಧವಾಗಿವೆಯೆಂದರೆ ಖಾಸಗಿ ರಂಗದ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು



ಕೈಗಾರಿಕೋದ್ಯಮಿಗಳಿಗೆ ನೀಡಲಾಗುವ ರಿಯಾಯಿತಿ ದರದ ಭೂಮಿ, ನೀರು, ವಿದ್ಯುತ್, ರಸ್ತೆ, ಇತ್ಯಾದಿ ಮೂಲಭೂತ ಸೌಲಭ್ಯಗಳು ಮತ್ತು ಪರಿಸರದ ಮೇಲುಂಟಾಗುವ ಪರಿಣಾಮಗಳು ಹಾಗೂ ನೀಡಲಾಗುವ ಹಲವಾರು ತೆರಿಗೆ ವಿನಾಯಿತಿಗಳು, ಪ್ರೋತ್ಸಾಹನೆ ಮತ್ತು ರಿಯಾಯಿತಿಗಳ ಒಟ್ಟು ಮೊತ್ತಕ್ಕೆ ಅವು ಸೃಜಿಸುವ ಉದ್ಯೋಗಗಳು ಮತ್ತು ಅವು ಗಳಿಸುವ ಲಾಭಕ್ಕೆ ಸರಿಸಮಾನವಾಗುತ್ತವೆಯೇ ಎಂಬ ಬಗ್ಗೆ ರಾಜ್ಯದ ಜನತೆಗೆ ಲಭಿಸುವ ಯಾವುದೇ ಲಾಭ–ನಷ್ಟ ಲೆಕ್ಕಾಚಾರಗಳನ್ನು ಸರ್ಕಾರಗಳು ಮಾಡಿಟ್ಟುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಅಂದರೆ ಕನಿಷ್ಟ ಪಕ್ಷ ರಾಜ್ಯದ ಖಜಾನೆಯಿಂದ ಈ ಕೈಗಾರಿಕೆಗಳ ಉದ್ಧಾರಕ್ಕಾಗಿ ಹೊರಹರಿಯುವ ಒಟ್ಟು ಆರ್ಥಿಕ ವೆಚ್ಚದ ಕುರಿತು ಸ್ಪಷ್ಟ ಅಧ್ಯಯನವೇ ನಡೆಯುವುದಿಲ್ಲ.

ಉದಾಹರಣೆಗೆ, ಅತಿ ದೊಡ್ಡ ಕಂಪನಿಗಳಾದ ಟಾಟಾ ಮೋಟಾರರ್ಸ್, ಹೊಂಡಾ ಮೋಟಾರ್ಸ್ ಇತ್ಯಾದಿ ಕಂಪನಿಗಳಿಗೆ ಅವು ಕೇಂದ್ರ ಸರ್ಕಾರಕ್ಕೆ ಪಾವತಿಸಬೇಕಾದ ಜಿ.ಎಸ್.ಟಿ ತೆರಿಗೆಯ ಮೊತ್ತವನ್ನು ಪಾವತಿಸಲು ರಾಜ್ಯ ಸರ್ಕಾರವು 15–20 ವರ್ಷಗಳ ಕಾಲ ಬಡ್ಡಿರಹಿತ ಜಿ.ಎಸ್.ಟಿ ಸಾಲವನ್ನು ನೀಡುತ್ತದೆ.

ಕೈಗಾರಿಕೆ ನೀತಿ 2020–25 ರಡಿ ವಿತ್ತೀಯ ಸೌಲಭ್ಯಗಳು:

* ಮುದ್ರಾಂಕ ಮತ್ತು ನೋಂದಣಿ ಶುಲ್ಕ ವಿನಾಯಿತಿ
* ಭೂಪರಿವರ್ತನೆ ಶುಲ್ಕ
* ವಿದ್ಯುತ್ ತೆರಿಗೆ ವಿನಾಯಿತಿ ಶುಲ್ಕ
* ಸಾಲದ ಮೇಲಿನ ಬಡ್ಡಿ ವಿನಾಯಿತಿ
* ಗುಣಮಟ್ಟ ದೃಢೀಕರಣ ಸಹಾಯಧನ
* ತ್ಯಾಜ್ಯ ಸಂಸ್ಕರಣ ಘಟಕ ಅಳವಡಿಸಲು ಸಹಾಯಧನ
* ಸಂಶೋಧನೆ & ಅಭಿವೃದ್ಧಿಗೆ ಬಂಡವಾಳ ಸಹಾಯಧನ

ವ್ಯಾಪಾರವನ್ನು ಸರಳಗೊಳಿಸುವ ಪ್ರಕ್ರಿಯೆ (Ease of doing business): ವ್ಯಾಪಾರವನ್ನು ಸರಳಗೊಳಿಸುವ ಪ್ರಕ್ರಿಯೆ ಹೆಸರಿನಲ್ಲಿ ಕಾರ್ಮಿಕ ಕಾನೂನುಗಳನ್ನು ಮಾಲೀಕರ ಪರವಾಗಿ ತಿದ್ದಪಡಿ ತರಲಾಗಿದೆ. 2014ರಲ್ಲಿ ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬಂದಾಗ EoDB ಯ ವಿಶ್ವ ರ್‍ಯಾಂಕಿಂಗ್ ನಲ್ಲಿ ಭಾರತವು167 ನೇ ಸ್ಥಾನದಿಂದ 2019 ರ ಹೊತ್ತಿಗೆ 64 ನೇ ಸ್ಥಾನಕ್ಕೇರಿದೆ. ಆದರೆ, ಇಂತಹ ಸಾಧನೆಯನ್ನು ಹಸಿವಿನ ಸೂಚ್ಯಂಕ, ನಿರುದ್ಯೋಗ ಸೂಚ್ಯಂಕ, ಮಾನವ ಅಭಿವೃದ್ಧಿ ಸೂಚ್ಯಂಕ ಇತ್ಯಾದಿಗಳಲ್ಲಿ ಸಾಧಿಸಲಾಗಿಲ್ಲ!

ಕೈಗಾರಿಕೆ ನೀತಿ 2020–25 ರ ಕಾರ್ಮಿಕ ಸುಧಾರಣೆಗಳು:–

* ಕೈಗಾರಿಕೆಗಳು ತಾವು ಈ ಸೌಲಭ್ಯಗಳನ್ನು ಪಡೆಯುವ ಸಂದರ್ಭದಲ್ಲಿ ತಾವು ತಿಳಿಸಿರುವಷ್ಟು ಉದ್ಯೋಗಗಳನ್ನು ಸೃಷ್ಟಿಸುತ್ತಿರುವ ಕುರಿತು ಕೈಗಾರಿಕೆ ಯೋಜನೆ ಅನುಷ್ಠಾನಗೊಂಡ ನಂತರದಲ್ಲಿ ಖಾತರಿ ಮಾಡಿಕೊಳ್ಳುವ ಯಾವುದೇ ವ್ಯವಸ್ಥೆ ಇರುವುದಿಲ್ಲ.
* 50ಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಕೈಗಾರಿಕೆಗಳು ಒಟ್ಟಾರೆ ಹುದ್ದೆಗಳಲ್ಲಿ ಸರಾಸರಿ ಶೇ 70ರಷ್ಟು ಹುದ್ದೆಗಳನ್ನು ಮತ್ತು ಡಿ ಗುಂಪಿನ ಹುದ್ದೆಗಳಾದ ಸ್ವಚ್ಛತಾ ಕೆಲಸಗಳ ಹುದ್ದೆಗಳಲ್ಲಿ ಶೇ 100 ರಷ್ಟನ್ನು ಸ್ಥಳೀಯರಿಗೆ ಮೀಸಲಿರಿಸಬೇಕು. ಇದನ್ನು ಸಹ ಖಾತರಿ ಮಾಡಿಕೊಳ್ಳುವ ಯಾವುದೇ ವ್ಯವಸ್ಥೆ ಇರುವುದಿಲ್ಲ, ಬದಲಿಗೆ ಕೈಗಾರಿಕೆಗಳು ಸ್ವಯಂ ದೃಢೀಕರಣ ಸಲ್ಲಿಸಲು ವ್ಯವಸ್ಥೆ ಮಾಡಲಾಗಿದೆ.
* ಮಹಿಳಾ ಕಾರ್ಮಿಕರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ನೋಂದಣಿ ಮೂಲಕ ಅವಕಾಶ
* ಗುತ್ತಿಗೆ ಕೆಲಸವನ್ನು ವ್ಯಾಪಕಗೊಳಿಸಲು ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶ) ಕಾಯಿದೆ 1946ಕ್ಕೆ ತಿದ್ದುಪಡಿ
* ವಿಶೇಷ ಆರ್ಥಿಕ ವಲಯ/ ಐಟಿ ವಲಯದಲ್ಲಿ ಕಾರ್ಮಿಕ ಕಾನೂನಿನಡಿ ಕೆಲವು ವಿನಾಯಿತಿ
* ಬಾಯ್ಲರ್ ಸುರಕ್ಷತೆ ಬಗ್ಗೆ ಕೈಗಾರಿಕೆಗಳು ಸ್ವಯಂ ದೃಢೀಕರಣ ಸಲ್ಲಿಸಲು ವ್ಯವಸ್ಥೆ

ಏಕಗವಾಕ್ಷಿ ಮಂಜೂರಾತಿ ಸಮಿತಿಗಳು–ಒಂದು ಕಿಟಕಿ ಹಲವು ಬಾಗಿಲುಗಳು:–

ಹೊಸ ಕೈಗಾರಿಕಾ ಪ್ರಸ್ತಾವನೆಗಳಿಗೆ ಸರ್ಕಾರವು ಮಂಜೂರಾತಿ ನೀಡಲು ಜಿಲ್ಲಾ, ರಾಜ್ಯ ಮತ್ತು ಉನ್ನತ ಮಟ್ಟದ 3 ಸಮಿತಿಗಳನ್ನು ರಚಿಸಿದ್ದರೂ, ಈ ಸಮಿತಿಗಳು ಅನುಮೋದಿಸುವ ಸಂದರ್ಭದಲ್ಲೂ ಉದ್ದಿಮೆದಾರರಿಂದ ವಸೂಲಾತಿ ಇದ್ದು ಅನುಮೋದನೆಯಾದ ಮೇಲೂ ಸಹ ಹತ್ತಾರು ಇಲಾಖೆಗಳಿಂದ ಅನುಮೋದನೆ/ ಪರವಾನಗಿ ಪಡೆಯಲು ವಿಶೇಷವಾಗಿ ಸಣ್ಣ ಉದ್ದಿಮೆದಾರರು ಹೆಣಗಬೇಕಾಗಿದೆ. ಆದ್ದರಿಂದಲೇ ಈ ಏಕಗವಾಕ್ಷಿ ಮಂಜೂರಾತಿಯನ್ನು "ಒಂದು ಕಿಟಕಿ ಹಲವು ಬಾಗಿಲುಗಳು" ಎಂದು ಹಾಸ್ಯ ಮಾಡುವುದುಂಟು.

ಕೈಗಾರಿಕಾ ಭೂಮಿ:–

ಬೆಂಗಳೂರು ಬಿಟ್ಟು, ಮಂಗಳೂರು, ಮೈಸೂರು, ಹುಬ್ಬಳ್ಳಿ–ಧಾರವಾಡ, ಕಲಬುರಗಿ, ಬಳ್ಳಾರಿ, ತುಮಕೂರುಗಳಲ್ಲಿ ಉದ್ಯಮಗಳ ಸ್ಥಾಪನೆಗಾಗಿ ಸುಮಾರು 50 ಸಾವಿರ ಎಕರೆ ವಿಸ್ತೀರ್ಣದ 'ಲ್ಯಾಂಡ್ ಬ್ಯಾಂಕ್' ಇದೆ ಎನ್ನಲಾಗಿದೆ. ಬೆಂಗಳೂರಿನ ಆಸುಪಾಸಿನಲ್ಲಿ ಇಷ್ಟೇ ಪ್ರಮಾಣದ ಭೂಮಿ ಸ್ವಾಧೀನದ ವಿವಿಧ ಹಂತದಲ್ಲಿದೆ.

ಈಗಾಗಲೇ ಹಂಚಿಕೆಯಾಗಿರುವ ಭೂಮಿ ಅನುಪಯುಕ್ತತೆ:–

ಕಳೆದ 20 ವರ್ಷಗಳಿಂದ ಲಕ್ಷಾಂತರ ಎಕರೆ ಭೂಮಿಯನ್ನು ಕೈಗಾರಿಕೆ ಸ್ಥಾಪನೆಗೆ ಹಂಚಿಕೆಪಡೆದಿದ್ದು ಈ ಪೈಕಿ ಹಲವು ಕಂಪನಿಗಳು ಕೈಗಾರಿಕೆಯನ್ನೇ ಸ್ಥಾಪಿಸದೇ ಹಾಗೆ ಭೂಮಿ ಉಳಿಸಿಕೊಂಡಿವೆ. ಇಂತಹ ಸಾವಿರಾರು ಎಕರೆ ಭೂಮಿಯನ್ನು ವಾಪಸ್ ಹಿಂಪಡೆದು ರೈತರಿಗೆ ವಾಪಸ್ ನೀಡಲಾಗಲೀ ನೈಜ ಉದ್ದಿಮೆಗಳಿಗೆ ಪುನರ್–ಹಂಚಿಕೆ ಮಾಡಲಾಗಲೀ ಸರ್ಕಾರಗಳು ದಾರ್ಷ್ಟ್ಯತೆ ಹೊಂದಿಲ್ಲ. ಉದಾಹರಣೆಗೆ 2010 ರ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶದಲ್ಲಿ ಉಕ್ಕು ಕೈಗಾರಿಕೆ ಘಟಕ ಸ್ಥಾಪಿಸಲು 2600 ಎಕರೆ ಭೂಮಿಯನ್ನು ಹಂಚಿಕೆ ಪಡೆದಿದ್ದ ಅರ್ಸೆಲರ್–ಮಿತ್ತಲ್ ಕಂಪನಿಯು ಯೋಜನೆಯನ್ನು ಕಾರ್ಯಗತಗೊಳಿಸಲು ವಿಫಲವಾಗಿದ್ದು ಹತ್ತಾರು ವರ್ಷಗಳ ಕಾಲ ಭೂಮಿಯನ್ನು ಹಾಗೇ ಉಳಿಸಿಕೊಂಡಿದೆ. ಹಾಗೇ ಕಲ್ಯಾಣಿ ಗುಂಪಿನ ಕಂಪನಿ, ರಿಲಯನ್ಸ್, ಇತ್ಯಾದಿಯಂತಹ ದೊಡ್ಡ ಕಂಪನಿಗಳು ಹಂಚಿಕೆ ಪಡೆದ ಭೂಮಿಯನ್ನು ಕೈಗಾರಿಕೆಗೆ ಬಳಸದೇ ಹಾಗೇ ಉಳಿಸಿಕೊಂಡಿದ್ದು ಹೊಸದಾಗಿ ರೈತರಿಂದ ಭೂಮಿ ಸ್ವಾಧೀನ ಮಾಡುವ ಮುಂಚೆ ಇಂತಹ ಖಾಲಿ ಭೂಮಿಯನ್ನು ಹಿಂಪಡೆದು ಬಳಸಿಕೊಳ್ಳಬೇಕಿದೆ.

ಚುನಾವಣಾ ಪ್ರಚಾರಕ್ಕೆ ಭೂಮಿಕೆ

ಇಂತಹ ಸಮಾವೇಶಗಳ ಮೂಲಕ ಯಾವುದೇ ಬಂಡವಾಳ ಹೂಡಿಕೆ ಮತ್ತು ಹೊಸ ತಂತ್ರಜ್ಞಾನ ರಾಜ್ಯಕ್ಕೆ ಬರುವುದಿಲ್ಲ. ಆಡಳಿತಾರೂಢ ಪಕ್ಷಗಳು ಚುನಾವಣೆಗೆ ಮುನ್ನ ಜನರನ್ನು ದೊಡ್ಡ ಮಟ್ಟದ ಅಭಿವೃದ್ಧಿ ಆಗುತ್ತಿದೆಯೆಂದು ಪ್ರಚಾರ ಮತ್ತು ಮರಳು ಮಾಡಲು ಬಳಸಿಕೊಳ್ಳುತ್ತವಷ್ಟೇ.





ಕೈಗಾರಿಕೆಗಳಲ್ಲಿನ ಹೊಸ ಬದಲಾವಣೆಗಳು ಮತ್ತು ಕಾರ್ಮಿಕರು

ಕೆ.ಎನ್.ಉಮೇಶ್

ಜಗತ್ತಿನಾದ್ಯಂತ ಬಂಡವಾಳಾಹಿಯು ಸನ್ನದ್ದಾಗುತ್ತಿರುವ ಕೈಗಾರಿಕಾ ಕ್ರಾಂತಿ 4.0, IR4 ಗಾಗಿ ರಾಷ್ಟ್ರದ ಹಾಗು ರಾಜ್ಯದ ಕೈಗಾರಿಕ ರಂಗವು ಸಹಾ ಸಜ್ಜುಗೊಳ್ಳುತ್ತಿದೆ. ಅದರಂತೆ 2030 ರ ವೇಳೆಗೆ ತಯಾರಿಕಾ ವಲಯದಲ್ಲಿ ಇಂಡ್ರಸ್ಟ್ರಿಯಲ್ ಇಂಟರ್‌ನೆಟ್ ಆಫ್ ಥಿಂಗ್ಸ್ (IIoT) ಮತ್ತು ರೋಬೊಟಿಕ್ಸ್ ಹಾಗು COBATS ಆಧಾರಿತ ಉತ್ಪಾದನೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಅದಕ್ಕಾಗಿ ಹಾಲಿ ITI ತರಬೇತಿ ಆಧಾರಿತ ಕಾರ್ಮಿಕರ ಜಾಗದಲ್ಲಿ ಕನಿಷ್ಟ ಡಿಪ್ಲೋಮಾ ಅಥವಾ ಕೃತಕ ಬುದ್ದಿಮತ್ತೆ ಹಾಗು ರೋಬೊಟಿಕ್ಸ್ ಇಂಜನಿಯರಿಂಗ್ ಅಥವಾ ಇತರೆ ಇಂಜನಿಯರಿಂಗ್ ಪದವಿಧರರ ನೇಮಕಾತಿಯನ್ನು ಉತ್ತೇಜಿಸಲಾಗುತ್ತಿದೆ. ಅವರನ್ನು ಸಹಾ ಬಹುತೇಕ ನಿಶ್ಚಿತ ಕಾಲಾವಧಿಯ ಕಾರ್ಮಿಕರನ್ನಾಗಿ (FTE) ನೇಮಕ ಮಾಡಿಕೊಳ್ಳಲಾಗುತ್ತಿದೆ. ಇದಕ್ಕೆ ಅನುವುಗೊಳಿಸಲು ಹಾಲಿ ಕಾಯಂ ಕಾರ್ಮಿಕರನ್ನು ಸ್ವಯಂ ನಿವೃತ್ತಿ ಮೂಲಕ ಹೊರದಬ್ಬಲಾಗುತ್ತಿದೆ. ಕಾರ್ಖಾನೆಗಳ ವಿಲೀನ, ಅವಿಲೀನ, ಮುಚ್ಚುವಿಕೆ ಅಥವಾ ಲೇಆಫ್, ರಿಟ್ರೇಚಮೆಂಟ್ ಮೂಲಕವು ಖಾಯಂ ಕಾರ್ಮಿಕರನ್ನು ಹೊರಹಾಕಲಾಗುತ್ತಿದೆ. ಆ ಮೂಲಕ ನಿಶ್ಚಿತ ಕಾಲಾವಧಿಯ ಕಾರ್ಮಿಕರ ನೇಮಕಕ್ಕೆ ಅನುವುಗೊಳಿಸಲಾಗುತ್ತಿದೆ. ಕಾಯಂ ಕಾರ್ಮಿಕರು ಮಾತ್ರವಲ್ಲದೆ ಗುತ್ತಿಗೆ ಕಾರ್ಮಿಕರನ್ನು ಸಹಾ ಹೊರ ದಬ್ಬಲಾಗುತ್ತಿದೆ.

ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಮೌಲ್ಯ ಸೇರ್ಪಡೆಗೊಳಿಸಲು ಕೆಲಸಗಳನ್ನು ಹೊರಗುತ್ತಿಗೆ ನೀಡಲು, ರಿಮೋಟ್ ವರ್ಕಿಂಗ್ (ಕೆಲಸದ ಸ್ಥಳವನ್ನು ಮನೆಯಿಂದಲೇ ಕೆಲಸ ಮಾಡುವವರನ್ನು) ನಿರ್ವಹಿಸಲು ಮುಂದಾಗುತ್ತಿದೆ. ಆ ಮೂಲಕ ಮಿಗುತಾಯ ಹೆಚ್ಚಿಸಿಕೊಳ್ಳಲು ಬಂಡವಾಳವು ಯತ್ನಿಸಿದೆ. ರಿಮೋಟ್ ವರ್ಕಿಂಗ್ (ಮನೆಯಿಂದಲೆ ಕೆಲಸ) ವಿಧಾನವು ಕೋವಿಡ್ ಲಾಕ್ಡೌನ್ ವೇಳೆಯಲ್ಲಿ ತೀವ್ರಗೊಂಡಿದೆ.

ಮೂರು ದಶಕಗಳ ನವಉದಾರವಾದ:

ಖಾಸಗೀಕರಣದ ನೂತನ ಹಾದಿ – NMP:

ನಮ್ಮ ದೇಶದ ಹಾಗೂ ರಾಜ್ಯವು ನವಉದಾರವಾದಿ ನೀತಿಗಳಿಗೆ ತೆರದುಕೊಂಡು ಮೂರು ದಶಕಗಳನ್ನು ಪೂರೈಸುತ್ತಿರುವಾಗ, ನವ ಉದಾರವಾದಿ ಬಂಡವಾಳಶಾಹಿ ಆರ್ಥಿಕತೆಯು ಸಂರಚನಾತ್ಮಕ ಬಿಕ್ಕಟ್ಟಿಗೆ (Structural Crisis) ಒಳಪಟ್ಟಿದೆ. ಇದರಿಂದ ಹೊರ ಬರಲು ಸಾರ್ವಜನಿಕ ಆಸ್ತಿಯನ್ನು, ಸಾರ್ವಜನಿಕ ಉದ್ದಿಮೆಗಳನ್ನು ನಗದಿಕರಿಸಲು ರಾಷ್ಟ್ರೀಯ ನಗದಿಕರಣ ಕೊಳುವೆ ಮಾರ್ಗ (NMP) ವನ್ನು ಕೇಂದ್ರ ಸರಕಾರದ ಮಾದರಿಯಲ್ಲಿ ರಾಜ್ಯ ಸರ್ಕಾರವು ರೂಪಿಸಿ ಜಾರಿಗೆ ಮುಂದಾಗಿದೆ.

ಕೇಂದ್ರ ಎನ್‌ಡಿಎ ಸರ್ಕಾರ 2ನೇ ಅವಧಿಯ 100 ದಿನಗಳಲ್ಲಿ 46 ಸಾರ್ವಜನಿಕ ಉದ್ದಿಮೆಗಳನ್ನು ಮಾರುವ ಅಥವಾ ಖಾಸಗೀಕರಿಸುವ ನೀತಿ ಆಯೋಗದ ಶಿಫಾರಸ್ಸಿನ ಆಧಾರಿತ ಗುರಿ ಸಾಧಿಸಲಾಗದ ಕಾರಣ ರಾಷ್ಟ್ರೀಯ ನಗದಿಕರಣ ಪೈಪ್‌ಲೈನ್ (NMP) ಅನ್ನು ರೂಪಿಸಿ ಜಾರಿಗೆ ಮುಂದಾಗಿದೆ. ಅದರ ಜಾರಿಗಾಗಿ ರಾಷ್ಟ್ರೀಯ ಭೂ ನಗದೀಕರಣ ನಿಗಮವನ್ನು ಸ್ಥಾಪಿಸಿದೆ.

NMP ಮೂಲಕ 2022 ರಿಂದ 2025 ರೊಳಗೆ

- ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಡಿಯ 26,700 ಕಿ.ಮಿ ರಸ್ತೆಯನ್ನು 1.6 ಲಕ್ಷ ಕೋಟಿಗಳಿಗೆ ನಗದಿಕರಿಸಲು ಮುಂದಾಗಿದೆ. ಇದು ಒಟ್ಟು ರಾಷ್ಟ್ರೀಯ ಹೆದ್ದಾರಿಗಳ ಶೇಕಡ 22 ರಷ್ಟಾಗಿದೆ.
- 400 ರೈಲು ನಿಲ್ದಾಣಗಳು, 90 ಪ್ಯಾಸೆಂಜರ್ ಟ್ರೈನ್‌ಗಳು, 1,400 ಕಿಮಿಗಳ ಒಂದು ಮಾರ್ಗದ ರೈಲ್ವೆ ಟ್ರಾಕ್, 741 ಕಿಮಿ ಕೊಂಕಣ ರೈಲ್ವೆ, 15 ರೈಲ್ವೆ ಸ್ಟೇಡಿಯಂಗಳು ಮತ್ತು ಆಯ್ದ ರೈಲ್ವೆ ಕಾಲೋನಿಗಳು, 265 ಗೂಡ್ಸ್ ಶೆಡ್‌ಗಳು, 4 ಪರ್ವತ ರೈಲು ಸೇರಿ ಒಟ್ಟು 1,52,496 ಕೋಟಿ ರೂಗಳ ಆಸ್ತಿ ನಗದಿಕರಣಕ್ಕೆ ಮುಂದಾಗಿದೆ.
- 137 ಮುಖ್ಯ ವಿಮಾನ ನಿಲ್ದಾಣಗಳಲ್ಲಿ 27 ವಿಮಾನ ನಿಲ್ದಾಣಗಳನ್ನು 20,782 ಕೋಟಿ ರೂಗಳಿಗೆ ನಗದೀಕರಿಸಲು, ಉಳಿದಂತೆ ಮುಂಬಯಿ, ದೆಹಲಿ, ಹೈದರಾಬಾದ್ ಮತ್ತು ಬೆಂಗಳೂರು ವಿಮಾನ ನಿಲ್ದಾಣಗಳಲ್ಲಿ ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರ ಹೊಂದಿರುವ ಪಾಲನ್ನು ವಿಕ್ರಯಿಸಲು ಮುಂದಾಗಿದೆ.
- ಪವರ್ ಗ್ರಿಡ್ ನಿಗಮ ಹೊಂದಿರುವ 28608 ಸರ್ಕ್ಯೂಟ್ ಕಿಮಿ ಪ್ರಸರಣ ಲೈನ್‌ಗಳು ಮತ್ತು ಸಂಬಂಧಿತ 262 ಸಬ್ ಸ್ಟೇಷನ್ಸ್‌ಗಳನ್ನು 42500 ಕೋಟಿ ರೂಗಳಿಗೆ ನಗದೀಕರಿಸಲು ಮುಂದಾಗಿದೆ.
- 28747 ಕೋಟಿ ರೂಗಳ 160 ಕಲ್ಲಿದ್ದಲು ಗಣಿಗಳನ್ನು ನಗದೀಕರಿಸಲು ಮುಂದಾಗಿದೆ.
- 35100 ಕೋಟಿ ರೂಗಳ ಟೆಲಿಕಾಂ ಆಸ್ತಿಗಳನ್ನು ನಗದೀಕರಿಸಲು ಗುರುತಿಸಿದೆ. ಇದರಲ್ಲಿ BSNL & MTNL ಒಡೆತನದ 14197 ಟೆಲಿಕಾಂ ಟವರ್‌ಗಳು, 2.86 ಕಿಮಿಗಳ ಭಾರತ್ ನೆಟ್ ಆಪ್ಟಿಕಲ್ ಫೈಬರ್‌ಗಳನ್ನು ಒಳಗೊಂಡಿದೆ.
- ರಾಷ್ಟ್ರೀಯ ಜಲ ವಿದ್ಯುತ್ ನಿಗಮ ಮತ್ತು ರಾಷ್ಟ್ರೀಯ ಥರ್ಮಲ್ ವಿದ್ಯುತ್ ನಿಗಮದ ಒಡೆತನದ 6 ಗಿಗಾ ವ್ಯಾಟ್ ಜಲ ಮತ್ತು ನವೀಕರಿಸಬಹುದಾದ ಶಕ್ತಿ ಆಧಾರಿತ ವಿದ್ಯುತ್ ಉತ್ಪಾದನ ಸಾಮರ್ಥ್ಯವನ್ನು 39832 ಕೋಟಿ ರೂಗಳಿಗೆ ನಗದೀಕರಿಸಲು ಮುಂದಾಗಿದೆ.
- ಭಾರತೀಯ ತೈಲ ನಿಗಮ ನಿಯಮಿತ (IOCL) ಹಿಂದುಸ್ಥಾನ ತೈಲ ನಿಗಮ ನಿಯಮಿತ (HPCL), ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ (GAIL) ಒಡೆತನದ 3930 ಕಿ.ಮೀ.ಗಳ ಪೆಟ್ರೋಲಿಯಂ ಕೊಳವೆ ಮತ್ತು ಉತ್ಪನ್ನಗಳನ್ನು 22,503 ಕೋಟಿ ರೂಗಳಿಗೆ ನಗದೀಕರಿಸಲು ಮುಂದಾಗಿದೆ.
- 24,462 ಕೋಟಿ ರೂಗಳ 8154 ಕಿ.ಮೀ. ನ್ಯಾಚುರಲ್ ಗ್ಯಾಸ್ ಕೊಳವೆ ಮಾರ್ಗಗಳನ್ನು ನಗದೀಕರಿಸಲು ಮುಂದಾಗಿದೆ.
- 9 ಪ್ರಮುಖ ಬಂದರುಗಳ 31 ಯೋಜನೆಗಳನ್ನು 12828 ಕೋಟಿ ರೂಗಳಿಗೆ ನಗದೀಕರಿಸಲು ಮುಂದಾಗಿದೆ.
- ಭಾರತದ ಆಹಾರ ನಿಗಮ (FCI) ಮತ್ತು ಸೆಂಟ್ರಲ್ ವೇರ್ ಹೌಸಿಂಗ್ ಕಾರ್ಪೊರೇಷನ್ ಹೊಂದಿರುವ 210 ಲಕ್ಷ ಟನ್ ಶೇಖರಣ ಸಾಮರ್ಥ್ಯದ ಶೇಕಡ 39 ರಷ್ಟನ್ನು 28900 ಕೋಟಿ ರೂಗಳಿಗೆ ನಗದೀಕರಿಸಲು ಮುಂದಾಗಿದೆ.
- ರಾಷ್ಟ್ರ ರಾಜಧಾನಿಯ 7 ಗೃಹ ಕಾಲೋನಿಗಳನ್ನು ಮತ್ತು 8 ಭಾರತೀಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೋಟೆಲ್‌ಗಳನ್ನು ನಗದೀಕರಿಸಲು ಮುಂದಾಗಿದೆ.
- 11,450 ಕೋಟಿ ರೂಗಳಿಗೆ ಜವಾಹರ್‌ಲಾಲ್ ನೆಹರು ಕ್ರೀಡಾಂಗಣ ಮತ್ತು 3 ಭಾರತದ ಕ್ರೀಡಾ ಪ್ರಾಧಿಕಾರದ ಆಸ್ತಿಗಳಾದ ಒಂದು ರಾಷ್ಟ್ರೀಯ ಸ್ಟೇಡಿಯಂ ಮತ್ತು ಬೆಂಗಳೂರು ಮತ್ತು ಜಿಕರ್‌ಪುರ್‌ನ ಒಟ್ಟು 2 ಪ್ರಾದೇಶಿಕ ಕೇಂದ್ರಗಳು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ನಗದೀಕರಿಸಲು ಮುಂದಾಗಿದೆ.

ಈ ನಗದೀಕರಣಕ್ಕಾಗಿ ಆಸ್ತಿ ಮೌಲ್ಯಗಳನ್ನು ಅಪಮೌಲ್ಯಗೊಳಿಸಿ, ಕಡಿಮೆ ದರ ನಿಗದಿಪಡಿಸಿ, ವಾರ್ಷಿಕ ಗುರಿಯೊಂದಿಗೆ ನಿರ್ದಿಷ್ಟ ಗುರಿಗಳನ್ನು ಇರಿಸಿಕೊಂಡಿದೆ. ಇದೇ ರೀತಿ ನಗದೀಕರಿಸಲು ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರಲಾಗುತ್ತಿದೆ. ಖಾಸಗೀಕರಣದ ನೂತನ ಅವತಾರವಾಗಿ ಆಸ್ತಿ ನಗದೀಕರಣ ಕೊಳವೆ ಮಾರ್ಗವನ್ನು ಕೇಂದ್ರ ಸರ್ಕಾರ ರೂಪಿಸಿ ಜಾರಿಗೊಳಿಸುತ್ತಿದೆ.

ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್ ಅಡಿ (NMP) ರಾಜ್ಯದಲ್ಲಿ 21228.54 ಕೋಟಿ ರೂಗಳ ಸಾರ್ವಜನಿಕ ಉದ್ದಿಮೆಗಳ ಆಸ್ತಿಗಳ ನಗದೀಕರಣಕ್ಕೆ ಯೋಜಿಸಿದೆ. ವಿದ್ಯುತ್ ಪ್ರಸರಣ ಮತ್ತು ವಿತರಣೆ ಸಂಸ್ಥೆಗಳ 7161.70 ಕೋಟಿ ರೂ, ಕೆ.ಎಸ್. ಆರ್.ಟಿ.ಸಿ.ಯ 10413.33 ಕೋಟಿ ರೂ, ವೇರ್ ಹೌಸಿಂಗ್ (ಉಗ್ರಾಣ)ನ 1636.12 ಕೋಟಿ ರೂ, ಇತರೆ ಸಂಸ್ಥೆಗಳ 2017.39 ಕೋಟಿ ರೂಗಳ ಆಸ್ತಿ ನಗರೀಕರಣದ ಅವಕಾಶ ಗುರುತಿಸಿದೆ.

ಭಾರತೀಯ ರಕ್ಷಣಾ ಇಲಾಖೆಯ ಸೈನ್ಯಕ್ಕೂ ಸಹಾ ನಿಶ್ಚಿತ ಕಾಲಾವಧಿಯ ಸೈನಿಕರ ನೇಮಕಕ್ಕೆ ಅಗ್ನಿಪಥ ಯೋಜನೆ ರೂಪಿಸಿ ಅಗ್ನಿವೀರರ ನೇಮಕಾತಿ ಪ್ರಾರಂಭಿಸಿದೆ. ಭಾರತ ರಕ್ಷಣೆಯನ್ನು ಲೆಕ್ಕಿಸದೆ ಇಂತಹ ಯೋಜನೆ ರೂಪಿಸಿ 4 ವರ್ಷ ತರಬೇತಿ ಸೇವೆ ನಂತರ ಪಿಂಚಣಿ ಸಹಾ ಇಲ್ಲದೆ, ಪರಿಹಾರ ನೀಡಿ ಹೊರದೂಡುವ ಯೋಜನೆಯಾಗಿದೆ. ತರಬೇತಿ ಪಡೆದು ಬಂದವರು ಬದುಕಿಗಾಗಿ ಸೆಕ್ಯೂರಿಟಿ ಗಾರ್ಡ್‌ಗಳು, ಗನ್‌ಮ್ಯಾನ್ ಅಥವಾ ಮಾಲೀಕರ ಬೌನ್ಸರ್‌ಗಳಾಗುವ ಎಲ್ಲಾ ಸಾಧ್ಯತೆಗಳಿವೆ.

ಜೀವ ವಿಮಾ ಕಂಪನಿಯ ಐಪಿಒ ಮಾರಾಟಕ್ಕ ಮುಂದಾಗಿದೆ. ಬ್ಯಾಂಕ್‌ಗಳ ವಿಲೀನ ಮುಂದುವರಿಸಿದೆ. ರಕ್ಷಣ ಇಲಾಖೆಯ 47 ರಕ್ಷಣ ಸಾಮಾಗ್ರಿ ಉತ್ಪಾದನೆಯ ಆರ್ಡಿನೆನ್ಸ್ ಕಾರ್ಖಾನೆಗಳನ್ನು ರಕ್ಷಣಾ ಇಲಾಖೆಯ ಸರ್ಕಾರದ ನೇರ ಒಡೆತನದ ಬದಲು, ನಿಗಮಗಳಾಗಿ ಮಾರ್ಪಡಿಸಿದೆ. ಅವುಗಳೊಂದಿಗೆ ಅವುಗಳ ನೌಕರರ ಮಕ್ಕಳಿಗಾಗಿ ಸ್ಥಾಪಿಸಿದ್ದ ಕೇಂದ್ರೀಯ ವಿದ್ಯಾಲಯಗಳನ್ನು ಮುಚ್ಚಿದೆ.

ಕಾರ್ಮಿಕರ ಪಾಲು ಕುಸಿತ – ಲಾಭದ ಪಾಲು ಜಿಗಿತ:

ಭಾರತದಲ್ಲಿ 1981–82 ರಲ್ಲಿ ಪ್ರತಿ 100 ರೂಗಳ ಒಟ್ಟು ಮೌಲ್ಯ ವರ್ಧನೆಯಲ್ಲಿ ಶೇಕಡಾ 30.27 ರಷ್ಟಿದ್ದ ಕಾರ್ಮಿಕರ ವೇತನದ ಪಾಲು 2017–18ರಲ್ಲಿ ಶೇಕಡಾ 15.67 ಕ್ಕೆ ಇಳಿದಿದ್ದರೆ, ಮಾಲೀಕರ ಲಾಭದ ಪಾಲು ಶೇಕಡಾ 46.68 ಕ್ಕೆ ಹೆಚ್ಚಳವಾಗಿದೆ. ರಾಜ್ಯದಲ್ಲಿ ಸಹಾ 2018–19 ರಲ್ಲಿ ಪ್ರತಿ 100 ರೂಗಳ ನಿವ್ವಳ ಮೌಲ್ಯವರ್ಧನೆಯಲ್ಲಿ ಶೇ19.17 ರಷ್ಟಿದ್ದ ಕಾರ್ಮಿಕರ ವೇತನದ ಪಾಲು 2019–20ರಲ್ಲಿ ಶೇ 15.04ಕ್ಕೆ ಕುಸಿದಿದೆ. ಆದರೆ ಮಾಲಿಕರ ಲಾಭದ ಪಾಲು ಶೇ 41.98ರಿಂದ ಶೇ 46.11ಕ್ಕೆ ಜಿಗಿದಿದೆ. ರಾಜ್ಯದ ಮಾಲೀಕರ ಸಂಘಗಳು ಕಾರ್ಮಿಕರ ವೇತನ ಪಾಲು ಶೇ 9ಕ್ಕೆ ಇಳಿಸಬೇಕೆಂದು ವಾದ ಮಂಡಿಸುತ್ತಿವೆ. ಈ ವಾದಕ್ಕೆ ಪೂರಕವಾಗಿ ಈ ಬಾರಿ ವಿವಿಧ ಅಧಿಸೂಚಿತ ಉದ್ಯೋಗಗಳ ಕನಿಷ್ಠ ವೇತನ ಪರಿಷ್ಕರಣೆ ವೇಳೆ ಇಂದಿನ ಬೆಲೆ ಏರಿಕೆ, ಆಹಾರ ಕ್ಯಾಲರಿ ಬಳಕೆ ಆಧಾರಿತ ಖರ್ಚು ಮುಂತಾದ ಲೆಕ್ಕಾಚಾರ ಮತ್ತು ರಪ್ತಕೋಸ್ ತೀರ್ಪಿನ ಆಧಾರಿತವಾಗಿ ಕನಿಷ್ಠ ವೇತನ ನಿಗದಿಯ ಬದಲು ಶೇಖಡಾ 10 ಸರಾಸರಿ ಹೆಚ್ಚಳದ ಆಧಾರದಲ್ಲಿ ಕನಿಷ್ಠ ವೇತನ ನಿಗದಿಗೆ ಕ್ರಮವಹಿಸಿದೆ. ಇದನ್ನು ರಾಜ್ಯದ ಕೇಂದ್ರ ಕಾರ್ಮಿಕ ಸಂಘಟನೆಗಳು ವಿರೋಧಿಸಿ ಮಾಸಿಕ ರೂ. 36,000 ಕನಿಷ್ಠ ವೇತನ ನಿಗದಿಗೆ ಒತ್ತಾಯಿಸಿವೆ.

ಕೋವಿಡ್ ಲಾಕ್ಡೌನ್: ಏಕಸ್ವಾಮ್ಯತೆಯೆಡೆಗೆ ವ್ಯಾಪಾರ:

ಈ ಕಾಲಾವಧಿಯಲ್ಲಿ ಪುಟ 10 ಕ್ಕೆ

ಕೈಗಾರಿಕೆಗಳಲ್ಲಿನ ಹೊಸ ಬದಲಾವಣೆಗಳು ಮತ್ತು ಕಾರ್ಮಿಕರು........

ಪುಟ 9 ರಿಂದ

ಕೋವಿಡ್ ಲಾಕ್ಡೌನ್ ವೇಳೆಯಲ್ಲಿ ಕೆಲವು ವ್ಯಾಪಾರ, ವಾಣಿಜ್ಯ ಸಂಸ್ಥೆಗಳು ಹಾಗು ಕೈಗಾರಿಕೆಗಳು ಸಂಕಷ್ಟಕ್ಕೆ ಸಿಲುಕಿವೆ. ಅಂತಹದರಲ್ಲಿ ಕೆಲವನ್ನು ರಿಲಿಯನ್ಸ್ ಕೊಂಡುಕೊಳ್ಳುವ ಪ್ರಕ್ರಿಯೆ ನಡೆದಿದೆ. ಫ್ಯೂಚರ್ಸ್ ಸಮೂಹದ ಬಿಗ್ ಬಜಾರ್, ಸೆಂಟ್ರಲ್ ಮಾಲ್‌ಗಳನ್ನು ಹಾಗು ಜರ್ಮನ್ ಮೂಲದ ಮೆಟ್ರೋ ಕ್ಯಾಶ್ ಆಂಡ್ ಕ್ಯಾರಿಯನ್ನು ರಿಲಿಯನ್ಸ್ ಕೊಂಡುಕೊಳ್ಳುತ್ತಿದೆ. ಈ ಪ್ರಕ್ರಿಯೆಗಳಲ್ಲಿ ದೇಶಿಯ ಮತ್ತು ಅವುಗಳಲ್ಲಿ ಶೇರುಗಳನ್ನು ಹೊಂದಿರುವ ಬಹುರಾಷ್ಟ್ರೀಯ ಕಂಪನಿಗಳ ನಡುವೆ ವಿವಾದಗಳು, ಕೋರ್ಟ್ ಮೊಕದ್ದಮೆಗಳು ಸಹಾ ನಡೆದಿವೆ. ಈ ಪ್ರಕ್ರಿಯೆಗಳಲ್ಲಿ ಅಲ್ಲಿನ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದೇ ವೇಳೆ ಒಂದರ ಮೇಲೆ ಮತ್ತೊಂದು ಪೈಪೋಟಿಯಲ್ಲಿ ತೊಡಗಿದ್ದ ವಾಹನೋದ್ಯಮ ಕೈಗಾರಿಕೆಗಳು ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುತ್ತಿವೆ. ಬಿಡದಿಯ ಟಯೋಟಾ ಕಾರ್ಖಾನೆಯಲ್ಲಿ ಸುಜುಕಿ ಕಾರ್ ಜೋಡಿಸುವ ಮತ್ತು ಗುಡುಗಾವ್ ಜುಜುಕಿ ಕಾರ್ಖಾನೆಯಲ್ಲಿ ಟಯೋಟಾ ಕಾರ್‌ಗಳನ್ನು ಜೋಡಿಸುವ ಒಪ್ಪಂದಕ್ಕೆ ಮುಂದಾಗಿವೆ. 2030ರ ವೇಳೆಗೆ ಪೆಟ್ರೋಲ್ ಡೀಸಲ್ ವಾಹನ ಉತ್ಪಾದನೆ ನಿಲ್ಲಿಸುವ, ಅದರ ಬದಲು ವಿಧ್ಯುತ್ ವಾಹನ ಉತ್ಪಾಧನೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸರಕಾರವು ಯತ್ನಿಸಿದೆ. ಇದರಿಂದಾಗಿ ವಾಹನ ಉತ್ಪಾಧನೆ ಮತ್ತು ವಾಹನ ಬಿಡಿಬಾಗ ಉತ್ಪಾಧನೆ ಮಾಡುವ ತಯಾರಿಕಾ ವಲಯದ ಕಾರ್ಖಾನೆಗಳ ಕಾರ್ಮಿಕರು ತೀವ್ರ ಸಂಕಷ್ಟಕ್ಕೆ ಸಿಲಿಕಲಿದ್ದಾರೆ.

ದಿವಾಳಿ ನೆಪ: ಕಾರ್ಮಿಕರ ಹಕ್ಕು ದಮನ:

ದಿವಾಳಿ ಮತ್ತು ಪಾಪರಿಕೆ ಸಂಹಿತೆ–2016 (IBC) ಬಳಸಿ ಒಂದಡೆ ಬ್ಯಾಂಕಗಳಿಂದ ಪಡೆದ ಸಾಲಗಳನ್ನು ತಮ್ಮ ಸಂಸ್ಥೆಯ ಆಸ್ತಿಗಳಿಗೆ ಮನ್ನಾ ಮಾಡಿಸಿಕೊಳ್ಳುವ ಜೊತೆಯಲ್ಲೆ, ಕಾರ್ಮಿಕರಿಗೆ ಕೈಗಾರಿಕಾ ವಿವಾದಗಳ ಕಾಯ್ದೆಯಡಿ ಲಭಿಸಬೇಕಿರುವ ರಿಟ್ರೆಂಚ್‌ಮೆಂಟ್ ಮತ್ತು ಕ್ಲೋಸರ್ ಪರಿಹಾರದಿಂದ ವಂಚಿಸುವ ಯತ್ನಗಳು ರಾಜ್ಯದಲ್ಲಿ ತೀವ್ರಗೊಂಡಿವೆ. ವೇತನ ಕಡಿತ ಮಾಡಿಕೊಳ್ಳಬೇಕೆಂಬ ಅಥವಾ ಕಾರ್ಮಿಕರ ಸಂಖ್ಯೆ ಕಡಿತ ಮಾಡಬೇಕೆಂಬ ಒತ್ತಡವನ್ನು ದಿವಾಳಿಯಾಗಿ ಪುನರ್ ಸ್ಥಾಪನೆಯಾದ ಕಾರ್ಖಾನೆಗಳಿಂದ ಬರುತ್ತಿರುವುದನ್ನು ಗಮನಿಸಬಹುದಾಗಿದೆ.

ಕೋವಿಡ್ ಲಾಕ್ಡೌನ್: ಕಾರ್ಮಿಕ ಕಾನೂನು ತಿದ್ದುಪಡೆ ಯತ್ನಕ್ಕೆ ಸೋಲು:

ಕೈಗಾರಿಕಾ ವಿವಾದಗಳ ಕಾಯ್ದೆ–1948, ಕಾರ್ಖಾನೆ ಕಾಯ್ದೆ–1948 ಕ್ಕೆ ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತು ನಿಷೇಧ) ಕಾಯ್ದೆ–1970 ಕ್ಕೆ ತಿದ್ದುಪಡಿ ಸುಗ್ರೀವಾಜ್ಞೆ ಹೊರಡಿಸಿತು. ಈ ತಿದ್ದುಪಡಿಗಳ ಸುಗ್ರೀವಾಜ್ಞೆ ಮೂಲಕ

ಎ) ಲೇಆಫ್, ರಿಟ್ರೆಂಚ್‌ಮೆಂಟ್, ಕ್ಲೋಸರ್ ಮಾಡಲು ಸರ್ಕಾರದ ಅನುಮತಿ ಪಡೆಯಬೇಕಿದ್ದ 100ಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿದ್ದ ಕಾರ್ಖಾನೆಗಳ ಮಿತಿಯನ್ನು 300ಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿದ್ದ ಕಾರ್ಖಾನೆಗಳಿಗೆ ಎಂದು ಬದಲಾಯಿಸಿತ್ತು. ಪರಿಣಾಮವಾಗಿ ರಾಜ್ಯದ 90.76 ಶೇಕಡ ಕಾರ್ಖಾನೆಗಳು ಸರ್ಕಾರದ ಪೂರ್ವಾನುಮತಿ ಇಲ್ಲದೆ ಲೇ–ಆಫ್, ರಿಟ್ರೆಂಚ್ ಮತ್ತು ಕಾರ್ಖಾನೆ ಮುಚ್ಚಲು ಮುಕ್ತ ಅವಕಾಶ ನೀಡಿತ್ತು.

ಬಿ) ಕಾರ್ಖಾನೆಗಳ ಪರಿಭಾಷೆಯನ್ನು ಬದಲಾಯಿಸಿ ವಿದ್ಯುತ್ ಸಹಿತ ಹಾಲಿ 10 ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆಯ ಮೇಲ್ಮಿತಿಯನ್ನು 20 ಕಾರ್ಮಿಕರಿಗೆ ಮತ್ತು ವಿದ್ಯುತ್ ರಹಿತ ಹಾಲಿ 20 ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆಯ ಮೇಲ್ಮಿತಿಯನ್ನು 40 ಕಾರ್ಮಿಕರಿಗೆ ಹೆಚ್ಚಿಸಿತು. ಪರಿಣಾಮವಾಗಿ ರಾಜ್ಯದ ಶೇಕಡ 41.16 ವಿದ್ಯುತ್ ಸಹಿತ ಕಾರ್ಖಾನೆಗಳು ಮತ್ತು ಶೇಕಡ 64.34 ವಿದ್ಯುತ್ ರಹಿತ ಕಾರ್ಖಾನೆಗಳನ್ನು, ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ನಿರ್ದೇಶನಾಲಯದ ಶಾಸನಬದ್ಧ ತಪಾಸಣೆಯಿಂದ ಹೊರಗುಳಿಸಿತ್ತು.

ಸಿ) ಗುತ್ತಿಗೆ ಕಾರ್ಮಿಕರ ನೇಮಕಕ್ಕೆ ಶಾಸನಬದ್ಧ ನೊಂದಾವಣಿ ಮತ್ತು ಪರವಾನಗಿಗೆ ಇದ್ದ 20 ಕಾರ್ಮಿಕರ ಕನಿಷ್ಟ ಮಿತಿಯನ್ನು 50ಕ್ಕೆ ಹೆಚ್ಚಿಸಿತ್ತು. ಪರಿಣಾಮವಾಗಿ ಅನಿಯಂತ್ರಿತ ಗುತ್ತಿಗೆ ಕಾರ್ಮಿಕರ ನೇಮಕಕ್ಕೆ ಅನುವುಗೊಳಿಸಿತು. ಇದರ ವಿರುದ್ಧ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಹೋರಾಟ ಮತ್ತು ಸಿಐಟಿಯು ನಡೆಸಿದ ನಿರಂತರ ಹೋರಾಟ ಪರಿಣಾಮ 2020 ಸೆಪ್ಟೆಂಬರ್ 22 ರಂದು ರಾತ್ರಿ ವಿಧಾನ ಪರಿಷತ್‌ನಲ್ಲಿ ಸುಗ್ರೀವಾಜ್ಞೆಗೆ ಸೋಲುಂಟಾಯಿತು. ಪರಿಣಾಮವಾಗಿ ಸೋಲುಂಡ ಸುಗ್ರೀವಾಜ್ಞೆಯನ್ನು ಮತ್ತೆ ಶಾಸನವಾಗಿ ರೂಪಿಸಬಾರದೆಂಬ ಸುಪ್ರೀಂ ಕೋರ್ಟ್ ತೀರ್ಪಿನ ಕುರಿತು ಸಿಐಟಿಯು ನಡೆಸಿದ ಪ್ರಚಾರದ ಪರಿಣಾಮ ಕಾರ್ಮಿಕ ಕಾಯ್ದೆಗೆ ಕಾರ್ಮಿಕ ವಿರೋಧಿ ತಿದ್ದುಪಡಿ ತರುವ ಯತ್ನಗಳಿಗೆ ಸೋಲುಂಟಾಯಿತು.

ಮಾಲೀಕರ ಪರ ನಿಂತ ಸರ್ಕಾರ:

ಬಿಡದಿಯ ಟಯೋಟಾ ಕಿರ್ಲೋಸ್ಕರ್ ಕಾರ್ಮಿಕರ 113 ದಿನಗಳ ಮುಷ್ಕರದಲ್ಲಿ ಸರ್ಕಾರವು ಮಾಲೀಕರ ಪರ ನಿಲುಮೆ ತಾಳಿ, 45 ಕಾರ್ಮಿಕರು ಮತ್ತು ಮುಖಂಡರನ್ನು ಬಲಿಪಶು ಮಾಡಲು ಅನುವುಗೊಳಿಸಿದೆ. ಲಾಕ್ಡೌನ್ ವೇಳೆಯಲ್ಲಿ ಸುಪ್ರೀಂ ಟ್ರೀವ್ಸ್ ಕಾರ್ಮಿಕರನ್ನು ಮಾಲೀಕರು ದೂರದ ಗುಜರಾತ್, ಹರಿಯಾಣ ಮುಂತಾದ ರಾಜ್ಯಗಳಿಗೆ ಕಾನೂನು ಬಾಹಿರವಾಗಿ ವರ್ಗಾಯಿಸಿರುವ ಪ್ರಕರಣದಲ್ಲಿ ಕಾರ್ಮಿಕರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕ್ರಮವಹಿಸಲಿಲ್ಲ. ಇಂದಿಗೂ ಕಾರ್ಮಿಕರು ಹೋರಾಟ ನಿರತರಾಗಿದ್ದಾರೆ. ದಿವಾಳಿ ಮತ್ತು ಪಾಪರಿಕೆ ಸಂಹಿತೆ 2016 ಅಡಿ ಇನ್ನೋವೇಟಿವ್ ಫಿಲಿಂ ಸಿಟಿ ಮಾಲೀಕರು ಕಾರ್ಮಿಕರನ್ನು ಹೊರಹಾಕಿ ಮತ್ತೊರ್ವ ಮಾಲೀಕರ ಮೂಲಕ ಫಿಲಿಂ ಸಿಟಿ ಪ್ರಾರಂಭಿಸಿದ್ದರೂ, ಕಾರ್ಮಿಕರಿಗೆ ಕೆಲಸ ಕೊಡಿಸಬೇಕೆಂಬ ಕಾರ್ಮಿಕರ ಅರ್ಜಿಯನ್ನು ಸಕಾರಾತ್ಮಕವಾಗಿ ಪರಿಗಣಿಸದೆ ಕಾರ್ಮಿಕರನ್ನು ವಂಚಿಸಿದೆ. ರಿಕ್ಯಾರೋ ಇಂಡಿಯಾ ಮಾಲೀಕರು ಅಕ್ರಮ ರಿಟ್ರೆಂಚ್‌ಮೆಂಟ್, ಲೇಆಫ್ ಮಾಡಿದರು ಅದರ ತಡೆಗೆ ಸರ್ಕಾರ ಕ್ರಮವಹಿಸಿಲ್ಲ. ಸ್ಮಿಡ್ಜ್ ಕಾರ್ಖಾನೆಯ ಅಕ್ರಮ ಮುಚ್ಚುವಿಕೆ ವಿರುದ್ದ ಕ್ರಮವಹಿಸಲಿಲ್ಲ. ಮೈಸೂರಿನ ರೀಡ್ ಅಂಟ್ ಟೇಲರ್ ಕಾರ್ಖಾನೆಯ ಮಾಲೀಕರು ಸದರಿ ಸಂಹಿತೆಯಡಿ ಲಾಕ್ಡೌನ್ ವೇಳೆ ಕಾರ್ಮಿಕರನ್ನು ಕೆಲಸದಿಂದ ಬಿಡುಗಡೆ ಮಾಡಿ, ಆನಂತರ ತನ್ನ ಶರತ್ತುಗಳಿಗೆ ಅನುಗುಣವಾಗಿ ವೇತನ ಕಡಿತ ಸಹಿತ ಕೆಲಸ, ಎಲ್ಲರಿಗೂ ಕೆಲಸ ನೀಡದ ಕ್ರಮಗಳಿಗೆ ಹೊಸ ಮಾಲೀಕ ಮುಂದಾದಾಗ ಸರ್ಕಾರವು ಅದಕ್ಕೆ ಪೂರಕವಾಗಿ ವರ್ತಿಸಿ, ಕಾರ್ಮಿಕರನ್ನು ಅಸಹಾಯಕ ಪರಿಸ್ಥಿತಿಗೆ ದೂಡಿತು. ಕೋಲಾರ ಜಿಲ್ಲೆಯಲ್ಲಿನ ವಿಸ್ಟ್ರನ್ ಕಂಪನಿಯಲ್ಲಿನ ಕಾರ್ಮಿಕ ಕಾನೂನುಗಳ ಅನುಷ್ಠಾನ ಕುರಿತು ಸರ್ಕಾರ ಕ್ರಮವಹಿಸದ ಕಾರಣ, ಕಾರ್ಮಿಕರು ಮಾಲೀಕರ ವಿರುದ್ಧ ತಿರುಗಿಬಿದ್ದ ದಿಢೀರ್ ಹೋರಾಟಕ್ಕೆ ಮುಂದಾದ ವೇಳೆ ಸರ್ಕಾರವು ನೇರಾ ಮಾಲೀಕರ ಪರ ನಿಲುವೆ ತಳೆದು, ಕಾರ್ಮಿಕರನ್ನು ಮಾಲೀಕರ ಜೊತೆ ಸೇರಿ ಬಲಿಪಶು ಮಾಡುವ, ಕಾರ್ಮಿಕರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವ ಕೆಲಸ ಮಾಡಿದೆ.

ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬಂದ ನಂತರ ಕೈಗಾರಿಕಾ ಸಂಸ್ಥೆಗಳ ಸ್ಥಾಯಿ ಆದೇಶಗಳ ಕಾಯ್ದೆಗೆ ತಿದ್ದುಪಡಿ ತಂದು ನಿಶ್ಚಿತ ಕಾಲಾವಧಿಯ ಕಾರ್ಮಿಕರ (FTE) ನೇಮಕಕ್ಕೆ ಅವಕಾಶ ಕಲ್ಪಿಸಿದ ಕಾರಣ, ಹಲವು ಕಾರ್ಖಾನೆಗಳಲ್ಲಿ ನೂರಾರು ಸಂಖ್ಯೆಯಲ್ಲಿ ನಿಶ್ಚಿತ ಕಾಲಾವಧಿಯ ಕಾರ್ಮಿಕರ (FTE) ನೇಮಕ ವ್ಯಾಪಕವಾಗಿ ನಡೆದಿದೆ. ಅದಕ್ಕೆ ಪೂರ್ವದಲ್ಲಿ ರೂಪಿತವಾದ ಮೇಕ್‌ಇನ್ ಇಂಡಿಯಾ, ಸ್ಕಿಲ್ ಇಂಡಿಯಾ, ಮೇಕ್ ಇನ್ ಕರ್ನಾಟಕ, ಸ್ಕಿಲ್ ಕರ್ನಾಟಕ ಯೋಜನೆಗಳ ಅಡಿಯ ಟ್ರೈನಿಗಳು ಅನೇಕರು ಈಖಿಇ ಗಳಾಗಿ ನೇಮಕವಾಗುತ್ತಿದ್ದಾರೆ. ಅದಕ್ಕಾಗಿ ಖಾಯಂ ಕಾರ್ಮಿಕರು, ಗುತ್ತಿಗೆ ಕಾರ್ಮಿಕರನ್ನು ಸ್ವಯಂ ನಿವೃತ್ತಿ ಮುಂತಾದ ಕ್ರಮಗಳ ಮೂಲಕ ಹೊರದಬ್ಬುವ ಕ್ರಮಗಳು ತೀವ್ರವಾಗಿ ವ್ಯಾಪಕವಾಗಿ ನಡೆದಿವೆ.

ತ್ರಿಪಕ್ಷೀಯ ಸಮಿತಿಗಳಿಂದ ಸಿಐಟಿಯು ಪ್ರತಿನಿಧಿಗಳನ್ನು ಹೊರಗಿಡುವ ಪ್ರಯತ್ನಗಳನ್ನು ಪ್ರಜ್ಞಾಪೂರ್ವಕವಾಗಿ ನಡೆಸಿದೆ. ಕನಿಷ್ಟ ವೇತನ ನಿಗದಿ ಪ್ರಕ್ರಿಯೆಯಲ್ಲಿ ಮಾಲೀಕರ ವಾದದ ಪರ ವಹಿಸಿ ವೇತನ ನಿಗದಿಗೆ ಮುಂದಾಗಿದೆ. 36000 ರೂಗಳ ಮಾಸಿಕ ಕನಿಷ್ಟ ವೇತನ ನಿಗದಿಗಾಗಿನ ಕಾರ್ಮಿಕ ಸಂಘಟನೆಗಳ ಬೇಡಿಕೆ ಮತ್ತು ವಾದ ಪರಿಗಣಿಸದೆ ನಿರಾಕರಿಸುತ್ತಿದೆ.

ರಾಜ್ಯ ಸರ್ಕಾರದ ಲಕ್ಷಾಂತರ ಖಾಲಿಯಿರುವ ಹುದ್ದೆಗಳ ಭರ್ತಿ ಮಾಡದೆ, ಸದರಿ ಕೆಲಸಗಳನ್ನು ಹೊರಗುತ್ತಿಗೆ ನೀಡುವ ಯತ್ನಗಳು ತೀವ್ರಗೊಂಡಿವೆ. ಪರಿಣಾಮವಾಗಿ ಖಾಯಂ ನೌಕರರ ಸಂಖ್ಯೆ ಮೀರಿ ಹೊರಗುತ್ತಿಗೆ ನೌಕರರ ಸಂಖ್ಯೆ ಕೆಲವೆಡೆ ಬೆಳೆಯುತ್ತಿದೆ.

ಕಾರ್ಮಿಕ ಸಂಹಿತೆಗಳು ಕೇಂದ್ರದ ಯತ್ನ– ಕಾರ್ಮಿಕ ಚಳುವಳಯ ಪ್ರತಿರೋಧ:

2019 ಆಗಸ್ಟ್‌ನಲ್ಲಿ ರೂಪಿಸಿದ್ದ ವೇತನ ಸಂಹಿತೆ–2019 ಅಡಿ ಕನಿಷ್ಟ ವೇತನ ನಿಗದಿಗೊಳಿಸಲು ವೇತನ ಸಂಹಿತೆ (ಕೇಂದ್ರ ಸಲಹಾ ಮಂಡಳಿ) ನಿಯಮಾವಳಿಗಳು–2021 ಅನ್ನು 1–3–2021 ರಂದು ಅಧಿಸೂಚಿಸಿ ಜಾರಿಗೊಳಿಸಿದೆ.

2020 ಸೆಪ್ಟೆಂಬರ್‌ನಲ್ಲಿ ಕೈಗಾರಿಕಾ ಸಂಬಂಧಗಳ ಸಂಹಿತೆ–2020, ವೃತ್ತಿ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಶರತ್ತುಗಳ ಸಂಹಿತೆ–2020, ಸಾಮಾಜಿಕ ಭದ್ರತಾ ಸಂಹಿತೆ–2020 ಅನ್ನು ಅಂಗೀಕರಿಸಿ ಜಾರಿಗೆ ಯತ್ನಿಸಿದೆ. ಈ ನಾಲ್ಕು ಸಂಹಿತೆಗಳ ಮೂಲಕ ಹಾಲಿ 29 ಕಾರ್ಮಿಕ ಕಾಯ್ದೆಗಳನ್ನು ರದ್ದುಗೊಳಿಸಿದೆ. ಈ ಸಂಹಿತೆಗಳ ಜಾರಿಗೆ ನಿಯಮಾವಳಿಗಳನ್ನು ರೂಪಿಸಿ ಜಾರಿಗೊಳಿಸಲು ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರುತ್ತಿದೆ. ಕೇಂದ್ರ ಸರ್ಕಾರವು ಕರಡು ನಿಯಮಾವಳಿಗಳನ್ನು ಪ್ರಕಟಿಸಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳ ತೀವ್ರ ವಿರೋಧದ ಕಾರಣ ಜಾರಿಗೊಳಿಸಲಾಗದ ಅತಂತ್ರಕ್ಕೆ ಸಿಲುಕಿದೆ.

ಮೂರು ವರ್ಷಗಳಾದರೂ ಕಾರ್ಮಿಕರ ವಿರೋಧ ಮತ್ತು ಮುಷ್ಕರಗಳ ಕಾರಣ ಸಂಹಿತೆಗಳನ್ನು ಜಾರಿಗೊಳಿಸಲಾಗದ ಅಸಹಾಯಕ ಸ್ಥಿತಿಯಿಂದ ಹೊರಬರಲು ಇತ್ತೀಚೆಗೆ ಪ್ರತಿ ಕೇಂದ್ರ ಕಾರ್ಮಿಕ ಸಂಘಟನೆಗಳ ಜೊತೆ ಪ್ರತ್ಯೇಕವಾಗಿ ಕೇಂದ್ರ ಕಾರ್ಮಿಕ ಸಚಿವರು ಮಾತುಕತೆ ನಡೆಸಿದ್ದಾರೆ. ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಪ್ರತ್ಯೇಕ ಮಾತುಕತೆ ಹಾಗೂ ಅನಂತರ ಜಂಟಿ ಪತ್ರದ ಮೂಲಕ 4 ಕಾರ್ಮಿಕ ಸಂಹಿತೆಗಳ ರದ್ಧತಿಗಾಗಿ, ಭಾರತೀಯ ಕಾರ್ಮಿಕ ಸಮ್ಮೇಳನವನ್ನು ಕೂಡಲೇ ನಡೆಸಲು ಮತ್ತು ಅದಕ್ಕೂ ಪೂರ್ವದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಪ್ರಾತಿನಿಧ್ಯದ ಸಭೆ ಕರೆದು ಭಾರತೀಯ ಕಾರ್ಮಿಕ ಸಮ್ಮೇಳನದ ಕಾರ್ಯಸೂಚಿ ನಿರ್ಧರಿಸಲು ಒತ್ತಾಯಿಸಿವೆ. ಭಾರತೀಯ ಮಜದೂರ ಸಂಘ (BMS) ಸಾಮಾಜಿಕ ಭದ್ರತಾ ಸಂಹಿತೆ ಮತ್ತು ವೇತನ ಸಂಹಿತೆಯನ್ನು ಬೆಂಬಲಿಸಿದೆ. ಉಳಿದ 2 ಸಂಹಿತೆಗಳ ಬಗ್ಗೆ ವಿರೋಧ ವ್ಯಕ್ತಪಡಿಸಿದೆ.

ಏನಾದರೂ ಮಾಡಿ ಕಾರ್ಮಿಕ ಸಂಹಿತೆಗಳನ್ನು ಜಾರಿಮಾಡುವ ಸಲುವಾಗಿ ಪ್ರಪ್ರಥಮ ಜಾರಿಗೆ ರಾಜ್ಯ ಕಾರ್ಮಿಕ ಸಚಿವರು, ಅಧಿಕಾರಿಗಳು ಮತ್ತು ಕೇಂದ್ರ ಕಾರ್ಮಿಕ ಸಚಿವರು ಅಧಿಕಾರಿಗಳನ್ನು ಮಾತ್ರ ಒಳಗೊಂಡು, ಕಾರ್ಮಿಕ ಪ್ರತಿನಿಧಿಗಳನ್ನು ಆಹ್ವಾನಿಸದೆ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ (NLC) ವನ್ನು ತಿರುಪತಿಯಲ್ಲಿ 2022 ಆಗಸ್ಟ್ 25 ಮತ್ತು 26 ರಂದು ನಡೆಸಿದ್ದಾರೆ. ಅದನ್ನು ಆನ್‌ಲೈನ್‌ನಲ್ಲಿ ಉದ್ಘಾಟಿಸಿದ ಪ್ರಧಾನಿಗಳು ಭಾರತ ಸ್ವತಂತ್ರ್ಯೋತ್ಸವ ಅಮೃತ ವರ್ಷದ ವೇಳೆಗೆ ರೂಪಿಸಿರುವ ಕಾರ್ಮಿಕ ಸಂಹಿತೆಗಳು ಸ್ವತಂತ್ರ್ಯೋತ್ಸವದ ಶತಮಾನೋತ್ಸವದ ವೇಳೆಗೆ ಮುಂದಿನ 25 ವರ್ಷಗಳ ಅಮೃತ ಕಾಲದಲ್ಲಿ ಅವರ ಘೋಷಣೆಯಾದ "ಶ್ರಮಮೇವ ಜಯತೆ" ಅನ್ನು ಸಾಕಾರಗೊಳಿಸಲಿದೆ ಎಂದಿದ್ದಾರೆ.

ರೈತರ ವಿರೋಧಿಯಾದ 3 ಕೃಷಿ ಕಾಯ್ದೆಗಳಾದ ರೈತರ ಉತ್ಪನ್ನಗಳ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಅನುಕೂಲ ಮಾಡಿಕೊಡುವಿಕೆ) ಕಾಯ್ದೆ–2020, ರೈತರ (ಸಶಕ್ತಿಕರಣ ಮತ್ತು ಸಂರಕ್ಷಣೆ) ಬೆಲೆ ಖಾತ್ರಿ ಒಪ್ಪಂದ ಮತ್ತು ಕೃಷಿ ಸೇವೆಗಳ ಕಾಯ್ದೆ ಮತ್ತು ಅಗತ್ಯ ಸರಕುಗಳ (ತಿದ್ದುಪಡಿ) ಕಾಯ್ದೆಗಳನ್ನು 2020 ಸೆಪ್ಟೆಂಬರ್‌ನಲ್ಲಿ ಸಂಸತ್ತಿನಲ್ಲಿ ಅಂಗೀಕರಿಸಿ, ಅಧಿಸೂಚಿಸಿ ಜಾರಿಗೆ ಮುಂದಾಗಿತ್ತು. ಅದರ ವಿರುದ್ಧ ದೆಹಲಿಯ ಗಡಿಗಳಲ್ಲಿ ಮತ್ತು ರಾಷ್ಟ್ರದ ಉದ್ದಗಲಕ್ಕೂ 2020 ನವೆಂಬರ್ 26 ರಿಂದ ನಡೆದ ಸಮರಧೀರ ಹೋರಾಟದ ಕಾರಣ ಮೂರು ಕೃಷಿ ಕಾಯ್ದೆಗಳು ರದ್ದಾಗಿವೆ. ಆದರೆ ಅದರ ಜಾರಿಗೆ ರಾಜ್ಯ ಸರ್ಕಾರಗಳಲ್ಲಿ ಕಾಯ್ದೆ ರೂಪಿಸಿ ಜಾರಿಗೊಳಿಸಲು ಕೇಂದ್ರ ಸರ್ಕಾರವು ಉತ್ತೇಜನ ಮತ್ತು ಒತ್ತಡ ಹೇರುತ್ತಿವೆ. ಕರ್ನಾಟಕದ ರಾಜ್ಯ ಸರ್ಕಾರವು ಅಂಗೀಕರಿಸಿರುವ ಭೂ ಸುಧಾರಣ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ, ಭೂ ಕಂದಾಯ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ಕಾಯ್ದೆ ಮಾದರಿಯಲ್ಲಿ ಇತರೆ ಬಿಜೆಪಿ ಆಡಳಿತದ ರಾಜ್ಯಗಳು ಕಾನೂನುಗಳನ್ನು ರೂಪಿಸಿ ಜಾರಿಗೊಳಿಸುತ್ತಿವೆ.

ಮಾಲೀಕರಿಗೆ ಕೇಂದ್ರದ ಉದಾರ ಕೊಡುಗೆ:

ತಯಾರಿಕಾ ವಲಯದ ಮಾಲೀಕರಿಗೆ ಅನುವು ಮಾಡಿಕೊಡಲು ಉತ್ಪಾದಕತೆ ಆಧಾರಿತ ಇನ್ಸ್‌ಂಟೀವ್ (PLI) ಹೆಸರಿನಲ್ಲಿ 2 ಲಕ್ಷ ಕೋಟಿ ರೂಗಳನ್ನು ಒದಗಿಸಿ, ಉತ್ಪಾದನ ವೆಚ್ಚಕ್ಕೆ ಸಬ್ಸಿಡಿ ನೀಡಲು ಮುಂದಾಗಿದೆ.

SEZ ಕಾಯ್ದೆಯ ಬದಲಾಗಿ ಆಇಖಊ (ಉದ್ದಿಮೆಗಳ ಅಭಿವೃದ್ಧಿ ಮತ್ತು ಸೇವಾ ಹಬ್‌ಗಳ) ಮಸೂದೆಯನ್ನು ಕೇಂದ್ರ ಸರ್ಕಾರವು ಸಿದ್ಧಪಡಿಸಿ ಮುಂದಿನ ಅಧಿವೇಶನದಲ್ಲಿ ಮಂಡಿಸಲು ಉದ್ದೇಶಿಸಿದೆ. ಈ ಕಾಯ್ದೆಯ ಮೂಲಕ ರಫ್ತು ಆಧಾರಿತ ಉತ್ಪನ್ನಗಳ ತಯಾರಿಕೆಗಾಗಿ ಮೀಸಲಿದ್ದ ವಿಶೇಷ ಆರ್ಥಿಕ ವಲಯವನ್ನು ಆಂತರಿಕ ದೇಶೀಯ ಉತ್ಪನ್ನ ತಯಾರಿಸುವ ಕಾರ್ಖಾನೆಗಳನ್ನು ಸಹಾ SEZ ವ್ಯಾಪ್ತಿಯಲ್ಲಿ ಸ್ಥಾಪಿಸಲು ಅನುವುಗೊಳಿಸಲು ಉದ್ದೇಶಿಸಲಾಗಿದೆ. ಆ ಮೂಲಕ ಸದರಿ ವಲಯದಲ್ಲಿನ ಕಾರ್ಮಿಕರ ಪ್ರಶ್ನೆಗಳ ಆಧಾರಿತವಾಗಿ ಉದ್ಭವಿಸುವ ವಿವಾದಗಳನ್ನು ನೇರ ಕಾರ್ಮಿಕ ಇಲಾಖೆಯಡಿ ಪರಿಹರಿಸುವ ಬದಲು ಜಿಲ್ಲಾಧಿಕಾರಿಗಳ ಮೂಲಕ ಅನುಮತಿ ಪಡೆಯಬೇಕೆಂಬ ನಿಬಂಧನೆಗೆ ವಲಯದ ಕಾರ್ಖಾನೆಗಳು ಒಳಪಡಲಿವೆ.

ರಾಜ್ಯದ ದುಡಿಯುವ ವರ್ಗದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳತ್ತ ಒಂದು ನೋಟ

ಕೆ. ಮಹಾಂತೇಶ್

ರಾಜ್ಯದ ದುಡಿಯುವ ವರ್ಗದ ಬಲ

ಆವರ್ತಕ ಕಾರ್ಮಿಕ ಬಲದ ಸಮೀಕ್ಷೆ 2018–19 ರ ವಾರ್ಷಿಕ ವರದಿಯಂತೆ ರಾಜ್ಯದಲ್ಲಿ ಕಾರ್ಮಿಕ ಬಲದ ಭಾಗವಹಿಸಿಕೆ (LFPR) ದರವು 51.2 ಶೇಕಡವಾಗಿದೆ. ಅಂದರೆ ಉದ್ಯೋಗ ಮಾಡುವ ವಯೋಮಾನದ 15 ವರ್ಷ ವಯಸ್ಸಿನ ಮೇಲ್ಪಟ್ಟ ಜನಸಂಖ್ಯೆಯಲ್ಲಿ ಅರ್ಧದಷ್ಟು ಜನರು ಉದ್ಯೋಗ ಮಾಡುತ್ತಾ ಅಥವಾ ಅರೆಸುತ್ತಾ ಸಕ್ರಿಯರಾಗಿದ್ದಾರೆ. ಇದು ಗ್ರಾಮೀಣ ಪ್ರದೇಶದಲ್ಲಿ 52.5 ರಷ್ಟಿದ್ದರೆ, ನಗರ ಪ್ರದೇಶದಲ್ಲಿ 49.1 ರಷ್ಟಿದೆ. ಮಹಿಳೆಯರ ಪ್ರಮಾಣ ನಗರದಲ್ಲಿ 20.5 ಮತ್ತು ಗ್ರಾಮೀಣದಲ್ಲಿ 27.6 ಹಾಗೂ ಒಟ್ಟಾರೆ 24.9 ರಷ್ಟಿದೆ.

ಕಾರ್ಮಿಕ ಜನಸಂಖ್ಯೆ ಪ್ರಮಾಣ (WPR) ಒಟ್ಟಾರೆ 49.3 ನಗರದಲ್ಲಿ 46.5 ಮತ್ತು ಗ್ರಾಮೀಣದಲ್ಲಿ 51.1 ಶೇಕಡವಾಗಿದೆ. ಅಂದರೆ ಪ್ರತಿ ಸಾವಿರ ಜನರಲ್ಲಿ 493 ಜನ ಉದ್ಯೋಗ ಹೊಂದಿದ್ದಾರೆ. ಒಟ್ಟಾರೆ ಪ್ರತಿ ಸಾವಿರ ಮಹಿಳೆಯರಲ್ಲಿ 242 ಮಹಿಳೆಯರು ಮಾತ್ರ ಉದ್ಯೋಗ ಹೊಂದಿದ್ದರೆ, ಗ್ರಾಮೀಣ ಪ್ರದೇಶದಲ್ಲಿ 272 ಮತ್ತು ನಗರ ಪ್ರದೇಶಗಳಲ್ಲಿ 193 ಮಹಿಳೆಯರು ಉದ್ಯೋಗ ಹೊಂದಿದ್ದಾರೆ.

ಜನರು ತೊಡಗಿಕೊಂಡಿರುವ ಸಾಮಾನ್ಯ ಪ್ರಧಾನ ಚಟುವಟಿಕೆ ಮತ್ತು ಅಂಗಚಟುವಟಿಕೆ ಆಧಾರದಂತೆ ಉದ್ಯೋಗ ಸ್ಥಿತಿ ಆಧಾರಿತ ಪ್ರತಿ ನೂರು ಕಾರ್ಮಿಕರಲ್ಲಿ 46 ಸ್ವಯಂ ಉದ್ಯೋಗಿಗಳು, 27 ಕೂಲಿ ವೇತನ ಉದ್ಯೋಗಿಗಳು ಮತ್ತು 27 ಸಾಮಾನ್ಯ ಉದ್ಯೋಗಿಗಳಾಗಿದ್ದಾರೆ.

ಕರ್ನಾಟಕದ ಆರ್ಥಿಕ ಪರಿಸ್ಥಿತಿ:

ಕರ್ನಾಟಕವು ಹಿಂದಿನ ವರ್ಷಗಳಲ್ಲಿ ಉತ್ತಮ ಆರ್ಥಿಕ ಪ್ರಗತಿಯನ್ನು ಸಾಧಿಸುತ್ತಲೇ ಬರುವ ಮೂಲಕ ಭಾರತದ ಮೊದಲ ಐದು ರಾಜ್ಯಗಳ ಸಾಲಿನಲ್ಲಿ ಒಂದಾಗಿದೆ. ಈ ಸಾಧನೆಗೆ ಪ್ರಮುಖ ಕಾರಣ ರಾಜ್ಯದಲ್ಲಿ ಐಟಿ ವಲಯ ಮತ್ತು ಇತರೆ ತಂತ್ರಜ್ಞಾನಾಧಾರಿತ ಕ್ಷೇತ್ರಗಳ ಕೊಡುಗೆಯಾಗಿರುತ್ತದೆ. ಕರ್ನಾಟಕವು ದೇಶದಲ್ಲಿರುವ ಸಂಘಟಿತ ಉದ್ಯೋಗಗಳ ಉತ್ಪಾದನೆ ಪೈಕಿ ಶೇಕಡ 10 ಉದ್ಯೋಗಗಳ ಪಾಲನ್ನು ಹೊಂದಿರುತ್ತದೆ.

2021–22ನೇ ಸಾಲಿನಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಕೃಷಿ ಕ್ಷೇತ್ರದಿಂದ ರೂ.2.57 ಲಕ್ಷ ಕೋಟಿಗಳು, ಕೈಗಾರಿಕೆಯಿಂದ ರೂ.3.61 ಲಕ್ಷ ಕೋಟಿಗಳು, ಸೇವೆಗಳ ಕ್ಷೇತ್ರದಿಂದ ರೂ.12.06 ಲಕ್ಷ ಕೋಟಿಗಳ ಕೊಡುಗೆಯಿಂದ ರಾಜ್ಯದ ಒಟ್ಟು ಆಂತರಿಕ ಮಾಲ್ಯವರ್ಧನೆ (ಜಿಎಸ್‌ವಿಎ)ರೂ.18.24 ಲಕ್ಷ ಕೋಟಿಗಳಾಗಿರುತ್ತದೆ. 2020–21ನೇ ಸಾಲಿನ ಕೋವಿಡ್–19 ಸಾಂಕ್ರಾಮಿಕದ ಕುಸಿತದಿಂದಾಗಿ ರೂ.17.31 ಲಕ್ಷ ಕೋಟಿ ಇದ್ದ ಅರ್ಥವ್ಯವಸ್ಥೆಯು 2021–22ನೇ ಸಾಲಿನಲ್ಲಿ ಶೇಕಡ 18.4 ರಷ್ಟು ಬೆಳವಣಿಗೆಯೊಂದಿಗೆ ರೂ.20.49 ಲಕ್ಷ ಕೋಟಿಗಳಾಗಿರುತ್ತದೆ. 2019–20 ರಲ್ಲಿ ರೂ 16.15 ಲಕ್ಷ ಕೋಟಿಯಿದ್ದು ಕೋವಿಡ್–19 ಸಾಂಕ್ರಾಮಿಕದ ಲಾಕ್‌ಡೌನ್ ನಿಬಂಧನೆಗಳಿಂದಾಗಿ 2020–21 ನೇ ಸಾಲಿನಲ್ಲಿ ಶೇಕಡ 7.2 ರಷ್ಟು ಬೆಳವಣಿಗೆಯನ್ನು ಕಂಡಿದೆ.

2016–17 ರಲ್ಲಿ 13.3 ಶೇಕಡವಾರು ಬೆಳವಣಿಗೆ ದರ ಸಾಧಿಸಿದ್ದ ಸ್ಥಿರ ಬೆಲೆಗಳ ಆಧಾರಿತ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನವು (GSDP) ಆನಂತರ ಪ್ರತಿ ವರ್ಷವು ಇಳಿಮುಖವಾಗಿದೆ. 2020–21 ರಲ್ಲಿ ಭಾರತ ಸರ್ಕಾರದ ಮುನ್ಸೂಚನ ಅಂದಾಜಿನಂತೆ –2.6 ಶೇಕಡವಾರು ಋಣಾತ್ಮಕವಾಗಿದೆ. ರಾಷ್ಟ್ರೀಯ ಆಂತರಿಕ ಉತ್ಪನ್ನ ಬೆಳೆವಣಿಗೆ ದರಕ್ಕಿಂತ ಸದಾ ಹೆಚ್ಚಿರುತ್ತಿದ್ದ ರಾಜ್ಯದ ಆಂತರಿಕ ಉತ್ಪನ್ನ ದರವು ಕೋವಿಡ್ ಲಾಕ್ಡೌನ್ ಕಾಲದಲ್ಲೂ ರಾಷ್ಟ್ರೀಯ ಉತ್ಪನ್ನ ಬೆಳವಣಿಗೆ ದರ (–7.7) ಕುಸಿದಿರುವಷ್ಟು ಪ್ರಮಾಣದಲ್ಲಿ ಕುಸಿತ ಕಂಡಿಲ್ಲ. ಆದರೆ ಪ್ರಥಮ ಬಾರಿಗೆ ಋಣಾತ್ಮಕ ಬೆಳವಣಿಗೆ ಕಂಡಿದೆ.

ಅರ್ಥ ವ್ಯವಸ್ಥೆಯ ಸಂಯೋಜನೆ

ಕೋವಿಡ್–19 ಸಾಂಕ್ರಾಮಿಕದ ಪೂರ್ವದಲ್ಲಿ ಅಂದರೇ 2019–20ನೇ ಸಾಲಿನಲ್ಲಿ ಸೇವಾವಲಯವು ಶೇಕಡ 66.3ರಷ್ಟು, ಕೈಗಾರಿಕಾ ವಲಯ ಶೇಕಡ 21.3 ರಷ್ಟು ಮತ್ತು ಕೃಷಿ ವಲಯವು ಶೇಕಡ 12.3ರಷ್ಟು ಕೊಡುಗೆಯನ್ನು ನೀಡಿರುತ್ತದೆ. ಕೋವಿಡ್–19 ಸಾಂಕ್ರಾಮಿಕದಿಂದಾಗಿ ಹೆಚ್ಚಿನ ವ್ಯತರಿಕ್ತ ಪರಿಣಾಮವನ್ನು ಕೈಗಾರಿಕಾ ವಲಯದ ಮೇಲೆ ಆಗಿರುತ್ತದೆ. 2020–21ನೇ ಸಾಲಿನಲ್ಲಿ ಕೈಗಾರಿಕಾ ವಲಯದ ಪಾಲು ಶೇಕಡ 19.4ಕ್ಕೆ ಇಳಿಕೆಯಾಗಿದೆ. ಇದೇ ಅವಧಿಯಲ್ಲಿ ಸೇವಾ ವಲಯದ ಪಾಲು ಶೇಕಡ 66.3 ಮತ್ತು ಕೃಷಿ ವಲಯದ ಪಾಲು ಶೇಕಡ 14.3ಕ್ಕೆ ಏರಿಕೆಯನ್ನು ಕಂಡಿದೆ.

ಉದ್ಯೋಗದ ಹೊಸ ಸ್ವರೂಪ: (Gig Economy)

ಡಿಜಿಟಲ್ ಲೇಬರ್ ಪ್ಲಾಟ್‌ಫಾರ್ಮ್ (ಗಿಗ್ ಆರ್ಥಿಕತೆ) ಇತ್ತೀಚಿನ ಅವಧಿಯಲ್ಲಿ ರೂಪಾಂತರವಾಗುತ್ತಿರುವ ಅತ್ಯಂತ ಮಹತ್ವದ ಉದ್ಯೋಗ ಸ್ವರೂಪಗಳಲ್ಲಿ ಒಂದೆಂದರೆ, 'ಡಿಜಿಟಲ್ ಲೇಬರ್ ಪ್ಲಾಟ್‌ಫಾರ್ಮ್'ಗಳ ಬೆಳವಣಿಗೆ. ಇದರಲ್ಲಿ ಎರಡು ರೀತಿಗಳಿವೆ: ಒಂದು ವೆಬ್ ಆಧಾರಿತ ("ಕ್ರೌಡ್ ವರ್ಕ್"), ಮತ್ತೊಂದು ಸ್ಥಳ–ಆಧಾರಿತ ಅಪ್ಲಿಕೇಶನ್ಸ್ (ಆಪ್ಸ್). ಇಲ್ಲಿ ಕೆಲಸದ ವಿಧಾನಗಳು ಹಿಂದಿನಿಂದ ಬಂದ ಹಲವಾರು ಕೆಲಸದ ವಿಧಾನಗಳ ರೀತಿಯಲ್ಲೇ ಕಾಣುತ್ತವೆ. ಅಂದರೆ ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ವ್ಯಕ್ತಿಗಳಿಗೆ ಕೆಲಸವನ್ನು ಹಂಚುವುದು. ವಸತಿ, ಸಾರಿಗೆ, ಎಲ್ಲಾ ರೀತಿಯ ವಸ್ತುಗಳ ಡೆಲಿವರಿ, ಗೃಹ ಕೆಲಸಗಳು ಮುಂತಾದ ಕೆಲಸಗಳನ್ನು ಇದು ಒಳಗೊಂಡಿದೆ. ಬೆಂಗಳೂರಿನಲ್ಲಿ ಇದನ್ನು ವ್ಯಾಪಕವಾಗಿ ಬಹಿರಂಗವಾಗಿ ಕಾಣಬಹುದು. ಅಮೇಜಾನ್, ಫ್ಲಿಪ್‌ಕಾರ್ಟ್, ಊಬರ್, ಓಲಾ, ಸ್ವಿಗ್ಗಿ, ಜೊಮಾಟೊ, ಬಿಗ್ ಬ್ಯಾಸ್ಕೆಟ್, ಹೀಗೆ ನೂರಾರು ಕಂಪನಿಗಳಲ್ಲಿ ಕಾರ್ಮಿಕರು ಗಂಟೆಗಳ ಆಧಾರದಲ್ಲಿ, ಡೆಲಿವರಿಯ ಆಧಾರದಲ್ಲಿ, ಟ್ರಿಪ್‌ಗಳ ಆಧಾರದಲ್ಲಿ



ಕೃಪೆ: ಸತೀಶ್ ಆಚಾರ್ಯ

ಕೆಲಸ ಮಾಡುವುದನ್ನು ಕಾಣಬಹುದು. ಈ ಆಪ್ ಆಧಾರಿತ ಕೆಲಸಗಳು ಕಾರ್ಮಿಕರ ಕೆಲಸದ ಸ್ವರೂಪವನ್ನೇ ಬದಲಾಯಿಸಿಬಿಟ್ಟಿದೆ.

ಆರ್ಥಿಕ ಬೆಳವಣಿಗೆಯ ಮೇಲೆ ಕೋವಿಡ್–19ರ ಪರಿಣಾಮ

2021–22ನೇ ಸಾಲಿನ ಮುನ್ಸೂಚನಾ ಅಂದಾಜುಗಳಂತೆ ಕರ್ನಾಟಕ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಪ್ರಸಕ್ತ ಬೆಲೆಗಳಲ್ಲಿ 2020–21ನೇ ಸಾಲಿನ ರೂ. 17.31 ಲಕ್ಷ ಕೋಟಿಗಳಿಗೆ ಹೋಲಿಸಿದರೆ, 2021–22ನೇ ಸಾಲಿಗೆ ರೂ.20.5 ಲಕ್ಷ ಕೋಟಿಗಳಾಗುವ ನಿರೀಕ್ಷೆಯಿದೆ. ಇದು ಭಾರತದ ಒಟ್ಟು ಆಂತರಿಕ ಉತ್ಪನ್ನವಾದ ರೂ. 232.15 ಲಕ್ಷ ಕೋಟಿಗೆ ಶೇಕಡ 8.8ರಷ್ಟು ಕೊಡುಗೆಯನ್ನು ನೀಡಿರುತ್ತದೆ. 2020–21ನೇ ಸಾಲಿನಲ್ಲಿ ಕೋವಿಡ್–19 ಸಾಂಕ್ರಾಮಿಕ ಪೀಡಿತವಾಗಿದ್ದ ಸಂದರ್ಭದಲ್ಲಿ ರಾಜ್ಯವು ಶೇಕಡ 7.2 ರಷ್ಟು ದರದಲ್ಲಿ ಬೆಳವಣಿಗೆಯನ್ನು ಪ್ರಸಕ್ತ ಬೆಲೆಗಳಲ್ಲಿ ಸಾಧಿಸಿದೆ ಎನ್ನುತ್ತಿದೆ ಕರ್ನಾಟಕ ಆರ್ಥಿಕ ಸಮೀಕ್ಷಾ ವರದಿ. ಆದರೆ ಇದೇ ಸಂದರ್ಭದಲ್ಲಿ ಭಾರತವು ಮುನ್ಸೂಚನಾ ಅಂದಾಜುಗಳಂತೆ ಶೇಕಡ (–)3ರಷ್ಟು ಬೆಳವಣಿಗೆಯನ್ನು ಸಾಧಿಸಿದೆ ಎನ್ನುವುದರತ್ತ ಅದು ಬೆರಳು ಮಾಡಿ ತೋರಿಸಿದೆ.

ಕೊವೀಡ್: ಸಂಘಟಿತ ಕಾರ್ಮಿಕ ವರ್ಗದ ಮೇಲೆ ಪರಿಣಾಮ

ಕಾರ್ಮಿಕ ಇಲಾಖೆಯ 2018ರ ಸಾಲಿನ ವಾರ್ಷಿಕ ವರದಿಯಂತೆ 2018 ಡಿಸೆಂಬರ್‌ಗೆ ರಾಜ್ಯದಲ್ಲಿ ನೋಂದಣಿಯಾಗಿರುವ ಕಾರ್ಖಾನೆಗಳ ಸಂಖ್ಯೆ 17,390. ಇವುಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ 18,25,865 ರಷ್ಟಿತ್ತು. 2020–21ರ ಸಾಲಿನ ಕರ್ನಾಟಕ ಆರ್ಥಿಕ ಸಮೀಕ್ಷೆಯ ವರದಿಯಲ್ಲಿ ಪ್ರಕಟಿಸಿರುವಂತೆ ರಾಜ್ಯದಲ್ಲಿ ನೋಂದಾಯಿತ ಕಾರ್ಖಾನೆಗಳ ಸಂಖ್ಯೆ 16,991. ಇವುಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ 16,92,494 ಇದೆ ಎಂದು ಹೇಳುತ್ತಿದೆ. 2019ರಲ್ಲಿನ ಆರ್ಥಿಕ ಹಿಂಜರಿತ ಮತ್ತು ಕೋವಿಡ್‌ನಿಂದ ಹಲವಾರು ಕೈಗಾರಿಕೆಗಳು ಮುಚ್ಚಲ್ಪಟ್ಟಿರುವುದು ಮತ್ತು ಒಂದುವರೆ ಲಕ್ಷಕ್ಕಿಂತ ಹೆಚ್ಚು ಕೈಗಾರಿಕಾ ಕಾರ್ಮಿಕರು ಕೆಲಸವನ್ನು ಕಳೆದು ಕೊಂಡಿರುವುದನ್ನು ಸೂಚಿಸುತ್ತದೆ. ಅದರೆ 5,096 ಬಾಯ್ಲರ್‌ಗಳ ಸಂಖ್ಯೆ ರಾಜ್ಯದಲ್ಲಿ 5,264 ಕ್ಕೆ ಏರಿಕೆಯಾಗಿದೆ. ಇದು ಕೋವಿಡ್ ನಂತರ ವೈದ್ಯಕೀಯ ಸಂಬಂಧಿತ ಕೈಗಾರಿಕೆಗಳ ಸಂಖ್ಯೆ ಹೆಚ್ಚಳಗೊಂಡಿರುವುದು ಗಮನಿಸಬಹುದಾಗಿದೆ. ಇದರ ಬಹುಪಾಲು ಬೆಂಗಳೂರಿನದ್ದು.

ಕೋವಿಡ್ ನಂತರ ಕಾರ್ಮಿಕ ಕಾನೂನುಗಳ ಉಲ್ಲಂಘನೆ ನಿರಂತರವಾಗಿ ನಡೆದಿದೆ. 2020 ಕೋವಿಡ್ ಸಂದರ್ಭದಲ್ಲಿ ಕಾರ್ಮಿಕ ಇಲಾಖೆಯಲ್ಲಿ ಲೇ–ಆಫ್, ರಿಟ್ರೆಂಚ್‌ಮೆಂಟ್, ವಿಆರ್‌ಎಸ್, ಸೇವೆಯಿಂದ ವಜಾ, ಕ್ಲೋಸರ್ ಮುಂತಾದ ಕಾರಣಕ್ಕೆ ಸುಮಾರು 5500 ಅರ್ಜಿಗಳು 2020 ಏಪ್ರಿಲ್ ನಿಂದ ಆಗಸ್ಟ್ ಅವಧಿಯಲ್ಲಿ ಸಲ್ಲಿಕೆಯಾಗಿವೆ. ಈ ಅರ್ಜಿಗಳ ಇತ್ಯರ್ಥಕ್ಕೆ ಕಾರ್ಯಪಡೆ ರಚಿಸಿದರು ಪ್ರಯೋಜನವಾಗಲಿಲ್ಲ. ಕಾರ್ಮಿಕರು ಸರಿಯಾದ ಪರಿಹಾರವಿಲ್ಲದೆ ಉದ್ಯೋಗಗಳನ್ನು ಕಳೆದುಕೊಳ್ಳುವಂತಾಗಿದೆ. ಅನೇಕ ಮಾಲೀಕರು ವೇತನ ಒಪ್ಪಂದಗಳ ಉಲ್ಲಂಘನೆ, ಕಾರ್ಮಿಕರ ವೇತನ ಕಡಿತ ಮುಂತಾದ ಕ್ರಮಗಳನ್ನು ಕೈಗೊಂಡರು ಕಾರ್ಮಿಕ ಇಲಾಖೆ ಯಾವುದೇ ಕ್ರಮಗಳನ್ನು ವಹಿಸಿಲ್ಲ. ಕೇಂದ್ರ ಸರ್ಕಾರ ರೂಪಿಸಿರುವ ನೂತನ ಸಂಹಿತೆಗಳ ಜಾರಿಯ ಕೆಲಸದಲ್ಲಿ ಕಾರ್ಮಿಕ ಇಲಾಖೆ ಮೂಲಕ ರಾಜ್ಯ ಸರ್ಕಾರ ತೊಡಗಿದೆ. ವಿವಿಧ ಕಾರ್ಮಿಕ ಕಾಯ್ದೆಗಳಡಿ ರಾಜ್ಯದಲ್ಲಿ ನಡೆಸಲಾದ ಒಟ್ಟು ತಪಾಸಣೆಯ ಸಂಖ್ಯೆ 5,838 ಆಗಿದೆ. ಹೂಡಲಾದ ಮೊಕದ್ದಮೆಗಳ ಸಂಖ್ಯೆ ಕೇವಲ 885 ಆಗಿದೆ. ವಿಲೇವಾರಿ ಮಾಡಲಾದ 545 ಮೊಕದ್ದಮೆಗಳಿಂದ ರೂ.13,93,395 ದಂಡದ ಮೊತ್ತವಾಗಿ ಸಂಗ್ರಹವಾಗಿದೆ. ಅಂದರೆ ನಡೆಸಲಾದ ತಪಾಸಣೆ ಹೆಚ್ಚಿದ್ದರೂ ಹೂಡಲಾದ ಮೊಕದ್ದಮೆಗಳ ಸಂಖ್ಯೆ ಕಡಿಮೆ ಇರುವುದು ಕಾರ್ಮಿಕ ಇಲಾಖೆಯ ಕಾರ್ಯವೈಖರಿಗೆ ಹಿಡಿದ ಕನ್ನಡಿಯಾಗಿದೆ.

ಕೋವಿಡ್ 19: ಅಸಂಘಟಿತ/ವಲಸೆ ಕಾರ್ಮಿಕರು ಅನುಭವಿಸಿದ ಸಂಕಟಗಳು

ಈ ಅವಧಿಯಲ್ಲಿ ತಲೆದೋರಿದ ಕೋವಿಡ್–19 ಅತ್ಯಂತ ಆಘಾತಕಾರಿ ರೊಗವು ದೇಶಾದ್ಯಂತ ಮತ್ತು ರಾಜ್ಯದಲ್ಲಿ ಹಾಗೂ ದೇಶ ವಿದೇಶಗಳಲ್ಲಿ ಲಕ್ಷ ಲಕ್ಷಗಟ್ಟಲೆ ಅಮಾಯಕರನ್ನು ಅದು ಬಲಿ ಪಡೆಯಿತು. ಈ ಅವಧಿಯಲ್ಲಿ ಲಕ್ಷಾಂತರ ಕಾರ್ಮಿಕರು ಅತಿ ಹೆಚ್ಚಿನ ಕಷ್ಟ ನಷ್ಟಗಳಿಗೆ ಒಳಗಾದರು. ಅದರಲ್ಲೂ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದ ಸಾವಿರಾರು ಸಂಖ್ಯೆಯ ವಲಸೆ ಕಾರ್ಮಿಕರು ಸಾವಿರಾರು ಕಿಮೀ ಭಯ ಮತ್ತು ಆತಂಕದಿಂದ ನಡೆದೇ ತಮ್ಮ ಊರುಗಳಿಗೆ ತೆರಳಿದರು.

ಕೊವೀಡ್ 19 ಅವಕಾಶವನ್ನು ರಾಜ್ಯದ ಆಡಳಿತರೂಢ ಬಿಜೆಪಿ ಸರ್ಕಾರ ಪರಿಹಾರ ಕಾರ್ಯ ಹೆಸರಲ್ಲಿ ವಿಶೇಷವಾಗಿ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯ ಸಾವಿರಾರು ಕೋಟಿ ಹಣವನ್ನು ಮನಬಂದಂತೆ ಖರ್ಚು ಮಾಡುತ್ತಾ ವ್ಯಾಪಕವಾದ ಭ್ರಷ್ಟಚಾರ ನಡೆಸಿತು, ಇದರ ವಿರುದ್ದ ವಿಶಾಲವಾದ ಕಟ್ಟಡ ಕಾರ್ಮಿಕ ಚಳವಳಿಯನ್ನು ನಾವು ಸಂಘಟಿಸಿ ಭ್ರಷ್ಟ ಸರ್ಕಾರ ಹಾಗೂ ಕಾರ್ಮಿಕ ಸಚಿವರು ಹಾಗೂ ಇಲಾಖೆಯ ಭ್ರಷ್ಟಚಾರವನ್ನು ಬಯಲಿಗೆಳೆಯುವ ಪ್ರಯತ್ನವನ್ನು ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ಕಾರ್ಮಿಕ ಫೆಡರೇಷನ್ ಅತ್ಯಂತ ಪರಿಣಾಮಕಾರಿಯಾಗಿ ಸಂಘಟಿತ್ತು.

ಚಳುವಳಿಯಿಂದಾಗಿ ನೌಕರರು ಪಡೆದಿರುವ ಸೌಲಭ್ಯಗಳು, ಗೌರವಧನ ಹೆಚ್ಚಳದಂತಹ ಸಾಧನೆಗಳಿಗೆ ಕಾರಣವಾದ ಸ್ಕೀಂ ನೌಕರರ ಚಳುವಳಿ ಮುರಿಯಲು ಒಂದೆಡೆ ಟ್ರಸ್ಟ್ ಹೆಸರಿನಲ್ಲಿ ಅಂಗನವಾಡಿ ನೌಕರರನ್ನು ಸಂಘಟಿಸುವ ಮತ್ತೊಂದೆಡೆ ರಾಷ್ಟ್ರಿಯ ಶಿಕ್ಷಣ ನೀತಿಯಡಿ ಇಡೀ ಯೋಜನೆಯನ್ನೇ ಇಲ್ಲದಾಗಿಸುವ ಯತ್ನ ನಡೆದಿದೆ. ಈ ಸವಾಲನ್ನು ನಮ್ಮ ಅಂಗನವಾಡಿ ನೌಕರರ ಫೆಡರೇಷನ್ ಪರಿಣಾಮಕಾರಿಯಾಗಿ ಎದುರಿಸಿದೆ. ಪರಂಪರಾಗತ ಬೀಡಿ, ಗೇರು ಮುಂತಾದ ಕೈಗಾರಿಕಾ ಕಾರ್ಮಿಕರು ಉದ್ದಿಮೆಗಳು ಎದುರಿಸುತ್ತಿರುವ ಸವಾಲುಗಳಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪಂಚಾಯಿತಿ ಮತ್ತು ಬಿಸಿಊಟ ನೌಕರರು ವರ್ಷಾನುಗಟ್ಟಲೆ ಸಂಬಳ ಇಲ್ಲದೆ ದುಡಿಯಬೇಕಾಗಿ ಬಂದಿದೆ. ಸ್ಕೀಂ ನೌಕರರು ನೇರ ನಗದು ವರ್ಗಾವಣೆ, ISKCON ಅದಮ್ಯ ಚೇತನ ಮುಂತಾದ ಸ್ವಯಂ ಸೇವಾ ಸಂಘಟನೆಗಳ ಅಪಾಯವನ್ನು ಎದುರಿಸಬೇಕಾಗಿ ಬಂದಿದೆ.

ರಾಜ್ಯದ ಕೈಗಾರಿಕಾ ಪರಿಸ್ಥಿತಿ:

ರಾಜ್ಯವು ಬಯೋಟೆಕ್ ನವೋದ್ಯಮಗಳನ್ನು ಒಳಗೊಂಡಂತೆ 750 ಬೃಹತ್, ಮಧ್ಯಮ ಮತ್ತು ಸಣ್ಣ ಕಂಪನಿಗಳನ್ನು ಹೊಂದಿದೆ. 2019–20ನೇ ಸಾಲಿನಲ್ಲಿ ಕರ್ನಾಟಕದ ಜೈವಿಕ ತಂತ್ರಜ್ಞಾನ ಕ್ಷೇತ್ರದ ರಫ್ತುಗಳ ಆದಾಯವು 20,283 ಕೋಟಿ ರೂಗಳಷ್ಟಾಗಿದೆ. ಕರ್ನಾಟಕ ಜೈವಿಕ ತಂತ್ರಜ್ಞಾನ ಕಾರ್ಯನೀತಿ (2017–22) ಯಲ್ಲಿ 2025 ರ

ಪುಟ 12 ಕ್ಕೆ

ರಾಜ್ಯದ ದುಡಿಯುವ ವರ್ಗದ ಸಾಮಾಜಿಕ ಆರ್ಥಿಕ ಸ್ಥಿತಿಗತಿ...

ಪುಟ 11 ರಿಂದ

ಒಳಗೆ ರಾಷ್ಟ್ರೀಯ ಜೈವಿಕ ಆರ್ಥಿಕತೆ (ಬೈಯೋ ಎಕಾನಮಿ) ತಲುಪಲು ಉದ್ದೇಶಿಸಿರುವ 7 ಲಕ್ಷ ಕೋಟಿ ರೂಗಳಲ್ಲಿ 40 ರಿಂದ 60 ರಷ್ಟು ಮಾರುಕಟ್ಟೆ ಪಾಲನ್ನು ಹೊಂದುವ ಗುರಿ ಹೊಂದಲಾಗಿದೆ. 2019ರ ಅಂತ್ಯದ ವೇಳೆಗೆ ರಾಜ್ಯದ ಬಯೋ ಎಕಾನಮಿ ಉತ್ಪಾದನೆಯು 1.58 ಲಕ್ಷ ಕೋಟಿ ರೂಗಳಷ್ಟಾಗಿದೆ. 2018 ರ ಹೋಲಿಕೆಯಲ್ಲಿ 17 ಶೇಕಡ ಬೆಳವಣಿಗೆ ಸಾಧಿಸಿದೆ.

ಕರ್ನಾಟಕ ಮಾಹಿತಿ ತಂತ್ರಜ್ಞಾನ ಕಾರ್ಯನೀತಿ 2020–25 ಅನ್ನು ರಾಜ್ಯ ಸರ್ಕಾರವು ರೂಪಿಸಿದೆ. ಮಾಹಿತಿ ತಂತ್ರಜ್ಞಾನ ಕಂಪನಿಗಳಿಗೆ ಕೈಗಾರಿಕಾ ಸಂಸ್ಥೆಗಳ ಸ್ಥಾಯಿ ಆದೇಶಗಳ ಕಾಯ್ದೆಯಿಂದ ವಿನಾಯಿತಿಯನ್ನು ಮುಂದುವರಿಸಿದೆ. ಕಾರ್ಯನೀತಿಯ ಭಾಗವಾಗಿ ಐಟಿ ಹಬ್/ಕ್ಲಸ್ಟರ್‌ಗಳ ಮೂಲಸೌಕರ್ಯಕ್ಕಾಗಿ ಸ್ಥಿರ ಹೂಡಿಕೆಯ 20 ಶೇಕಡರಷ್ಟರವರೆಗೆ ಗರಿಷ್ಠ 3 ಕೋಟಿ ರೂಗಳ ಹಣಕಾಸು ನೆರವನ್ನು, ಕಾರ್ಯಸ್ಥಳಗಳ ಮೂಲ ಸೌಕರ್ಯಕ್ಕೆ ಶೇ.33 ರವರೆಗೆ ಗರಿಷ್ಠ 2 ಕೋಟಿ ರೂಗಳ ಹಣಕಾಸು ಬೆಂಬಲ, 3 ರಿಂದ 6 ಲಕ್ಷದವರೆಗೆ ಗುತ್ತಿಗೆ / ಬಾಡಿಗೆ ಮರುಪಾವತಿ, ರಾಜ್ಯದ 2 ಮತ್ತು 3ನೇ ಹಂತದ ನಗರಗಳಲ್ಲಿ ಸಂಸ್ಥೆ ಸ್ಥಾಪನೆಗೆ ಭವಿಷ್ಯನಿಧಿ/ನೌಕರರ ರಾಜ್ಯ ವಿಮೆ ರಿಯಾಯತಿಯನ್ನು ಮುದ್ರಾಂಕ ಶುಲ್ಕ ವಿನಾಯಿತಿಯನ್ನು ಪ್ರಕಟಿಸಿದೆ. ಅಂತೆಯೇ ಕರ್ನಾಟಕದ ವಿದ್ಯುನ್ಮಾನ ವ್ಯವಸ್ಥೆಗಳ ವಿನ್ಯಾಸ ಮತ್ತು ತಯಾರಿಕಾ (ESDM) ನೀತಿ 2017–22 ಕರ್ನಾಟಕ ಅನಿಮೇಷನ್ ವಿಷುವಲ್ ಗೇಮಿಂಗ್ ಮತ್ತು ಕಾಮಿಕ್ಸ್ ನೀತಿ 2017–22 ಹಾಗೂ ಕರ್ನಾಟಕ ಸ್ಟಾರ್ಟ್ ಅಪ್ ನೀತಿ 2015–2020 ಗಳನ್ನು ಪರಿಷ್ಕರಿಸಿ ನೂತನ ನೀತಿಗಳ ರೂಪಿಸಲು ರಾಜ್ಯ ಸರ್ಕಾರ ಕ್ರಮವಹಿಸುತ್ತಿದೆ.

ಕೈಗಾರಿಕಾ ವಲಯದ ಹಿನ್ನಡೆ:

ಕೈಗಾರಿಕಾ ವಲಯವು ಸೇವೆ ಮತ್ತು ಕೃಷಿ ಕ್ಷೇತ್ರಗಳಿಗೆ ಹೋಲಿಸಿದರೆ, ಸಾಕಷ್ಟು ಹಿಂದೆ ಬಿದ್ದಿರುವುದು ಗೋಚರಿಸುತ್ತದೆ. ಈ ವಲಯವು ಶೇಕಡ 6.1ರ ಸಿಎಜಿಆರ್ ಯನ್ನು ಹೊಂದಿರುತ್ತದೆ. ಈ ವಲಯಕ್ಕೆ ನೀಡಲ್ಪಟ್ಟಿರುವ ಬೆಂಬಲ ಮತ್ತು ಸಹಾಯ ಅಸಮರ್ಪಕವಾಗಿರುವುದನ್ನು ಕಾಣಬಹುದು. ಕಳೆದ 5 ವರ್ಷಗಳ ಬೆಳವಣಿಯು ಶೇಕಡ 6.1 ಸಿಎಜಿಆರ್ ಇದ್ದು, ಇದೇ ಅವಧಿಯಲ್ಲಿ ಕೃಷಿ ಶೇಕಡ 16.6ರಷ್ಟು ಸಿಎಜಿಆರ್‌ಯನ್ನು ಮತ್ತು ಸೇವಾ ವಲಯ ಶೇಕಡ 11.6ರಷ್ಟು ಸಿಎಜಿಆರ್‌ಯನ್ನು ಹೊಂದಿರುತ್ತದೆ. ಇದರಿಂದಾಗಿ ಕರ್ನಾಟಕದ ಉದ್ಯೋಗ ಬೆಳವಣಿಗೆಯ ದರ ತೀವ್ರ ಕುಸಿತವನ್ನು ಕಂಡಿರುತ್ತದೆ. ಕರ್ನಾಟಕದ ಜಿಎಸ್‌ವಿಎಯಲ್ಲಿ ಕೈಗಾರಿಕೆ ಶೇಕಡ 20.3ರಷ್ಟು ಕೊಡುಗೆಯನ್ನು ನೀಡಿದರೆ, ಗುಜರಾತ್ ರಾಜ್ಯದಲ್ಲಿ ಇದರ ಕೊಡುಗೆ ಶೇಕಡ 48.2, ತಮಿಳುನಾಡಿನಲ್ಲಿ ಶೇಕಡ 33ರಷ್ಟು ಮತ್ತು ಮಹಾರಾಷ್ಟ್ರದಲ್ಲಿ ಶೇಕಡ 28.4ರಷ್ಟು ಇರುತ್ತದೆ. ಹಾಗಾಗಿ ಸೇವಾ ವಲಯದಲ್ಲಿ ಉತ್ತಮವಾದ ಸಾಧನೆಯನ್ನು ನಾವು ನೋಡುತ್ತಿದ್ದರೂ, ಕೈಗಾರಿಕಾ ವಲಯದಲ್ಲಿ ಗಮನಾರ್ಹವಾದ ಸಾಧನೆ ಇಲ್ಲವಾಗಿರುತ್ತದೆ.

ಕೋಷ್ಟಕ –5 : 2019–20 ರಿಂದ 2021–22 ರವರೆಗಿನ ರಾಜ್ಯ ಆಂತರಿಕ ಉತ್ಪನ್ನದಲ್ಲಿ ವಿವಿಧ ವಲಯಗಳ ಸಂಯೋಜನೆ

ವಲಯಗಳು	2019–20ರ ಜಿಎಸ್‌ವಿಎ	2020–21ರ ಜಿಎಸ್‌ವಿಎ	2021–22ರ' ಜಿಎಸ್‌ವಿಎ	5 ವರ್ಷದ ಸಿಎಜಿಆರ್
ಕೃಷಿ	12.3%	14.3%	14.1%	16.6%
ಕೈಗಾರಿಕೆಗಳು	21.3%	19.4%	19.8%	6.1%
ಸೇವೆಗಳು	66.3%	66.3%	66.1%	11.6%
ಜಿಎಸ್‌ವಿಎ	100.0%	100.0%	100.0%	11.0%

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಕರ್ನಾಟಕ ಆರ್ಥಿಕ ಸಮೀಕ್ಷೆ 2021–22

ಕೃಷಿ ವಲಯದಲ್ಲಿರುವ ಹೆಚ್ಚುವರಿ ಕಾರ್ಮಿಕರನ್ನು ಕೌಶಲ್ಯವನ್ನು (ಇತ್ತೀಚಿಗೆ ದೀಪಾವಳಿ ಮುನ್ನ ದಿನ ಪ್ರಧಾನಿಗಳು 10 ಲಕ್ಷ ಯುವಜನರಿಗೆ ಉದ್ಯೋಗ ಒದಿಸಲು ರೋಜ್ಗಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು ಗಮನಿಸಿ) ನೀಡಿ ಕೈಗಾರಿಕಾ ವಲಯಕ್ಕೆ ವರ್ಗಾಯಿಸುವ ಮತ್ತು ಕೈಗಾರಿಕಾ ವಲಯಕ್ಕೆ ಅಗತ್ಯವಿರುವ ಬಂಡವಾಳ ಹೂಡಿಕೆಗೆ ಅವಕಾಶ ನೀಡುವ ಅಗತ್ಯವಿದೆ ಎಂದು ಭಾವಿಸಲಾಗಿದೆ. ಕೋವಿಡ್–19 ಸಾಂಕ್ರಾಮಿಕದ ಪ್ರಭಾವವನ್ನು ರಾಜ್ಯದ ಆರ್ಥಿಕ ವ್ಯವಸ್ಥೆಯ ಎಲ್ಲಾ ವಲಯಗಳಲ್ಲೂ ಕಾಣಬಹುದಾಗಿದೆ.

ಕೋವಿಡ್ ಲಾಕ್ಡೌನ್‌ನಿಂದ ಉಂಟಾಗಿರುವ ಆರ್ಥಿಕ ಹಿನ್ನೆಡೆ ಸರಿದೂಗಿಸಿಕೊಳ್ಳುವ ಮತ್ತು ಕೇಂದ್ರದಿಂದ ಬರಬೇಕಾದ ಜಿಎಸ್‌ಟಿ ಬಾಕಿ ಮತ್ತು ಪರಿಹಾರದ ಕೊರತೆ ನೀಗಿಸುವ ನಿಟ್ಟಿನಲ್ಲಿ ವಿತ್ತೀಯ ಕೊರತೆ ಮತ್ತು ಬಜೆಟ್ ನಿರ್ವಹಣೆ ಕಾಯ್ದೆಗೆ ತಿದ್ದುಪಡಿ ತಂದು ರಾಜ್ಯದ ಆಂತರಿಕ ಉತ್ಪನ್ನದ 3 ಶೇಕಡ ಸಾಲ ಪಡೆಯಲು ಇದ್ದ ಗರಿಷ್ಠ ಮಿತಿಯನ್ನು 5 ಶೇಕಡಕ್ಕೆ ರಾಜ್ಯ ಬಿಜೆಪಿ ಸರ್ಕಾರವು ಹೆಚ್ಚಿಸಿದೆ. ಕೈಗಾರಿಕಾ ಕಾರ್ಮಿಕರ 'ವ್ಯತ್ಯಸ್ಥ ತುಟ್ಟಿಭತ್ಯೆ' (ವಿಡಿಎ) ನೀಡಿಕೆ ಮುಂದೂಡಿಕೆ, ನಿಶ್ಚಿತ ಕಾಲಾವಧಿ ನೌಕರರ ನೇಮಕಕ್ಕೆ ಅವಕಾಶ, ಲಾಕ್ಡೌನ್ ಕಾಲಾವಧಿ ವೇತನ ಕೊಡಿಸಲು ಕ್ರಮ ವಹಿಸದ, ಕೋವಿಡ್ ನಿಯಂತ್ರಣ ಮತ್ತು ಲಾಕ್ಡೌನ್ ಪರಿಹಾರ ನೀಡುವಲ್ಲಿನ ವೈಫಲ್ಯವಾಗಿದೆ. ರಾಜ್ಯ ಸರ್ಕಾರದಲ್ಲಿನ ಶೇ 40 ರಷ್ಟು ಭ್ರಷ್ಟಾಚಾರ, ಆರೋಗ್ಯ ಇಲಾಖೆ ಮತ್ತು ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿನ ಸಾವಿರಾರು ಕೋಟಿ ಖರೀದಿಗಳ ಹಗರಣಗಳು ರಾಜ್ಯದ ಅಭಿವೃದ್ಧಿ ಮೇಲೆ ಕರಾಳಛಾಯೆ ಬೀರಿವೆ. ಇದರ ಜತೆ ಬಿಜೆಪಿ ನೈತಿಕತೆಗೆ ಹಿಡಿದ ಕನ್ನಡಿಯಾಗಿದೆ.

ಆರ್ಥಿಕ ಕುಸಿತಕ್ಕೆ ಕಾರಣಗಳು:

ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ನೋಟು ರದ್ಧತಿ, ಅವೈಜ್ಞಾನಿಕ ಜಿಎಸ್‌ಟಿ ಜಾರಿ ಮುಂತಾದ ದಿವಾಳಿಕೋರ ಆರ್ಥಿಕ ನೀತಿಗಳು ಮೇಲಿನ ಆಂತರಿಕ ಉತ್ಪನ್ನ ದರದ ನಿರಂತರ ಕುಸಿತಕ್ಕೆ ಕಾರಣವಾಗಿದೆ. ಅಂತೆಯೇ ಕೋವಿಡ್ ಸಾಂಕ್ರಾಮಿಕ ಮತ್ತದರ ನಿರ್ವಹಣೆಯಲ್ಲಿ ಕೇಂದ್ರ ರಾಜ್ಯ ಬಿಜೆಪಿ ಸರ್ಕಾರಗಳ ದುರಾಡಳಿತ, ಲಾಕ್ಡೌನ್ ಸಂತಸ್ತರಿಗೆ ಪರಿಹಾರ ನೀಡುವಲ್ಲಿ ತೋರಿದ ನಿರ್ಲಕ್ಷ್ಯ, ನೇರ ನಗದು ವರ್ಗಾವಣೆ, ತಲಾ 10 ಕೆಜಿ ಉಚಿತ ಆಹಾರ ಧಾನ್ಯ ವಿತರಣೆ, ನಗರ ಪ್ರದೇಶಗಳಿಗೂ ಉದ್ಯೋಗ ಖಾತ್ರಿ ವಿಸ್ತರಣೆ, 200 ದಿನಗಳ ಉದ್ಯೋಗ ಖಾತ್ರಿ ಕೆಲಸದ ದಿನಗಳ ಹೆಚ್ಚಳದೊಂದಿಗೆ ಕೂಲಿ ಹೆಚ್ಚಳದ ಪರ್ಯಾಯ ಕ್ರಮವಹಿಸಲು ಬಿಜೆಪಿ ಸರ್ಕಾರದ ಕ್ರಿಮಿನಲ್ ನಿರಾಕರಣೆಯು ಇಂತಹ ಆಂತರಿಕ ಉತ್ಪನ್ನ ಬೆಳವಣಿಗೆ ದರ ಕುಸಿತಕ್ಕೆ ನೇರ ಕಾರಣವಾಗಿದೆ. ಈ ಕಾಲಾವಧಿಯಲ್ಲಿ ಒಂದೆಡೆ ಅತಿವೃಷ್ಟಿ, ಮತ್ತೊಂದೆಡೆ ಕೋವಿಡ್–19, ಲಾಕ್ಡೌನ್ ಮಗದೊಂದೆಡೆ ಬಿಜೆಪಿ ಸರ್ಕಾರಗಳ ದಿವಾಳಿಕೋರ ನವಉದಾರವಾದಿ ಆರ್ಥಿಕ ನೀತಿಗಳು ರಾಜ್ಯದ ಆರ್ಥಿಕತೆಯನ್ನು ಋಣಾತ್ಮಕ ಬೆಳವಣಿಗೆಗೆ ದೂಡಿವೆ. 2022 ನೇ ಸಾಲಿನಲ್ಲಿ ನಿರಂತವಾಗಿ ಸುರಿದ ಮುಂಗಾರು ಮಳೆಯಿಮದಾಗಿಯೇ ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ಮಾತ್ರವೇ ಆದ ಒಟ್ಟು ನಷ್ಟ 7647.13 ಕೋಟಿ ಎಂದು ಕರ್ನಾಟಕ ಸರ್ಕಾರ ಅಂದಾಜು ಮಾಡಿತ್ತು. ಆದರೆ ಈ ವಿಪರೀತ ಮಳೆ ಈ ಅಕ್ಟೋಬರ್ ವರೆಗೂ ಮುಂದುವರೆದು ಅಂದಾಜು 10 ಸಾವಿರ ಕೋಟಿಯಷ್ಟು ನಷ್ಟ ಉಂಟು ಮಾಡಿದೆ ಇದು ರಾಜ್ಯದ ಆರ್ಥಿಕತೆ ಮೇಲೆ ಮತ್ತಷ್ಟು ಕೆಟ್ಟ ಪರಿಣಾಮ ಬೀರಲಿದೆ.

ಉದ್ಯೋಗ ನಾಶ:

ಕೋವಿಡ್ ಲಾಕ್ಡೌನ್ ಪರಿಣಾಮವಾಗಿ ದೊಡ್ಡ ಪ್ರಮಾಣದ ಉದ್ಯೋಗ ನಾಶವುಂಟಾಗಿದೆ. ಲಾಕ್ಡೌನ್‌ನಿಂದಾಗಿ ಒಂದೆರೆಡು ತಿಂಗಳಲ್ಲೆ 6 ಶೇಕಡವಿದ್ದ ನಿರುದ್ಯೋಗ ದರವು 20 ಶೇಕಡಕ್ಕೆ ಏರಿಕೆಯಾಗಿರುವುದು ವರದಿಯಾಗಿದೆ. ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಏಕಾನಮಿ (CMIE) ನಡೆಸಿದ ಸರ್ವೆ ಪ್ರಕಾರ 2020 ಏಪ್ರಿಲ್‌ನಲ್ಲಿ ನಿರುದ್ಯೋಗ ದರವು 26.3 ಶೇಕಡವಾರು ಅಂಶ ಏರಿಕೆಯಾಗಿ 29.8 ಶೇಕಡಕ್ಕೆ ತಲುಪಿದೆಯಂತೆ. ರಾಷ್ಟ್ರೀಯ ನಿರುದ್ಯೋಗ ಸರಾಸರಿಯು 23.5 ಶೇಕಡವಿದ್ದಾಗ ರಾಜ್ಯದ ನಿರುದ್ಯೋಗ ದರವು 29.8 ರಷ್ಟಕ್ಕೆ ಏರಿಕೆಯಾಗುವ ಮೂಲಕ ಏಪ್ರಿಲ್ 2019 ರಲ್ಲಿ ಅತ್ಯಂತ ಕಡಿಮೆಯಿದ್ದ 0.5 ಶೇಕಡದಿಂದ ಪ್ರಸಕ್ತ ಪರಿಸ್ಥಿತಿ ತಲುಪಿದೆ ಎಂದು ವರದಿಯು ಗುರುತಿಸಿದೆ.

ಬೆಂಗಳೂರು ಭಾರತದ ಅತ್ಯಂತ ಶ್ರೀಮಂತ ನಗರವೇ? ಹೌದು ಎನ್ನುತ್ತವೆ ಕರ್ನಾಟಕ 2021–22 ರ ಆರ್ಥಿಕ ಸಮೀಕ್ಷೆಯ ಕೆಲವು ಸಂಗತಿಗಳು

ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿನ ಉದ್ಯೋಗ:

ಈ ಅವಧಿಯಲ್ಲಿ ಖಾಸಗಿ ವಲಯದಲ್ಲಿ ಶೇ.0.26 ರಷ್ಟು ಏರಿಕೆಯಾದರೆ ಸಾರ್ವಜನಿಕ ವಲಯದಲ್ಲಿ ಉದ್ಯೋಗ ಪ್ರಮಾಣ 0.14 ರಷ್ಟು ಕುಸಿದಿದೆ. ಕರ್ನಾಟಕದ ಒಟ್ಟು ಕಾರ್ಮಿಕರ ಪೈಕಿ ಶೇ.86.9 ರಷ್ಟು ಅಸಂಘಟಿತ ಕಾರ್ಮಿಕರೇ ಆಗಿರುತ್ತಾರೆ. ರಾಜ್ಯದಲ್ಲಿ ಸಂಘಟಿತ ವಲಯದಲ್ಲಿನ ಉದ್ಯೋಗ ಪ್ರಮಾಣವು 2020ರ ಜೂನ್ ಅಂತ್ಯಕ್ಕೆ ರೂ.24.11,900 ರಷ್ಟಿದ್ದು, ಸಾರ್ವಜನಿಕ ವಲಯದ ಉದ್ಯೋಗ ಕ್ಷೇತ್ರವು ರೂ.10.30,300 ಹಾಗೂ ಖಾಸಗಿ ಕ್ಷೇತ್ರ ರೂ.13.81,500ಗಳನ್ನು ಹೊಂದಿದೆ.

ಕರ್ನಾಟಕ ಉದ್ಯೋಗ ನೀತಿ 2022–25:

ಕರ್ನಾಟಕ ಸರ್ಕಾರ ಇತ್ತೀಚಿಗೆ ಅಂಗೀಕರಿಸಿದ ಕರ್ನಾಟಕ ಉದ್ಯೋಗ ನೀತಿಯು ಹೂಡಿಕೆದಾರರು ಉದ್ಯೋಗಳ ಸಂಖ್ಯೆಯನ್ನು ಹೆಚ್ಚಿಸುವುದು ಹಾಗೂ ಸ್ಥಳೀಯ ಜನರಿಗೆ ಉದ್ಯೋಗವಕಾಶಗಳನ್ನು ನೀಡಬೇಕೆಂದು ನಿರ್ದೇಶಿಸಿದೆ. ಈ ನೀತಿಯಂತೆ ಕೈಗಾರಿಕಾ ಬಂಡವಾಳ ಹೂಡುವ ಮಧ್ಯಮ ಗಾತ್ರದ ಕಂಪನಿಗಳು ಈಗಿರುವ 20 ಉದ್ಯೋಗ ಸೃಷ್ಟಿಗೆ ಬದಲಾಗಿ 27 ಉದ್ಯೋಗಗಳನ್ನು ಸ್ಥಳೀಯರಿಗೆ ಕಲ್ಪಿಸಬೇಕು ಅದೇ ರೀತಿ 50 ಕೋಟಿ ಹೆಚ್ಚುವರಿ ಬಂಡವಾಳ ಹೂಡಿಕೆಗೆ 30–50 ಉದ್ಯೋಗಗಳು, ಬಂಡವಾಳ 100 ಕೋಟಿ ರೂ ಹೂಡಿಕೆಯಾದರೆ 35 ಉದ್ಯೋಗಗಳ್ನನು ಸೃಷ್ಟಿಸಲು ಕಡ್ಡಾಯಗೊಳಿಸಲಾಗಿದೆ. ಹಾಗೆಯೇ ಅರೆ ಬೃಹತ್ ಕೈಗಾರಿಗಳು ಈಗಿರುವ 400 ಮಿತಿಯನ್ನು 510 ಕ್ಕೆ ಹೆಚ್ಚಸಬೇಕು ಎಂದು ನೂತನ ಉದ್ಯೋಗ ನೀತಿಯಲ್ಲಿ ಹೇಳಲಾಗಿದೆ. ಆದರೆ ಬಂಡವಾಳ ಹೂಡಿಕೆ ಮಾಡುವ ಕಂಪನಿಗಳು ಅಸಲಿಗೆ ಕೋಟ್ಯಾಂತರ ಬೆಲೆ ಬಾಳುವ ಭೂಮಿ,ವಿದ್ಯುತ್ ಮತ್ತಿತರೆ ಸೌಕರ್ಯಗಳನ್ನು ಪಡೆದು ಕಂಪನಿ ಆರಂಭಿಸದೇ ಪಡೆದ ಭೂಮಿಯನ್ನು ರಿಯಲ್ ಎಸ್ಟೇಟ್ ದಂಧೆಗೆ ಬಳಸುವುದು ಮತ್ತು ಕೈಗಾರಿಕಾ ಎಸ್ಟೇಟ್ ನೆಪದಲ್ಲಿ ರೈತರಿಂದ ಅತ್ಯಂತ ಕಡಿಮೆಗೆ ಬೆಲೆಗೆ ಭೂಮಿ ಕಬಳಿಸಿ ಅವರನ್ನು ಬೀದಿಗೆ ತಳ್ಳುವುದು ಬಿಜೆಪಿ ಪಕ್ಷ ಮತ್ತು ಸರ್ಕಾರಕ್ಕೆ ಹೊಸದೇನು ಅಲ್ಲ ಎನ್ನುವುದು ನಮಗೆಲ್ಲ ಗೊತ್ತಿರುವ ಸಂಗತಿಯೇ.

ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳಲ್ಲಿ ಉದ್ಯೋಗ ನಾಶ:

2019–20 ರಲ್ಲಿದ್ದ 80,379 ಅತಿಸಣ್ಣ ಕೈಗಾರಿಕೆಗಳ ಸಂಖ್ಯೆ 2020–21 ರಲ್ಲಿ 67,031ಕ್ಕೆ ಕುಸಿದಿದ್ದು, ಕಾರ್ಮಿಕರ ಸಂಖ್ಯೆಯು 3,89,244 ರಿಂದ 2,66,704ಕ್ಕೆ ಕುಸಿದಿದೆ. ಸಣ್ಣ ಕೈಗಾರಿಕೆಗಳ ಸಂಖ್ಯೆ 16,069 ರಿಂದ 14,276ಕ್ಕೆ ಕುಸಿದು ಕಾರ್ಮಿಕರ ಸಂಖ್ಯೆಯು 2,57,408 ರಿಂದ 2,08,273 ಕ್ಕೆ ಕುಸಿದಿದೆ. ಅಂದರೆ ರಾಜ್ಯದ ಅತಿಸಣ್ಣ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಒಟ್ಟು 1,71,639 ಕಾರ್ಮಿಕರು ಕಡಿಮೆಯಾಗಿದ್ದಾರೆ, ನಿಜಾರ್ಥದಲ್ಲಿ ಉದ್ಯೋಗ ಕಳೆದು ಕೊಂಡಿದ್ದಾರೆ. 2017–18 ರಲ್ಲಿ ಅತಿಸಣ್ಣ, ಸಣ್ಣ, ಮಧ್ಯಮ ಉದ್ಯಮಗಳಲ್ಲಿ ಪ್ರತಿ ಉದ್ಯಮಕ್ಕೆ 9.08 ಉದ್ಯೋಗಗಳಿದ್ದರೆ 2020–21 ರಲ್ಲಿ ಪ್ರತಿ ಉದ್ಯಮಕ್ಕೆ ಕೇವಲ 6.6 ಉದ್ಯೋಗಗಳಿವೆ.

20 ಅಧಿಕ ದಿನಗಳು ಮತ್ತು 7000 ಕೋಟಿ ರೂ. ಪ್ರಕಟಣೆಗಳು

ಕೊನೆಗೂ ಚುನಾವಣಾ ಆಯೋಗ ಗುಜರಾತ್ ವಿಧಾನಸಭಾ ಚುನಾವಣೆಗಳ ದಿನಾಂಕಗಳನ್ನು ಪ್ರಕಟಿಸಿದೆ. ಅಕ್ಟೋಬರ್ 14 ರಂದು ಹಿಮಾಚಲ ಪ್ರದೇಶದ ಚುನಾವಣಾ ದಿನಾಂಕಗಳನ್ನು ಪ್ರಕಟಿಸಿದಾಗಲೇ ಇದನ್ನೂ ಪ್ರಕಟಿಸುವ ನಿರೀಕ್ಷೆ ಇತ್ತು. ಹಾಗಾಲಿಲ್ಲ. ಈ 20 ದಿನಗಳ ಅಂತರ ಏಕೆ ಎಂಬುದನ್ನು ಸುಲಭವಾಗಿ ಊಹಿಸಬಹುದಿತ್ತು. ಆದರೂ ಇಂಡಿಯನ್ ಎಕ್ಸ್‌ಪ್ರೆಸ್ ನವಂಬರ್ 4 ರಂದು ಪ್ರಕಟಿಸಿರುವ ಒಂದು ವರದಿ ಈ ಬಗ್ಗೆ ಸಂದೇಹವನ್ನೂ ಉಳಿಸಿಲ್ಲ. ಎರಡೂ ರಾಜ್ಯಗಳಲ್ಲಿ ಮತಗಣನೆ ಡಿಸೆಂಬರ್ 8ರಂದೇ ನಡೆಯಲಿದೆ ಎಂಬುದೂ ಗಮನಾರ್ಹ.




ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್

ಈ 20 ದಿನಗಳಲ್ಲಿ 5 ದಿನ ಪ್ರಧಾನ ಮಂತ್ರಿಗಳು ಗುಜರಾತಿನಲ್ಲಿ ಮೊಕ್ಕಾಂ ಹೂಡಿದ್ದರು, ಕನಿಷ್ಟ 7000 ಕೋಟಿ ರೂ.ಗಳ, ರೈತರಿಂದ ಹಿಡಿದು ಗೃಹಿಣಿಯರು, ಹೋಮ್ ಗಾರ್ಡ್‌ಗಳ ವರೆಗೆ ವಿವಿಧ ಜನವಿಭಾಗಗಳಿಗೆ ಪರಿಹಾರ ಕೊಡುವ ಪ್ಯಾಕೇಜುಗಳನ್ನು ಉದ್ಘಾಟಿಸಿರವುದಾಗಿ ಈ ವರದಿ ಹೇಳುತ್ತದೆ. ಈ 20 ದಿನಗಳಲ್ಲಿ ಪ್ರಧಾನಿಗಳು, ಅಲ್ಲಿನ ಮುಖ್ಯಮಂತ್ರಿಗಳು ಹಾಗೂ ಗೃಹಮಂತ್ರಿಗಳು ಪ್ರಕಟಿಸಿದ ಕ್ರಮಗಳ ದಿನವಾರು ಪಟ್ಟಿಯನ್ನು ಈ ವರದಿ ಕೊಟ್ಟಿದೆ. ಇದರ ಪ್ರಕಾರ ಸುಮಾರು ಪ್ರತಿದಿನವೆಂಬಂತೆ ಒಂದಿಲ್ಲೊಂದು ಪ್ರಕಟಣೆ, ಉದ್ಘಾಟನೆಗಳ ಉತ್ಸವವೇ ನಡೆದಂತಿತ್ತು. ಚುನಾವಣಾ ಆಯೋಗದ ಪ್ರಕಟಣೆಯ ಕೆಲವೇ ಗಂಟೆಗಳ ಮೊದಲು ರಾಜ್ಯದ ಗೃಹಮಂತ್ರಿಗಳು ಹೋಮ್ ಗಾರ್ಡ್‌ಗಳು ಮತ್ತು ಗ್ರಾಮ ರಕ್ಷಕ ದಳದವರಿಗೆ ಮಾಸಿಕ ಗೌರವ ಧನವನ್ನು 300ರೂ. ನಿಂದ 450ರೂ. ಗಳ (50%?) ಏರಿಕೆಯನ್ನು ಪ್ರಕಟಿಸಿದರು.

ಇವೆಲ್ಲ ಪ್ರಧಾನ ಮಂತ್ರಿಗಳು ಬೇರೆ ರಾಜ್ಯಗಳಲ್ಲಿ ಲೇವಡಿ ಮಾಡುವ ರೆವ್ಡಿ ಅಲ್ಲ, ಬದಲಾಗಿ ಸಬಲೀಕರಣದ ಕ್ರಮಗಳು ಎಂದು ಆಳುವ ಪಕ್ಷಗಳ ಮುಖಂಡರು ಹೇಳುತ್ತಿದ್ದಾರಂತೆ.

ರಿಷಿ ಸುನಕ್‌ಗೆ ಪಟ್ಟ: ಹಣಕಾಸು ಸಾಮ್ರಾಜ್ಯದ ಆಯ್ಕೆ





1922ರ ಸಮಿತಿ

ರಿಷಿ ಸುನಕ್ ಅವರನ್ನು ಏಷ್ಯಾ ಮೂಲದ ಮೊದಲ ಬ್ರಿಟಿಷ್ ಪ್ರಧಾನ ಮಂತ್ರಿ, ಮೊದಲ ಹಿಂದೂ ಪ್ರಧಾನಿ, ಎಂದೆಲ್ಲ ಭಾರತದಲ್ಲಿ ಬಹಳಷ್ಟು ಗುಲ್ಲೆದ್ದುದರ ಹೊರತಾಗಿಯೂ, ಅವರ ಅಸ್ಮಿತೆಯ ಬಗ್ಗೆ ಹರಡಿದ ಸಂಗತಿಗಳು ಕ್ಷುಲ್ಲಕವೂ ಹೌದು; ಅಪ್ರಸ್ತುತವೂ ಹೌದು. ಮುಖ್ಯವಾದ ವಿಷಯವೆಂದರೆ, ಸುನಕ್ ಬ್ರಿಟಿಷ್ ಹಣಕಾಸು ಸಾಮ್ರಾಜ್ಯದ ಭದ್ರಕೋಟೆ ಲಂಡನ್ ನಗರದ ಆಯ್ಕೆ. ಈ ಲಂಡನ್ ನಗರ–ನಿರ್ದೇಶಿತ ಅದೃಶ್ಯ ರಾಜಕೀಯ ಪ್ರಕ್ರಿಯೆಯು ಲಿಜ್ ಟ್ರಸ್ ಅವರಿಗೆ ಬದಲಿಯಾಗಿ ರಿಷಿ ಸುನಕ್‌ರನ್ನು ಆಯ್ಕೆ ಮಾಡಿದ ಮುಖ್ಯ ಕಾರಣವೆಂದರೆ, ಅವರ ಅಜೆಂಡಾ. ಸುನಕ್ ಕಾರ್ಯಕ್ರಮವು ಹೆಚ್ಚಿನ ನಿರುದ್ಯೋಗದೊಂದಿಗೆ ಹಣಕಾಸು ಕುಳಗಳಿಗೆ ಲಾಭ ಮಾಡಿಕೊಡುವ ಸಾಧ್ಯತೆಯಿದೆ. ಇವೆರಡೂ ಕ್ರಮಗಳು ಲಂಡನ್ ನಗರದ ಬಯಕೆಗಳಿಗೆ ಅನುಗುಣವಾಗಿವೆ. ಇತ್ತ ಅವರು ಲಂಡನ್ ನಗರಕ್ಕೆ ಆಕರ್ಷಕವಾಗುವ ಅಂಶವೇ ದುಡಿಯುವ ವರ್ಗದ ಪಾಲಿಗೆ ದುಃಸ್ವಪ್ನವೂ ಆಗುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಬ್ರಿಟನ್ನಿನ ರಾಜಧಾನಿ ಲಂಡನ್ ನಗರದ ಮಧ್ಯಭಾಗದಲ್ಲಿರುವ ಲಿವರ್‌ಪೂಲ್ ಸ್ಟ್ರೀಟ್ ರೈಲು ನಿಲ್ದಾಣದಿಂದ ಹಿಡಿದು ಒಂದು ಚದರ ಕಿಲೋಮೀಟರ್ ಸುತ್ತಳತೆಯ ಪ್ರದೇಶದಲ್ಲಿ ನೆಲೆಸಿರುವ ಬ್ರಿಟಿಷ್ ಹಣಕಾಸು ಸಾಮ್ರಾಜ್ಯದ ಭದ್ರಕೋಟೆಯ ಲಂಡನ್ ನಗರದ ವಿಜಯವು ಸಂಪನ್ನಗೊಂಡಿದೆ. ತನ್ನೊಂದಿಗೆ ವಿಶ್ವಾಸ ಕೆಡಿಸಿಕೊಂಡ ಬ್ರಿಟಿಷ್ ಪ್ರಧಾನ ಮಂತ್ರಿಯನ್ನು ಕೇವಲ 44 ದಿನಗಳಲ್ಲಿ ಹೇಳ ಹೆಸರಿಲ್ಲದಂತೆ ಮಾಡಿದ್ದು ಮಾತ್ರವಲ್ಲ, ಮರುಗಳಿಗೆಯಲ್ಲೇ ತನ್ನ ಆಯ್ಕೆಯ ಒಬ್ಬ ವ್ಯಕ್ತಿಯನ್ನು ಬ್ರಿಟನ್ನಿನ ನೂತನ ಪ್ರಧಾನ ಮಂತ್ರಿಯಾಗಿ ಪ್ರತಿಷ್ಠಾಪಿಸಿತು, ಲಂಡನ್. ರಿಷಿ ಸುನಕ್ ಅವರನ್ನು ಏಷ್ಯಾ ಮೂಲದ ಮೊದಲ ಬ್ರಿಟಿಷ್ ಪ್ರಧಾನ ಮಂತ್ರಿ, ಮೊದಲ ಹಿಂದೂ ಪ್ರಧಾನಿ, ಹೀಗೆ ಅನೇಕ ರೀತಿಯಲ್ಲಿ ಗುರುತಿಸಲಾಗುತ್ತಿದೆ. ಅವರ ನೇಮಕದ ಬಗ್ಗೆ ಭಾರತದಲ್ಲಿ ಬಹಳಷ್ಟು ಗುಲ್ಲೆದ್ದುದರ ಹೊರತಾಗಿಯೂ, ಅವರ ಅಸ್ಮಿತೆಯ ಬಗ್ಗೆ ಹರಡಿದ ಸಂಗತಿಗಳು ಕ್ಷುಲ್ಲಕವೂ ಹೌದು; ಅಪ್ರಸ್ತುತವೂ ಹೌದು. ಮುಖ್ಯವಾದ ವಿಷಯವೆಂದರೆ, ರಿಷಿ ಸುನಕ್ ಲಂಡನ್ ನಗರದ ಆಯ್ಕೆ ಎಂಬುದು. ಗೋಲ್ಡ್‌ಮನ್ ಸ್ಯಾಕ್ಸ್ ಸಂಸ್ಥೆಯ ಮಾಜಿ ಉದ್ಯೋಗಿಯಾಗಿದ್ದ, ಹೆಜ್ ಫಂಡ್ ಒಂದರ ಮಾಜಿ ಮ್ಯಾನೇಜರ್ ಆಗಿದ್ದ ರಿಷಿ ಸುನಕ್ ಹಣಕಾಸು ಜಗತ್ತಿನ ಹಿನ್ನೆಲೆಯಿಂದ ಬಂದವರೇ. ನಿಸ್ಸಂಶಯವಾಗಿಯೂ ಸುನಕ್ ಅವರನ್ನು "ನಮ್ಮಲ್ಲೇ ಒಬ್ಬರು" ಎಂದು ಲಂಡನ್ ನಗರ ಭಾವಿಸುತ್ತದೆ.

ತನ್ನ ನಿಗೂಢ ಕಾರ್ಯ ವಿಧಾನಗಳ ಮೂಲಕ ಬ್ರಿಟಿಷ್ ರಾಜಕಾರಣವನ್ನು ನಿಯಂತ್ರಿಸುವ ಪರಿಣಾಮವುಳ್ಳ ಒಂದು ಪರಿಪೂರ್ಣ ಸಾಧನವನ್ನು ಕನ್ಸರ್ವೇಟಿವ್ ಪಕ್ಷವು ಲಂಡನ್ ನಗರದ ಕೈಯಲ್ಲಿಟ್ಟಿದೆ. ಈ ಲಂಡನ್ ನಗರದ ಅಣತಿಯ ಮೇರೆಗೆ ಮಾರ್ಗರೆಟ್ ಥ್ಯಾಚರ್ ಅವರನ್ನು ತಮ್ಮ ಇಚ್ಛೆಗೆ ವಿರುದ್ಧವಾಗಿ ರಾಜೀನಾಮೆ ನೀಡುವಂತೆ ಮಾಡಿದಾಗ, ಅವರು ಬಹಳವಾಗಿ ಗೋಳಾಡಿದ್ದರು: "ಸಾರ್ವತ್ರಿಕ ಚುನಾವಣೆಯಲ್ಲಿ ನಾನು ಯಾವತ್ತೂ ಸೋತಿಲ್ಲ; ಹೌಸ್ ಆಫ್ ಕಾಮನ್ಸ್‌ನಲ್ಲಿ ವಿಶ್ವಾಸಮತವನ್ನು ನಾನು ಯಾವತ್ತೂ ಕಳೆದುಕೊಂಡಿರಲಿಲ್ಲ; ಕನ್ಸರ್ವೇಟಿವ್ ಪಕ್ಷದೊಳಗಿನ ಬಹುಮತದ ಬೆಂಬಲವನ್ನು ನಾನು ಯಾವತ್ತೂ ಕಳೆದುಕೊಂಡಿರಲಿಲ್ಲ; ಆದರೂ ನಾನು ಅಧಿಕಾರದಿಂದ ಹೊರಗಿದ್ದೇನೆ". ಲಿಜ್ ಟ್ರಸ್ ಕೂಡ ಅಧಿಕಾರ ಕಳೆದುಕೊಂಡ ತಮ್ಮ ನೋವನ್ನು ಇದೇ ರೀತಿಯಲ್ಲಿ ಹೊರಹಾಕಬಹುದು. ಅವರು ಒಮ್ಮೆ ಗಟ್ಟಿಯಾಗಿ "ನಾನು ಒಬ್ಬಳು ಹೋರಾಟಗಾರ್ತಿ, ರಣಹೇಡಿಯಲ್ಲ" ಎಂದು ನಿಜಕ್ಕೂ ಹೇಳಿದ್ದರು. ಮರುದಿನವೇ ನಿಗೂಢವಾಗಿ ಅಧಿಕಾರದಿಂದ ಹೊರಹಾಕಲ್ಪಟ್ಟರು. ಕನ್ಸರ್ವೇಟಿವ್ ಪಕ್ಷದೊಳಗೆ, ಮುಖ್ಯವಾದ ಹುದ್ದೆಗೆ ನಾಯಕನನ್ನು ಚುನಾಯಿಸುವ ಮತ್ತು ಮುಂದುವರಿಸುವ ಬಗ್ಗೆ ನಿರ್ಣಾಯಕ ಅಭಿಪ್ರಾಯವನ್ನು ವ್ಯಕ್ತಪಡಿಸುವ ಒಂದು ಮಸುಕಾದ ಮತ್ತು ಗುಪ್ತವಾಗಿ ಕೆಲಸಮಾಡುವ '1922ರ ಸಮಿತಿ' ಎಂದು ಕರೆಯಲ್ಪಡುವ ಒಂದು ಅಂಗವಿದೆ. ಲಂಡನ್ ನಗರವು ಮಂತ್ರಿಗಳ ಮೂಲಕ ಕಾರ್ಯನಿರ್ವಹಿಸುತ್ತದೆ ಮಾತ್ರವಲ್ಲ, ನಗರದೊಂದಿಗೆ ಸಂಪರ್ಕ ಹೊಂದಿರುವವರು ಅಥವಾ ತಮ್ಮ ನಿವೃತ್ತಿಯ ಬಳಿಕ ನಗರದ ಉದ್ಯೋಗಗಳಿಗೆ ಮಣೆ ಹಾಕುವ ಮಂತ್ರಿ–ಸಿಬ್ಬಂದಿಗಳ ಮೂಲಕ ಮಾತ್ರವಲ್ಲ, 1922ರ ಸಮಿತಿಯ ಮೂಲಕ ತಮ್ಮ ಇರುವಿಕೆಯನ್ನು ಗಣನೆಗೆ ತೆಗೆದುಕೊಳ್ಳುವಂತೆ ಮಾಡುವ ಹಿಮ್ಮೇಳದವರ ಮೂಲಕವೂ ಕಾರ್ಯನಿರ್ವಹಿಸುತ್ತದೆ. ನಗರಕ್ಕೆ ಸೇರಿದ ಹಣಕಾಸು ಕುಳಗಳು ಮಾಧ್ಯಮಗಳ ಮೇಲೆ ನಿಯಂತ್ರಣ ಹೊಂದಿರುವುದರಿಂದ ಮತ್ತು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲು ಅವರನ್ನು ಅವಲಂಬಿಸಬಹುದಾದ ಕಾರಣದಿಂದಾಗಿ, ವಾಸ್ತವವಾಗಿ, ಒಂದು ನಗರ–ನಿರ್ದೇಶಿತ ಅದೃಶ್ಯ ರಾಜಕೀಯ ಪ್ರಕ್ರಿಯೆಯು ಕಾರ್ಯಪ್ರವೃತ್ತವಾಗಿರುತ್ತದೆ. ಈ ಪ್ರಕ್ರಿಯೆಯು, ಪ್ರತ್ಯಕ್ಷ ಔಪಚಾರಿಕ ಸರ್ವಜನ ರಾಜಕೀಯ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುತ್ತದೆ ಮತ್ತು ಅದಕ್ಕೆ ಸರಿ ಸಮಾನವಾಗಿಯೂ ಇದೆ.



(ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್)

ಲಂಡನ್ ಏನು ಬಯಸುತ್ತದೆ?

ಈ ನಗರ–ನಿರ್ದೇಶಿತ ಅದೃಶ್ಯ ರಾಜಕೀಯ ಪ್ರಕ್ರಿಯೆಯು ಲಿಜ್ ಟ್ರಸ್ ಅವರಿಗೆ ಬದಲಿಯಾಗಿ ರಿಷಿ ಸುನಕ್ ಅವರನ್ನು ಆಯ್ಕೆ ಮಾಡಿದ ಕಾರಣವೆಂದರೆ, ಸುನಕ್ ಅವರ ಹಣಕಾಸು ಜಗತ್ತಿನ ಹಿನ್ನೆಲೆ ಮತ್ತು ಅವರು ಭಾರೀ ಶ್ರೀಮಂತರಾಗಿರುವುದು ಮಾತ್ರ ಕಾರಣವಲ್ಲ. ಎಲ್ಲಕ್ಕಿಂತ ಹೆಚ್ಚು ಮುಖ್ಯವಾದ ಕಾರಣವೆಂದರೆ, ಸುನಕ್ ಅವರ ಕಾರ್ಯಸೂಚಿಯೇ. ಲಿಜ್ ಟ್ರಸ್ ಅವರು ಬಂಡವಾಳಗಾರರಿಗೆ ನೀಡಿದ ತೆರಿಗೆ–ಕಡಿತಗಳಿಗೆ ವಿತ್ತೀಯ ಕೊರತೆಯ ಮೂಲಕ ಹಣಕಾಸು ಒದಗಿಸಿಕೊಳ್ಳುವ ಉದ್ದೇಶ ಹೊಂದಿದ್ದರೆ, ಬಂಡವಾಳಗಾರರಿಗೆ ಸುನಕ್ ನೀಡಲಿರುವ ತೆರಿಗೆ–ಕಡಿತಗಳಿಗೆ ಬೇಕಾಗುವ ಹಣವನ್ನು ಬೇರೆ ಬೇರೆ ಸರ್ಕಾರಿ ವೆಚ್ಚಗಳ ಕಡಿತದ ಮೂಲಕ ಅಥವಾ, ಕಾರ್ಮಿಕರ ಮೇಲೆ ತೆರಿಗೆ ಹೇರುವ ಮೂಲಕ (ಈ ಆಯ್ಕೆಯು ಪ್ರಸ್ತುತದಲ್ಲಿ ಕಾರ್ಯಸಾಧ್ಯವಲ್ಲ) ಹೊಂದಿಸಿಕೊಂಡು ವಿತ್ತೀಯ ಕೊರತೆಯನ್ನು ನಿಯಂತ್ರಣದಲ್ಲಿಡುತ್ತಾರೆ. ಈಗ ಉದ್ಭವವಾಗುವ ಪ್ರಶ್ನೆ ಎಂದರೆ, ವಿತ್ತೀಯ ಕೊರತೆಯಿಲ್ಲದ ತೆರಿಗೆ–ಕಡಿತದ ಬದಲಾಗಿ ವಿತ್ತೀಯ ಕೊರತೆಯೊಂದಿಗಿನ ತೆರಿಗೆ–ಕಡಿತದ ಆದ್ಯತೆಯನ್ನು ಲಂಡನ್ ಏಕೆ ಬಯಸುತ್ತದೆ?

ಈ ಪ್ರಶ್ನೆಗೆ ತತ್‌ಕ್ಷಣದ ಮತ್ತು ಯಾವುದೇ ರೀತಿಯಲ್ಲಿ ಅಮಾನ್ಯವಲ್ಲದ ಉತ್ತರವೆಂದರೆ ಹಣಕಾಸು ಬಂಡವಾಳವು ವಿತ್ತೀಯ ಕೊರತೆಗಳಿಗೆ ಯಾವತ್ತೂ ವಿರುದ್ಧವೇ. ಆದ್ದರಿಂದಲೇ, ಹಣಕಾಸು ಬಂಡವಾಳದ ಜಾಗತೀಕರಣದ ಯುಗದಲ್ಲಿ, ವಿಶಿಷ್ಟ ಸ್ಥಾನಮಾನವನ್ನು ಹೊಂದಿರುವ ಯುಎಸ್ ಅನ್ನು ಹೊರತುಪಡಿಸಿದರೆ, ವಿಶ್ವದ ಬಹುತೇಕ ದೇಶಗಳು ವಿತ್ತೀಯ ಕೊರತೆಯನ್ನು ಜಿಡಿಪಿಯ ಒಂದು ನಿರ್ದಿಷ್ಟ ಅನುಪಾತಕ್ಕೆ ಮಿತಿಗೊಳಿಸುವ ಶಾಸನಗಳನ್ನು ಹೊಂದಿವೆ. ಬ್ರಿಟನ್ ಎದುರಿಸುತ್ತಿರುವ ಹಣದುಬ್ಬರದ ಪ್ರಸ್ತುತ ಪರಿಸ್ಥಿತಿಯಲ್ಲಿ ವಿತ್ತೀಯ ಕೊರತೆಯ ಮೇಲಿನ ವಿರೋಧವು ಹೆಚ್ಚು ಬಲಪಡೆಯುತ್ತದೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಹಣದುಬ್ಬರದ ದಿನಗಳಲ್ಲಿ ವಿತ್ತೀಯ ಕೊರತೆಯನ್ನು ಹೆಚ್ಚಿಸುವುದರಿಂದ ಒಟ್ಟಾರೆ ಬೇಡಿಕೆ ಹೆಚ್ಚುತ್ತದೆ ಮತ್ತು ಉದ್ಯೋಗಗಳೂ ಹೆಚ್ಚುತ್ತವೆ. ಬಂಡವಾಳಶಾಹಿಯ ಈ ಪರಿಸ್ಥಿತಿಗಳಲ್ಲಿ ಬಲಗೊಳ್ಳುವ ಕಾರ್ಮಿಕರ ಪ್ರತಿರೋಧವು ಹಣದುಬ್ಬರವನ್ನು ಉಲ್ಬಣಗೊಳಿಸುತ್ತದೆ. ಹಣದುಬ್ಬರದ ಸಮಯದಲ್ಲಿ ಹಣಕಾಸು ಸ್ವತ್ತುಗಳ ನಿಜ ಮೌಲ್ಯವು ಕುಸಿಯುವ ಕಾರಣದಿಂದಾಗಿ ಚಿಂತೆಗೊಳಗಾದ ಹಣಕಾಸು ಬಂಡವಾಳವು ವಿತ್ತೀಯ ಕೊರತೆಯನ್ನು ಬಲವಾಗಿ ವಿರೋಧಿಸುತ್ತದೆ. ಆದರೆ, ಹೆಚ್ಚುತ್ತಿರುವ ವಿತ್ತೀಯ ಕೊರತೆಯು ತೆರಿಗೆ–ನಂತರದ ಲಾಭಗಳನ್ನು ವರ್ಧಿಸುವ ಒಂದು ಪ್ರಮುಖ ಸಾಧನವಾಗಿದೆ ಎಂಬ ಅಂಶದ ಬಗ್ಗೆ ಹೇಳುವುದೇನು? ಹಣದುಬ್ಬರವನ್ನು ವಿರೋಧಿಸುವವರು ಈ ಅಂಶವನ್ನೂ ಪ್ರತಿರೋಧಿಸಬೇಕಲ್ಲವೇ?

ವಿದೇಶ ವ್ಯಾಪಾರ–ವಹಿವಾಟುಗಳು ಮತ್ತು ಕಾರ್ಮಿಕರ ಉಳಿತಾಯದ ಅಂಶಗಳನ್ನು ಒಂದು ವೇಳೆ ಗಣನೆಗೆ ತೆಗೆದುಕೊಳ್ಳದಿದ್ದರೂ (ಸರಳತೆಗಾಗಿ), ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ತೆರಿಗೆಯ ನಂತರದ ಲಾಭಗಳು, ಬಂಡವಾಳಶಾಹಿಗಳ ಬಳಕೆ+ಅವರ ಹೂಡಿಕೆ+ವಿತ್ತೀಯ ಕೊರತೆ, ಇವುಗಳ ಮೊತ್ತಕ್ಕೆ ಸಮನಾಗಿರುತ್ತವೆ ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ (ಜನಶಕ್ತಿ, ಸಂಚಿಕೆ 46, ನವೆಂಬರ್ 7–13). ಹೂಡಿಕೆ ಮತ್ತು ಬಂಡವಾಳಗಾರರ ಬಳಕೆಯು ಇಂದಿನ ಲಾಭಗಳಿಗೆ ತಕ್ಷಣವೇ ಸ್ಪಂದಿಸುವುದಿಲ್ಲವಾದ್ದರಿಂದ, ಈ ರಿಯಾಯಿತಿಗಳಿಗಾಗಿ ಬೇಕಾಗುವ ಹಣವನ್ನು ಬೃಹತ್ ವಿತ್ತೀಯ ಕೊರತೆಯ ಮೂಲಕ ಒದಗಿಸಿಕೊಳ್ಳದ ಹೊರತು, ಬಂಡವಾಳಗಾರರಿಗೆ ನೀಡುವ ತೆರಿಗೆ ರಿಯಾಯಿತಿಗಳ ಮೊತ್ತವು ಎಷ್ಟೇ ದೊಡ್ಡದಿರಲಿ, ತೆರಿಗೆ–ನಂತರದ ಲಾಭಗಳು ಈ ಅವಧಿಯಲ್ಲಿ ಹೆಚ್ಚಾಗುವುದಿಲ್ಲ. ಇದನ್ನೇ ಬೇರೆ ರೀತಿಯಲ್ಲಿಹೇಳುವುದಾದರೆ,ಬಂಡವಾಳಶಾಹಿಗಳಿಗೆ ನೀಡುವ ತೆರಿಗೆ ರಿಯಾಯಿತಿಗಳು ಎಷ್ಟೇ ದೊಡ್ಡದಿರಲಿ, ಈ ತೆರಿಗೆ ರಿಯಾಯಿತಿಗಳಿಗೆ ಬೇಕಾಗುವ ಹಣವನ್ನು ಸಾರ್ವಜನಿಕ ವೆಚ್ಚಗಳ ಕಡಿತದ ಮೂಲಕ ಹೊಂದಿಸಿಕೊಂಡರೆ, ತೆರಿಗೆ–ನಂತರದ ಲಾಭದಲ್ಲಿ ಹೆಚ್ಚಳ ಇರುವುದಿಲ್ಲ.

ಈ ಪ್ರತಿಪಾದನೆಯು ಒಟ್ಟಾರೆ ಲಾಭಗಳಿಗೆ ಅನ್ವಯವಾಗುತ್ತದೆ. ಈ ತೆರಿಗೆ ರಿಯಾಯ್ತಿಗಳನ್ನು ಯಾರಿಗೆ ನೀಡಲಾಗುತ್ತಿದೆ ಮತ್ತು ಸಾರ್ವಜನಿಕ ವೆಚ್ಚ ಕಡಿತದಿಂದಾಗಿ ಯಾರ ತೆರಿಗೆ–ಪೂರ್ವ ಲಾಭಗಳು ಕುಗ್ಗುತ್ತಿವೆ ಎಂಬುದರ ಆಧಾರದ ಮೇಲೆ ಬಂಡವಾಳಗಾರರ ನಡುವೆ ಹಂಚಿಕೆಯಾಗುವ ತೆರಿಗೆ–ನಂತರ ಲಾಭಗಳು ಬದಲಾಗಬಹುದು. ತೆರಿಗೆ ರಿಯಾಯಿತಿಗಳನ್ನು ಸಾಮಾನ್ಯವಾಗಿ ದೊಡ್ಡ ಬಂಡವಾಳಗಾರರಿಗೆ ನೀಡುವುದರಿಂದ (ಉನ್ನತ ದರದ ತೆರಿಗೆ ಕೊಡುವವರಿಗೆ ತೆರಿಗೆಯ ದರವನ್ನು ಇಳಿಕೆ ಮಾಡಲಾಗುತ್ತದೆ), ಸಾರ್ವಜನಿಕ ವೆಚ್ಚಗಳ ಕಡಿತವು ಚಟುವಟಿಕೆಗಳ ಮಟ್ಟವನ್ನು ತಗ್ಗಿಸುವುದರಿಂದ ಎಲ್ಲರ ಲಾಭಗಳೂ ತಗ್ಗುತ್ತವೆ. ಈ ಎರಡೂ ಕ್ರಮಗಳು ಒಟ್ಟಾಗಿ ವಿತ್ತೀಯ ಕೊರತೆಯನ್ನು ಬದಲಾಯಿಸದಿದ್ದರೆ, ಒಂದು ನಿರ್ದಿಷ್ಟ ಮೊತ್ತದ ಒಟ್ಟು ಲಾಭವು ಸಣ್ಣ ಪುಟ್ಟ ಬಂಡವಾಳಗಾರರಿಂದ ದೊಡ್ಡ ಬಂಡವಾಳಗಾರರಿಗೆ ವರ್ಗಾವಣೆಯಾಗುವಲ್ಲಿ ಪರಿಣಮಿಸುತ್ತವೆ.

ಪುಟ 14 ಕ್ಕೆ

ರಿಷಿ ಸುನಕ್‌ಗೆ ಪಟ್ಟ: ಹಣಕಾಸು ಸಾಮ್ರಾಜ್ಯದ ಆಯ್ಕೆ....

ಪುಟ 2 ರಿಂದ

ಸಂಕ್ಷಿಪ್ತವಾಗಿ ಹೇಳುವುದಾದರೆ, ಸಾರ್ವಜನಿಕ ವೆಚ್ಚಗಳ ಕಡಿತದ ಮೂಲಕವಾಗಿಯಾಗಲಿ ಅಥವಾ ವಿತ್ತೀಯ ಕೊರತೆಯ ಮೂಲಕವಾಗಿಯಾಗಲಿ ಒದಗಿಸಿಕೊಂಡ ಹಣದಿಂದ ಕೊಡುವ ತೆರಿಗೆ ರಿಯಾಯಿತಿಗಳು, ಅನಿವಾರ್ಯವಾಗಿ ದೊಡ್ಡ ಬಂಡವಾಳಗಾರರ ಲಾಭದ ಪ್ರಮಾಣವನ್ನು ಏರಿಸುತ್ತವೆ (ದೊಡ್ಡವರ ಏರಿಕೆಯು ಸಹಜವಾಗಿ ದೊಡ್ಡದಾಗೇ ಇರುತ್ತದೆ).

ಏಕೆ ಬಯಸುತ್ತದೆ?

ವಿತ್ತೀಯ ಕೊರತೆಯ ಮೂಲಕ ಹಣ ಒದಗಿಸಿಕೊಳ್ಳುವುದರ ಬದಲಾಗಿ, ಬೇರೆ ಬೇರೆ ಸಾರ್ವಜನಿಕ ವೆಚ್ಚಗಳನ್ನು ಕಡಿತಗೊಳಿಸುವ ಮೂಲಕ ಒದಗಿಸಿಕೊಂಡ ಹಣದಿಂದ ಬಂಡವಾಳಗಾರರಿಗೆ ತೆರಿಗೆ ರಿಯಾಯಿತಿ ಕೊಡುವ ಕ್ರಮವನ್ನೇ ಹಣಕಾಸು ಬಂಡವಾಳವು ಏಕೆ ಬಯಸುತ್ತದೆ ಎಂಬುದಕ್ಕೆ ಕನಿಷ್ಠ ಮೂರು ವಿಭಿನ್ನ ಕಾರಣಗಳಿವೆ. ಮೊದಲನೆಯದಾಗಿ, ಸಾರ್ವಜನಿಕ ವೆಚ್ಚಗಳ ಕಡಿತದ ಮೂಲಕ ಹಣ ಒದಗಿಸಿಕೊಂಡ ಪ್ರಕರಣದಲ್ಲಿ ನಿರುದ್ಯೋಗವು ಅನಿವಾರ್ಯವಾಗಿ ಹೆಚ್ಚುತ್ತದೆ. ವಿತ್ತೀಯ ಕೊರತೆಯ ಮೂಲಕ ಹಣ ಒದಗಿಸಿಕೊಂಡ ಪ್ರಕರಣದಲ್ಲಿ ನಿರುದ್ಯೋಗ ಇಳಿಕೆಯಾಗುತ್ತದೆ. ಹೀಗಾಗುತ್ತದೆ, ಏಕೆಂದರೆ, ಸಾರ್ವಜನಿಕ ವೆಚ್ಚಗಳಲ್ಲಿ 100ರೂ.ಗಳ ಕಡಿತವು ತಕ್ಷಣವೇ ರೂ.100ರಷ್ಟು ಒಟ್ಟಾರೆ ಬೇಡಿಕೆಯನ್ನು ಇಳಿಕೆ ಮಾಡುತ್ತದೆ. ಆದರೆ, ಬಂಡವಾಳಗಾರರಿಗೆ ನೀಡುವ ತೆರಿಗೆ–ಕಡಿತಗಳು ಒಟ್ಟಾರೆ ಬೇಡಿಕೆಯನ್ನು ಸ್ವಲ್ಪ ಹೆಚ್ಚಿಸಬಹುದು. ಏಕೆಂದರೆ, ತೆರಿಗೆ–ಕಡಿತಗಳ ಮೂಲಕ ಬಂದ ಹಣವನ್ನು ಬಂಡವಾಳಗಾರರು ಉಳಿತಾಯ ಮಾಡುತ್ತಾರೆ. ಆದ್ದರಿಂದ, ಒಟ್ಟು ಬೇಡಿಕೆಯಲ್ಲಿ ನಿವ್ವಳ ಇಳಿಕೆ ಕಂಡುಬರುತ್ತದೆ ಮತ್ತು ಅದರಿಂದಾಗಿ ಉತ್ಪಾದನೆ ಮತ್ತು ಉದ್ಯೋಗಗಳೂ ಇಳಿಯುತ್ತವೆ. ಮತ್ತು, ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯು ಅವಶ್ಯವಾಗಿ ಹೆಚ್ಚು ಹೆಚ್ಚು ನಿರುದ್ಯೋಗವನ್ನು ಸೃಷ್ಟಿಸುವ ಮೂಲಕ ಮಾತ್ರವೇ ಹಣದುಬ್ಬರವನ್ನು ನಿಭಾಯಿಸುವುದರಿಂದ, ಹಣಕಾಸು ಬಂಡವಾಳವು, ವಿಶೇಷವಾಗಿ, ಹಣದುಬ್ಬರದ ಸಮಯದಲ್ಲಿ ಸಾರ್ವಜನಿಕ ವೆಚ್ಚಗಳನ್ನು ಕಡಿತಗೊಳಿಸಿ ಒದಗಿಸಿಕೊಂಡ ಹಣದಿಂದ ಬಂಡವಾಳಗಾರರಿಗೆ ತೆರಿಗೆ ರಿಯಾಯಿತಿ ಕೊಡಲು ಆದ್ಯತೆ ನೀಡುತ್ತದೆ.

ಎರಡನೆಯದಾಗಿ, ಬಂಡವಾಳಗಾರರಿಗೆ ಕೊಡುವ ತೆರಿಗೆ ರಿಯಾಯ್ತಿಗಳಿಗೆ ಬೇಕಾಗುವ ಹಣವನ್ನು ಸಾರ್ವಜನಿಕ ವೆಚ್ಚಗಳ ಕಡಿತದ ಮೂಲಕ ಒದಗಿಸಿಕೊಂಡಿದ್ದರೂ ಸಹ, ಮತ್ತು ಅವರ ಒಟ್ಟು ತೆರಿಗೆ–ನಂತರದ ಲಾಭಗಳನ್ನು ಬದಲಾಯಿಸದೆ ಬಿಟ್ಟರೂ ಸಹ, ದೊಡ್ಡ ದೊಡ್ಡ ಬಂಡವಾಳಗಾರರ ಅಥವಾ ಹಣಕಾಸು ಕುಳಗಳ ತೆರಿಗೆ–ನಂತರದ ಲಾಭಗಳು ಹೆಚ್ಚುತ್ತವೆ ಎಂಬುದನ್ನು ನಾವು ಕಂಡಿದ್ದೇವೆ. ಮೂರನೆಯದಾಗಿ, ಈ ಎರಡೂ ಪರಿಗಣನೆಗಳು, ಅಂದರೆ ಬೃಹತ್ ನಿರುದ್ಯೋಗ ಮತ್ತು ಹಣಕಾಸು ಕುಳಗಳ ತೆರಿಗೆಯ ನಂತರದ ಬೃಹತ್ ಲಾಭಗಳು, ವಿಶ್ವದ ಇತರ ಭಾಗಗಳಿಂದ ಹಣಕಾಸು ಬಂಡವಾಳವನ್ನು ಆಕರ್ಷಿಸುವ ಪರಿಣಾಮ ಹೊಂದಿವೆ ಮತ್ತು ಅದರಿಂದಾಗಿ ದೇಶದೊಳಗೆ ಸಂಭವಿಸುವ ಒಟ್ಟು ಹಣಕಾಸು ವ್ಯವಹಾರಗಳು ಹೆಚ್ಚುತ್ತವೆ.

ದುಡಿಮೆಗಾರರಿಗೆ ದುಃಸ್ವಪ್ನ

ರಿಷಿ ಸುನಕ್ ತಮ್ಮ ಒಟ್ಟು ನೀತಿಯ ಪ್ಯಾಕೇಜ್‌ಅನ್ನು ಇನ್ನೂ ಬಹಿರಂಗಪಡಿಸಿಲ್ಲ. ವಿತ್ತೀಯ ನೀತಿನಿಷ್ಠೆಗೆ ಅವರು ಖಂಡಿತವಾಗಿಯೂ ಬದ್ಧರೇ. ಆದರೆ, ಎಷ್ಟು ತೆರಿಗೆ ರಿಯಾಯಿತಿಗಳನ್ನು ನೀಡಲಿದ್ದಾರೆ ಎಂಬುದು ಇನ್ನೂ ಸ್ಪಷ್ಟವಿಲ್ಲ. ಬಂಡವಾಳಗಾರರಿಗೆ ಕೆಲವು ರಿಯಾಯಿತಿಗಳನ್ನು ನೀಡಲು ಅವರು ಬದ್ಧರಾಗಿರುತ್ತಾರೆ ಎಂಬುದಂತೂ ಶತಃಸಿದ್ಧ. ಏಕೆಂದರೆ, ಬಂಡವಾಳಶಾಹಿಯ ಬೆಳವಣಿಗೆಯು ಅಂತಹ ರಿಯಾಯಿತಿಗಳ ಮೇಲೆ ಅವಲಂಬಿತವಾಗಿದೆ ಎಂಬುದನ್ನು ವ್ಯವಸ್ಥೆಯ ಪುರಾಣ ಸಾಹಿತ್ಯವೇ ಹೇಳುತ್ತದೆ. ಆದ್ದರಿಂದ, ಸುನಕ್ ಕಾರ್ಯಕ್ರಮವು ಹೆಚ್ಚಿನ ನಿರುದ್ಯೋಗದೊಂದಿಗೆ ಹಣಕಾಸು ಕುಳಗಳಿಗೆ ಲಾಭ ಮಾಡಿಕೊಡುವ ಸಾಧ್ಯತೆಯಿದೆ. ಇವೆರಡೂ ಕ್ರಮಗಳು (ನಿರುದ್ಯೋಗ ಮತ್ತು ಹಣಕಾಸು ಕುಳಗಳ ಲಾಭ) ಲಂಡನ್ ನಗರದ ಬಯಕೆಗಳಿಗೆ ಅನುಗುಣವಾಗಿವೆ. ಬ್ರಿಟಿಷ್ ಕಾರ್ಮಿಕ ವರ್ಗದ ಪಾಲಿಗೆ ಸುನಕ್, ಲಿಜ್ ಟ್ರಸ್‌ಗಿಂತಲೂ ಹೆಚ್ಚು ಅಪಾಯಕಾರಿಯೇ. ಅವರು ಲಂಡನ್ ನಗರಕ್ಕೆ ಆಕರ್ಷಕವಾಗುವ ಅಂಶವೇ ದುಡಿಯುವ ವರ್ಗದ ಪಾಲಿಗೆ ದುಃಸ್ವಪ್ನವೂ ಆಗುತ್ತದೆ.

ಸುನಕ್ ಅವರ ಕಾರ್ಯಸೂಚಿಯು ಹಣದುಬ್ಬರ–ವಿರೋಧಿಯಾಗಿರುವುದರಿಂದ ಮತ್ತು ಹಣದುಬ್ಬರವು ದುಡಿಯುವ ವರ್ಗವನ್ನು ನೋಯಿಸುವುದರಿಂದ, ಅವರ ಕಾರ್ಯಸೂಚಿಯನ್ನು ಕಾರ್ಮಿಕ ವರ್ಗ ವಿರೋಧಿ ಕಾರ್ಯಸೂಚಿ ಎಂದು ಕರೆಯಲಾಗದು. ಈ ರೀತಿಯ ಭಾವನೆಯು, ದುಡಿಯುವ ಜನರನ್ನು ತೊಂದರೆಗಳಿಗೆ ಸಿಲುಕಿಸಿ ಹಣದುಬ್ಬರವನ್ನು ನಿಯಂತ್ರಿಸುವುದೇ ಅವರ ಕಾರ್ಯಸೂಚಿಯ ತಿರುಳು ಎಂಬ ಅಂಶವನ್ನು ನಿರ್ಲಕ್ಷಿಸುತ್ತದೆ. ಬೆಲೆ ಹಣದುಬ್ಬರವನ್ನು ವೇತನಗಳ ಇಳಿಕೆಯ ಮೂಲಕ ನಿಯಂತ್ರಿಸಬಹುದು. ಹಣದುಬ್ಬರವನ್ನು ನಿಯಂತ್ರಿಸುವ ಈ ಎರಡು ಮಾರ್ಗಗಳಲ್ಲಿ ಯಾವುದನ್ನು ಅನುಸರಿಸಿದರೂ ತೊಂದರೆಗಳನ್ನು ಅನುಭವಿಸುವವರು ಕಾರ್ಮಿಕರೇ. ಆದರೆ, ಈ ವಿಧಾನದ ಮೂಲಕ ಹಣದುಬ್ಬರವನ್ನು ನಿಯಂತ್ರಿಸುವ ಕ್ರಮವು ಹಣಕಾಸು ಬಂಡವಾಳದ ದೃಷ್ಟಿಯಲ್ಲಿ ಹಣಕಾಸು ಸ್ವತ್ತುಗಳ ನಿಜ ಮೌಲ್ಯದ ಇಳಿಕೆಯನ್ನು ತಡೆಯುವ ಅನುಕೂಲವನ್ನು ಹೊಂದಿದೆ.

ಸಾರ್ವಜನಿಕ ವೆಚ್ಚಗಳ ಕಡಿತವು ನಿರುದ್ಯೋಗವನ್ನು ಸೃಷ್ಟಿಸುತ್ತದೆ ಎಂಬುದನ್ನು ಒತ್ತಿಹೇಳಲಾಗಿದೆ. ಬ್ರಿಟನ್ನಿನಲ್ಲಿ ಸಾರ್ವಜನಿಕ ವೆಚ್ಚಗಳ ಕಡಿತವು ನಿರುದ್ಯೋಗವನ್ನು ಸೃಷ್ಟಿಸುವುದು ಮಾತ್ರವಲ್ಲ, ಸಾರ್ವಜನಿಕ ಸೇವೆಗಳ ಸ್ಥಿತಿಗತಿಗಳ ಮೇಲೆ ಅಪಾರ ದುಷ್ಪರಿಣಾಮವನ್ನು ಬೀರುತ್ತದೆ ಮತ್ತು ಯುದ್ಧಾನಂತರದ ವರ್ಷಗಳಲ್ಲಿ ಪ್ರಭುತ್ವವು ಜಾರಿಗೊಳಿಸಿದ ಕಲ್ಯಾಣ ಕ್ರಮಗಳ ಪ್ರಯೋಜನಗಳನ್ನು ಗಣನೀಯವಾಗಿ ಇಳಿಕೆ ಮಾಡುತ್ತದೆ. ಬ್ರಿಟನ್ನಿನಲ್ಲಿ ಸಾರ್ವಜನಿಕ ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳು ಅಸಮರ್ಪಕ ಧನಸಹಾಯದ ಪರಿಣಾಮವಾಗಿ ಈಗಾಗಲೇ ತತ್ತರಿಸುತ್ತಿವೆ. ಇನ್ನೂ ಹೆಚ್ಚಿನ ಕಡಿತಗಳು ಈ ಸೇವೆಗಳನ್ನು ಅಂತ್ಯಾವಸ್ಥೆಗೆ ತಳ್ಳುತ್ತವೆ. ಸುನಕ್ ಸರ್ಕಾರದ ಅಂತಹ ಕಾರ್ಯಸೂಚಿಯನ್ನು ಜಾರಿಗೊಳಿಸಲು ಬ್ರಿಟಿಷ್ ಕಾರ್ಮಿಕ ವರ್ಗವು ಅನುಮತಿಸುತ್ತದೆಯೇ?

ಆರ್ಥಿಕವಾಗಿ ದುರ್ಬಲರಿಗೆ ಮೀಸಲಾತಿ ನೀತಿಯ ಬಗೆಗಿರುವ ಆತಂಕಗಳನ್ನು ಸರಕಾರ ಪರಿಶೀಲಿಸಬೇಕು –ಸಿಪಿಐ(ಎಂ) ಪೊಲಿಟ್‌ಬ್ಯುರೊ

ಆರ್ಥಿಕವಾಗಿ ದುರ್ಬಲವಾಗಿರುವ ವಿಭಾಗ(ಇಡಬ್ಲ್ಯುಎಸ್)ಗಳಿಗೆ ಮೀಸಲಾತಿ ಕುರಿತು ಸುಪ್ರೀಂ ಕೋರ್ಟ್‌ನ ವಿಭಜಿತ ತೀರ್ಪಿನ ಬಗ್ಗೆ ವ್ಯಾಪಕ ಕಳವಳ ವ್ಯಕ್ತಗೊಂಡಿದ್ದು ಸಿಪಿಐ(ಎಂ) ಕೂಡ ಅದನ್ನು ಹಂಚಿಕೊಳ್ಳುತ್ತದೆ ಎಂದು ಪಕ್ಷದ ಪೊಲಿಟ್‌ಬ್ಯುರೊ ಈ ಕುರಿತು ನೀಡಿರುವ ಹೇಳಿಕೆಯಲ್ಲಿ ತಿಳಿಸಿದೆ. ಸಿಪಿಐ(ಎಂ), ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಇಡಬ್ಲ್ಯುಎಸ್ ಗೆ ಮೀಸಲಾತಿಯನ್ನು ವಿರೋಧಿಸುವುದಿಲ್ಲ. ಆದರೆ ಸುಪ್ರೀಂ ಕೋರ್ಟ್‌ನ ಆದೇಶವು ಕೆಲವು ಪ್ರಮುಖ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ, ಅವನ್ನು ಪರಿಶೀಲಿಸಬೇಕಾಗಿದೆ ಎಂದು ಅದು ಹೇಳಿದೆ.

ಆರ್ಥಿಕವಾಗಿ ದುರ್ಬಲ ವಿಭಾಗಗಳನ್ನು ನಿರೂಪಿಸುವ ಮಾನದಂಡಗಳನ್ನು ಸಿಪಿಐ(ಎಂ) ಸದಾ ಪ್ರಶ್ನಿಸಿದೆ. ಇಡಬ್ಲ್ಯುಎಸ್ ಕೋಟಾಕ್ಕೆ ಮೀಸಲಾತಿಯನ್ನು ಪಡೆಯಲು 8ಲಕ್ಷ ರೂ.ಗಳಷ್ಟು ವಾರ್ಷಿಕ ಆದಾಯ ಮತ್ತು 5 ಎಕರೆ ಕೃಷಿ ಭೂಮಿ, ಅಧಿಸೂಚಿತ ಪುರಸಭೆಯಲ್ಲಿ 1000 ಚದರ ಅಡಿಗಳ ವಸತಿ ಫ್ಲಾಟ್ ಮತ್ತು 100 ಚದರ ಗಜಗಳ ವಸತಿ ನಿವೇಶನದ ಮಿತಿಯನ್ನು ನಿಗದಿಪಡಿಸಲಾಗಿದೆ. ಕನಿಷ್ಠ ವೇತನ ಮತ್ತು ತೆರಿಗೆ ಮುಕ್ತತೆಯ ಮಿತಿಯನ್ನು ಇದಕ್ಕಿಂತ ಬಹಳಷ್ಟು ಕೆಳಮಟ್ಟದಲ್ಲಿ ಇರಿಸಿದ್ದು, ಈ ಮಾನದಂಡಗಳು ನಿಜವಾಗಿಯೂ ಬಡವರು ಅಲ್ಲದ ಮತ್ತು ನಿರ್ಗತಿಕರಲ್ಲದ ದೊಡ್ಡ ಜನಸಂಖ್ಯೆ ಈ ಮೀಸಲಾತಿಯ ಪ್ರಯೋಜನಗಳನ್ನು ಪಡೆಯಲು ಅನುವು ಮಾಡಿಕೊಡುತ್ತವೆ. ಪರಿಣಾಮವಾಗಿ, ಇದು ಬಡವರಲ್ಲಿ ಬಡವರ ವಿರುದ್ಧ ತಾರತಮ್ಯ ಮಾಡುತ್ತದೆ. ಆದ್ದರಿಂದ, ಇಡಬ್ಲ್ಯುಎಸ್ ಮೀಸಲಾತಿಯ ತನ್ನ ನೀತಿಯಲ್ಲಿ ಈ ಆತಂಕವನ್ನು ಸರಕಾರ ಒಳಗೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಮಿಥ್ಯೆ 1–‘ಸಾವರ್ಕರ್ ಒಬ್ಬ ದಂತ ಕತೆಯಾದ ಸ್ವಾತಂತ್ರ್ಯ ಹೋರಾಟಗಾರ’

ಪುಟ 2 ರಿಂದ

ಕಾನ್ಪುರದಲ್ಲಿ ನಡೆದ ಕದನದಲ್ಲಿ ಅವರು ನಾನಾರೊಂದಿಗೆ ಭಾಗವಹಿಸಿದ್ದರು. ಆದರೆ ಜುಲೈ 12, 1857 ರಂದು ಅವರ ಅಧಿಪತ್ಯದ ಸೇನೆಯನ್ನು ಬ್ರಿಟಿಷರು ಭಾರತೀಯ ಹಸ್ತಕರ ಸಹಾಯದಿಂದ ಸೋಲಿಸಿದರು.

ಇದರಿಂದ ಎದೆಗುಂದದ ಮೌಲ್ವಿ ಲಿಯಾಕತ್ ಅಲಿಯವರು ಮೌಲ್ವಿ ಅಬ್ದುಲ್ ಕರೀಂ ಎಂಬ ಹೆಸರಿನಲ್ಲಿ ಭಾರತದಾದ್ಯಂತ ಪ್ರವಾಸ ಮಾಡಿ ಉಪನ್ಯಾಸಗಳನ್ನು ಮಾಡಿದರು ಹಾಗೂ ರೋಗಿಗಳಿಗೆ ಚಿಕಿತ್ಸೆ ನೀಡಿದರು. ಅವರು ಸಚಿನ್ನಿನ (ಈಗಿನ ಗುಜರಾತಿನ ಸೂರತ್‌ನ ಭಾಗ) ನವಾಬನಲ್ಲಿ ಆಶ್ರಯ ಪಡೆದರು. ಸುನ್ನಿ ಮುಸ್ಲಿಂ ದೊರೆಯ (ಎರಡನೇ ನವಾಬ್ ಇಬ್ರಾಹಿಂ ಮೊಹಮ್ಮದ್ ಯಾಕುತ್ ಖಾನ್) ಆತಿಥ್ಯದಲ್ಲಿರುವಾಗ ಅವರಿಂದ ಮೋಸಕ್ಕೊಳಗಾಗಿ, ಸಚಿನ್ನಿನಿಂದ ಕುಟುಂಬ ಸಹಿತ ಹೇಗೋ ತಪ್ಪಿಸಿಕೊಂಡು 1871ರ ವರೆಗೆ ಭೂಗತರಾಗಿದ್ದ ಲಿಯಾಕತ್ ಅಲಿಯವರನ್ನು ಬೊಂಬಾಯಿಯಲ್ಲಿ ಬಂಧಿಸಿದರು. ಬ್ರಿಟಿಷ್ ಸರ್ಕಾರವು ಅವರಿಗೆ ಜೀವಾವಧಿ ಶಿಕ್ಷೆ ನೀಡಿ ಅಂಡಮಾನ್ ದ್ವೀಪಕ್ಕೆ ರವಾನೆ ಮಾಡಿತು, ಅಕ್ಟೋಬರ್ 1872 ರಂದು ಅಲ್ಲಿಯ ಗೂಡು ಕೋಣೆಯಂತಹ ಜೈಲಿನಲ್ಲಿದ್ದರು, ಇಪ್ಪತ್ತು ವರ್ಷಗಳ ಕಾಲ ಅಲ್ಲಿ ಶಿಕ್ಷೆ ಅನುಭವಿಸಿದ ಲಿಯಾಕತ್ ಅಲಿ ಅವರು ಮೇ 17, 1892 ರಂದು ಮರಣ ಹೊಂದಿದರು. ಅವರು ಎಂದಿಗೂ ಬ್ರಿಟಿಷರಿಂದ ದಯಾಭಿಕ್ಷೆ ಬೇಡಲಿಲ್ಲ.

ಮೌಲ್ವಿ ಮೊಹಮ್ಮದ್ ಜಾಫರ್ ಥಾನೆಸ್ರಿ

ಮೊಹಮ್ಮದ್ ಜಾಫರ್ ಅವರು (ಈಗಿನ ಹರ್ಯಾಣಾದ) ಅಂಬಾಲಾದ ಬಳಿ ಇರುವ ಥಾನೇಸರ್‌ನ ಶ್ರೀಮಂತ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರು ಪ್ರಸಿದ್ಧ ವಹಾಬಿ ಮುಖಂಡರಾಗಿದ್ದರು. ಅವರನ್ನು ಬಂಧಿಸಲು ಸರ್ಕಾರವು ರೂ.10,000 ಬಹುಮಾನ ಘೋಷಿಸಿತ್ತು. ಅಲಿಘರ್‌ನಲ್ಲಿ ಬಂಧಿಸಿದ ನಂತರ ಮರಣ ಶಿಕ್ಷೆ ವಿಧಿಸಲಾಯಿತು, ನಂತರ ಅದನ್ನು ಅಂಡಮಾನಿನಲ್ಲಿ ಜೀವಾವಧಿ ಶಿಕ್ಷೆಯಾಗಿ ಮಾರ್ಪಡಿಸಲಾಯಿತು. ಜನವರಿ 11, 1866 ರಂದು ಅವರು ಇತರ ವಹಾಬಿ ಮುಖಂಡರೊಂದಿಗೆ ಜಮ್ನಾ ಹಡಗಿನಲ್ಲಿ ಅಂಡಮಾನಿಗೆ ಬಂದಿಳಿದಾಗ ಅವರ ವಯಸ್ಸು 27 ವರ್ಷವಾಗಿತ್ತು. 18 ವರ್ಷಗಳ ಕಾಲ ಅಲ್ಲಿದ್ದ ಅವರು ನವಂಬರ್ 9, 1883 ರಂದು ಬಿಡುಗಡೆಯಾದರು.

ಪರ್ಶಿಯನ್, ಉರ್ದು, ಹಿಂದಿ ಭಾಷೆಯಲ್ಲಿ ನಿಪುಣರಾಗಿದ್ದ ಅವರು ಜೈಲಿನಲ್ಲಿ ಸಹಖೈದಿಯಾಗಿದ್ದ ರಾಮ್ ಸರೂಪ್ ಅವರಿಂದ ಇಂಗ್ಲಿಷ್ ಭಾಷೆಯನ್ನು ಕಲಿತರು. ಅಂಡಮಾನಿನಲ್ಲಿ ಖೈದಿಯಾಗಿದ್ದವರಲ್ಲಿ ಬೇರಾರೂ ಬರೆಯದ ಅತ್ಯಂತ ಉತ್ತಮ ವಿಶ್ವಾಸಾರ್ಹ ಕಥನಗಳನ್ನು "ತ್ವಾರೀಕ್–ಎ–ಅಜೀಬ್ ಯಾನೀ ಕಾಲಾ ಪಾನಿ" (ವಿಚಿತ್ರ ನಾಡಿನ ಚರಿತ್ರೆ: ಕರಿ ನೀರು) ಅವರು ಬರೆದರು. ಅದನ್ನು ಅವರ ಗೆಳೆಯರೊಬ್ಬರು ಗುಟ್ಟಾಗಿ ಹೊರಗೆ ಸಾಗಿಸಿದರು. ಅದನ್ನು 1920 ರ ಅಂತ್ಯದಲ್ಲಿಯಷ್ಟೆ ಮುದ್ರಿಸಲು ಸಾಧ್ಯವಾಯಿತು. ವಿಷಾದದ ಸಂಗತಿಯೆಂದರೆ ಉರ್ದುವಿನಲ್ಲಿ ಬರೆಯಲ್ಪಟ್ಟಿದ್ದ ಅದು ಅಜ್ಞಾತವಾಗಿಯೇ ಉಳಿಯಿತು.

ಆ ಕಾಲದ ಅಂಡಮಾನಿನ ಸಾಮಾಜಿಕ (ಮೂಲನಿವಾಸಿಗಳ), ಆಡಳಿತಾತ್ಮಕ, ಧಾರ್ಮಿಕ, ಹವಾಮಾನ ಹಾಗೂ ರಾಜಕೀಯ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಈ ಪುಸ್ತಕವನ್ನು ಓದಲೇಬೇಕು. ಭಾರತದ ಆಗಿನ ಗೌರ್ನರ್ ಜನರಲ್ ಆಗಿದ್ದ ಲಾರ್ಡ್ ಮೇಯೋರವರನ್ನು ಹೇಗೆ ಒಬ್ಬ ಪಠಾಣ, ಶೇರ್ ಅಲಿ ಹತ್ಯೆ ಮಾಡಿದ ಮತ್ತು ಜೈಲಿನ ಅಧಿಕಾರಿಗಳು ಹಿಂದೂ ಮತ್ತು ಮುಸ್ಲಿಂ ಖೈದಿಗಳ ನಡುವೆ ಹೇಗೆ ಒಡಕು ಉಂಟುಮಾಡಿದರು ಎನ್ನುವುದನ್ನೂ ಅವರು ಅದರಲ್ಲಿ ವಿವರಿಸಿದ್ದರು. ವಿಲಿಯಂ ವಿಂಟರ್ ಹಂಟರ್ ಅವರು ಬರೆದ ನಮ್ಮ ಭಾರತೀಯ ಮುಸ್ಲಿಮರು (ಅವರ್ ಇಂಡಿಯನ್ ಮುಸ್ಲಿಮ್ಸ್) ಎಂಬ ಪುಸ್ತಕದ ವಿಮರ್ಶೆಯನ್ನೂ ಕೂಡ ಈ ಪುಸ್ತಕದಲ್ಲಿ ಮಾಡಲಾಗಿದೆ.

ಆ ನಂತರದಲ್ಲಿ ಅಂಡಮಾನಿಗೆ ಕಳಿಸಿದ ಬಹು ಮುಖ್ಯ ರಾಜಕೀಯ ಖೈದಿಗಳು ಮುಸ್ಲಿಂ ವಹಾಬಿ ಕ್ರಾಂತಿಕಾರಿಗಳಾಗಿದ್ದರು. (ಬ್ರಿಟಿಷ್ ಆಳ್ವಿಕೆಯ ವಿರುದ್ಧ ವಹಾಬಿ ದಂಗೆಗೆ ಮೌಲ್ವಿಗಳು ಮುಂದಾಳುತ್ವ ವಹಿಸಿದ್ದರು ಮತ್ತು ಅದನ್ನು ವಸಾಹತುಶಾಹಿಯ ವಿರುದ್ಧದ ಭಾರತದ ಇತಿಹಾಸದಲ್ಲಿ ಒಂದು ಮೈಲುಗಲ್ಲು ಎಂದು ಪರಿಗಣಿಸಲಾಗಿತ್ತು.) ಅವರು 1857ರ ಬಂಡಾಯದಲ್ಲೂ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ವಿಷಾದವೆಂದರೆ, ಅಲ್ಲಿ ಜೈಲಿನಲ್ಲಿದ್ದ ವಹಾಬಿ ಚಳುವಳಿಗೆ ಸೇರಿದ್ದ ಖೈದಿಗಳ ವ್ಯಕ್ತಿಗತ ವಿವರಗಳು ಲಭ್ಯವಿಲ್ಲ. ಆದರೆ, ಅಂಡಮಾನಿನಲ್ಲಿ ವಹಾಬಿ ಖೈದಿಯಾಗಿದ್ದ ಶೇರ್ ಅಲಿ ಅಫ್ರಿದಿಯವರು ಆಗಿನ ಭಾರತದ ವೈಸ್‌ರಾಯಿಯಾಗಿ ಆ ದ್ವೀಪಕ್ಕೆ ಭೇಟಿ ನೀಡಿದ್ದ ಲಾರ್ಡ್ ಮೇಯೋರವರನ್ನು ಹತ್ಯೆ ಮಾಡಿದ್ದರ ಘಟನೆಯನ್ನು ಬ್ರಿಟಿಷ್ ಭಾರತೀಯ ಸಾರ್ವಜನಿಕ ಪತ್ರಾಗಾರದಲ್ಲಿ (ಬ್ರಿಟಿಷ್ ಇಂಡಿಯನ್ ಆರ್ಕೈವ್ಸ್), ದಾಖಲಿಸಲಾಗಿದೆ. ಬ್ರಿಟಿಷ್ ಆಳ್ವಿಕೆಯ ವಿರುದ್ಧ 20ನೇ ಶತಮಾನದ ಆರಂಭದಲ್ಲಿ ಕ್ರಾಂತಿಕಾರಿ ಪ್ರತಿರೋಧಗಳು ಹೆಚ್ಚಾದಂತೆಲ್ಲಾ ಸೆಲ್ಯುಲರ್ ಜೈಲಿಗೆ ಕ್ರಾಂತಿಕಾರಿಗಳ ಹರಿವು ಏರತೊಡಗಿತು. ಅಂಥವರ ಮೊದಲ ತಂಡ 1908 ರ ಅಲಿಪುರ್ ಬಾಂಬ್ ಪ್ರಕರಣದಲ್ಲಿ ಬಂಧಿಸಲ್ಪಟ್ಟವರಾಗಿದ್ದರು.

(ಮುಂದುವರೆಯುವುದು)

ಬಂಡವಾಳಶಾಹಿಯ ಮತ್ತು ಕಾರ್ಮಿಕ ವರ್ಗದ ಉದಯ

(ವಿ.ಜೆ.ಕೆ.ನಾಯರ್ ಅವರ ಪ್ರವೇಶಿಕೆಯಿಂದ)

ಸುಕೊಮಲ್ ಸೇನ್ ಮೊದಲ ಐದು ಅಧ್ಯಾಯಗಳನ್ನು ಇತಿಹಾಸದುದ್ದಕ್ಕೂ ಅಸ್ತಿತ್ವದಲ್ಲಿದ್ದ ದುಡಿಯುವ ಜನಸಮೂಹದಿಂದ ವಿಭಿನ್ನವಾದ ಕಾರ್ಮಿಕ-ವರ್ಗದ ಉದಯಕ್ಕೆ ಮೀಸಲಿಟ್ಟಿದ್ದಾರೆ.

.. .. ..

ಸುಕೊಮಲ್ ಸೇನ್ ಈ ರಚನೆಯ ಅವಧಿಯ ಇತಿಹಾಸವನ್ನು ಮೊದಲ ಐದು ಅಧ್ಯಾಯಗಳಲ್ಲಿ ಚಿತ್ರಿಸಿದ್ದು,

ಅದಕ್ಕೆ ವಿವಿಧ ದಾಖಲೆಗಳನ್ನು ಒದಗಿಸಿದ್ದಾರೆ. ಕರ್ನಾಟಕದ ನಿರ್ದಿಷ್ಟವಾದ ಅಂಶಗಳನ್ನು ನಾವು ಗಮನಿಸಬಹುದು; ಈಸ್ಟ್ ಇಂಡಿಯಾ ಕಂಪನಿಯ ಮಧ್ಯಪ್ರವೇಶಗಳು ಕರ್ನಾಟಕದಲ್ಲಿ ಪ್ರಾರಂಭವಾಗಿ 1799 ರಲ್ಲಿ ಟಿಪ್ಪೂ ಸುಲ್ತಾನ್ ಕೊಲ್ಲಲ್ಪಟ್ಟ ಕೊನೆಯ ಆಂಗ್ಲೋ-ಮೈಸೂರು ಯುದ್ಧದೊಂದಿಗೆ ಉತ್ತುಂಗಕ್ಕೇರಿತು. ಇಲ್ಲಿ ಉಲ್ಲೇಖಿಸಿದ ಕರ್ನಾಟಕ ಅರ್ಕಾಟ್ನ ನವಾಬ್ ಆಳ್ವಿಕೆಯಲ್ಲಿತ್ತು ಮತ್ತು ಆ ಪ್ರದೇಶವು ಹದಿನೆಂಟನೇ ಶತಮಾನದಲ್ಲಿ ಮೈಸೂರಿನ ಸುಲ್ತಾನರು ಅಂದರೆ ಹೈದರಾಲಿ ಮತ್ತು ಟಿಪ್ಪೂ ಸುಲ್ತಾನರೊಂದಿಗೆ ಕೈ ಬದಲಾಯಿಸುತ್ತಿತ್ತು. ಮೈಸೂರು ಸುಲ್ತಾನರು ಮದ್ರಾಸ್ನ ಬಾಗಿಲಿನಿಂದ (ಪ್ರಸ್ತುತ ಚೆನ್ನೈ) ಕಾಂಚೀಪುರಂ, ಅರ್ಕಾಟ್, ಸೇಲಂ, ದಿಂಡಿಗಲ್, ಕೊಯಮತ್ತೂರು, ಪಾಲಘಾಟ್, ವಯನಾಡ್, ಮಲಬಾರ್, ಮಂಗಳೂರು, ಬೈಂದೂರು ಮೂಲಕ ಪೂರ್ವದಲ್ಲಿ ಕರ್ನೂಲ್ ವರೆಗೆ ಉತ್ತರ ಭಾಗಗಳಲ್ಲಿ ವಿವಿಧ ಪ್ರದೇಶಗಳನ್ನು ನಿಯಂತ್ರಿಸುತ್ತಿದ್ದರು ಮತ್ತು ಅವರ ಪ್ರಭಾವಗಳು ಹೈದರಾಬಾದ್ ವರೆಗೂ ವ್ಯಾಪಿಸಿದ್ದವು. ಬಂಗಾಳ ಪ್ರೆಸಿಡೆನ್ಸಿ ಅನುಭವಿಸಿದ್ದಕ್ಕಿಂತ ಭಿನ್ನವಾಗಿ, ಯುದ್ಧದಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಅಗತ್ಯವನ್ನು, ಯುದ್ಧಕ್ಕೆ ಅವಶ್ಯಕ ಹಣಕಾಸು ಒಟ್ಟುಮಾಡಲು ಆದಾಯ ಸಂಗ್ರಹಣೆಯ ಅವಶ್ಯಕತೆಗಳನ್ನು ಪೂರೈಸಲು ಆರ್ಥಿಕತೆಯನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯನ್ನು ಈ ಪ್ರದೇಶವು ನಿಖರವಾಗಿ ಅನುಭವಿಸಿದೆ.

ಇದು ಜಾಗತಿಕವಾಗಿ ಬೂರ್ಜ್ವಾ ವರ್ಗ ಮತ್ತು ಅವರೊಂದಿಗೆ ಕಾರ್ಮಿಕ ವರ್ಗವು ಹೊರಹೊಮ್ಮುತ್ತಿದ್ದ ಅವಧಿಯಾಗಿತ್ತು. ಕಾರ್ಲ್ ಮಾರ್ಕ್ಸ್ ಅವರ 'ಜರ್ಮನ್ ಐಡಿಯಾಲಜಿ'ಯಲ್ಲಿ ವಿವರಿಸಿದ 'ಇತಿಹಾಸದಲ್ಲಿ ಹಿಂಸಾಚಾರದ ಪಾತ್ರ'ವನ್ನು ಇಲ್ಲಿನ ಪರಿಸ್ಥಿತಿಗೆ ಅನ್ವಯಿಸಬಹುದು. ಸಿಪಾಯಿಗಳು ದುಡಿಯುವ ಪುರುಷರು, ಆರ್ಡಿನೆನ್ಸ್ ಕೈಗಾರಿಕೆ ಶಸ್ತ್ರಾಸ್ತ್ರ, ಮದ್ದುಗುಂಡು, ಪೂರೈಸುತ್ತಿತ್ತು. ಗಣಿಕೆಲಸಗಾರರು ಮತ್ತು ಸ್ಯಾಪ್ಪರ್ಗಳು(ಸುರಂಗಕಾರರು) ಗಣಿ ಕೆಲಸವನ್ನು ನಿಭಾಯಿಸುತ್ತಿದ್ದರು. ಇದು ಉತ್ಪಾದನೆಯ ಅಗತ್ಯವನ್ನು ಪೂರೈಸಿತು. ಎಂಜಿನಿಯರ್ಗಳು ಸೇತುವೆಗಳನ್ನು ನಿರ್ಮಿಸುವ ಮತ್ತು ಕೋಟೆ ಕಟ್ಟುವ ಮತ್ತು ದುರಸ್ತಿಯ ಕೆಲಸ ಇತ್ಯಾದಿಗಳನ್ನು ನಿಭಾಯಿಸಿದರು. ಸೇವಾ ದಳಗಳು ಸಂಗ್ರಹಣೆ, ಆಹಾರ, ಬಟ್ಟೆ, ಉಪಭೋಗ್ಯ ವಸ್ತುಗಳ ಪೂರೈಕೆ, ಡೇರೆ/ಶಿಬಿರಗಳು ಇತ್ಯಾದಿಗಳನ್ನು ಆಯೋಜಿಸುವುದನ್ನು ಮತ್ತು ಈ ಕದನಗಳು ಮತ್ತು ಯುದ್ಧಗಳಲ್ಲಿ ಸೈನ್ಯದ ಚಲನೆಗೆ ವಾಹನಗಳ ಪೂರೈಕೆಯನ್ನು ಮಾಡುತ್ತಿದ್ದವು.

ಈ ಕಾರ್ಯಗಳಿಗಾಗಿ ಸಿಪಾಯಿಗಳನ್ನು ನೇಮಕ ಮಾಡುವುದಕ್ಕಾಗಿ ಸೇನಾಪಡೆಯು ಕರ್ನಾಟಕದ ಖಲಾಸಿಗಳನ್ನು ಅವಲಂಬಿಸಬೇಕಾಗಿತ್ತು. ಟಿಪ್ಪೂ ಕೊಲ್ಲಲ್ಪಡುವ ನಾಲ್ಕು ದಶಕಗಳ ಮೊದಲು ಮದ್ರಾಸ್ ಎಂಜಿನಿಯರ್ಸ್ ಗ್ರೂಪ್ ಅನ್ನು 1760 ರಲ್ಲಿ ಬೆಂಗಳೂರಿನ ಅಲಸೂರು ಬಳಿ ಸ್ಥಾಪಿಸಲಾಯಿತು ಎಂದು ನಾವು ಕಾಣಬಹುದು. ಮತ್ತು ಟಿಪ್ಪೂ ತನ್ನ ಕಾರ್ಖಾನೆಗಳು, ಮದ್ದುಗುಂಡು ಸಂಗ್ರಹಾಲಯ ಇತ್ಯಾದಿಗಳನ್ನು ಇಂದಿನ ಬೆಂಗಳೂರಿನ ಮಧ್ಯಭಾಗದಲ್ಲಿರುವ ಕಲಾಸಿಪಾಳ್ಯಾ ಬಳಿ ಹೊಂದಿದ್ದನು. ಈ ಯುದ್ಧಗಳಲ್ಲಿ ಮೈಸೂರು ಸುಲ್ತಾನರು ಬಳಸಿದ ರಾಕೆಟ್ಗಳಿಂದ ಆಧುನಿಕ ಕ್ಷಿಪಣಿಗಳ ಬಳಕೆಯು ಹೊರಹೊಮ್ಮಿತು ಎಂಬ ಅಂಶವು ಮಿಲಿಟರಿ ತಂತ್ರಜ್ಞಾನಕ್ಕಾಗಿ ಆಕ್ರಮಣಕಾರಿ ಶಕ್ತಿಗಳಿಗಿಂತ ಮೈಸೂರು ಹೆಚ್ಚು ಅಭಿವೃದ್ಧಿ ಹೊಂದಿತ್ತು ಎಂದು ಸ್ಪಷ್ಟಪಡಿಸುತ್ತದೆ. ಆಂಗ್ಲೋ-ಮೈಸೂರು ಯುದ್ಧಗಳು ಮಧ್ಯಕಾಲೀನ ಯುಗದ ಮುಂಚಿನ ಕಾರ್ಯಾಗಾರಗಳನ್ನು ಈ ಭಾಗಗಳಲ್ಲಿ ಮೂಲ ಬಂಡವಾಳಶಾಹಿಯನ್ನು ಅಭಿವೃದ್ಧಿಪಡಿಸುವ ಆದ್ಯ(ಪ್ರೊಟೊ) ಕಾರ್ಯಾಗಾರಗಳಾಗಿ ಪರಿವರ್ತಿಸುತ್ತಿದ್ದವು. ಟಿಪ್ಪು ತನ್ನ ಯುದ್ಧಗಳಿಗೆ ಹಣಕಾಸಿನ ನೆರವು ಪಡೆಯುವದಕ್ಕಾಗಿ ಮತ್ತು ತನ್ನ ಪ್ರದೇಶವನ್ನು ಅಭಿವೃದ್ಧಿಪಡಿಸುವಲ್ಲಿ ರೇಶ್ಮೆ ಕೃಷಿಯನ್ನು ಅಭಿವೃದ್ಧಿಪಡಿಸಿದನು.

ರಾಕೆಟ್ನ ಉತ್ಪಾದನೆಯಲ್ಲಿನ ಗಮನಾರ್ಹ ಬೆಳವಣಿಗೆಗಳ ಹೊರತಾಗಿ ಆಂಗ್ಲೋ-ಮೈಸೂರು ಯುದ್ಧಗಳ ಸಮಯದಲ್ಲಿ ಮಲೇರಿಯಾವನ್ನು ನಿಯಂತ್ರಿಸುವ ಪ್ರಯತ್ನಗಳು ಅಂತಿಮವಾಗಿ ಕಲ್ಕತ್ತಾದ ಬಂಗಾಳ ಕೆಮಿಕಲ್ಸ್ ಕ್ಲೋರೊಕ್ವಿನ್ ಅನ್ನು ಅಭಿವೃದ್ಧಿಪಡಿಸಲು ಕಾರಣವಾಯಿತು. 1790 ರ ದಶಕದಲ್ಲಿ ಕರ್ನಾಟಿಕ್/ಮೈಸೂರಿನಲ್ಲಿ ಇಂಗ್ಲೆಂಡ್ನಂತೆ ಮಿಲಿಟರಿ ತಂತ್ರಜ್ಞಾನದಲ್ಲಾದರೂ ಉತ್ಪಾದನಾ ವಿಧಾನದ ರೂಪಾಂತರದ ಪ್ರವೃತ್ತಿಯನ್ನು ನಾವು ನೋಡಬಹುದು. ಆದರೂ ವಸಾಹತುಶಾಹಿಯ ಪ್ರಜ್ಞಾಪೂರ್ವಕ ಪ್ರವೃತ್ತಿಯಿಂದಾಗಿ ಇದು ಬಂಡವಾಳಶಾಹಿಯಾಗಿ ಬೆಳೆಯಲಿಲ್ಲ. ವಸಾಹತುಶಾಹಿ ತನ್ನ ಆಳ್ವಿಕೆಯ ಹೆಚ್ಚಿನ ಸಮಯದಲ್ಲಿ ಉದ್ಯಮದಲ್ಲಿ ಉತ್ಪಾದನಾ ವಿಧಾನದ ಬೆಳವಣಿಗೆಯನ್ನು ಬಯಸಲಿಲ್ಲ.

ಒಪ್ಪಂದ (ಇಂಡೆಂಚರ್) ಶ್ರಮದ ಅವಧಿ

ನಾವು ಕರ್ನಾಟಕದಿಂದ ವಲಸೆ ಹೊದ ಕಾರ್ಮಿಕರನ್ನು ಕಾಣುವುದಿಲ್ಲ. ಇನ್ನು, ಆರ್ಕಾಟ್ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ಒಪ್ಪಂದದ ಕಾರ್ಮಿಕರು ಇದ್ದರು, ಇಂದಿನ ತಮಿಳುನಾಡಿನ ಇತರ ಪ್ರದೇಶಗಳ ಜನರು ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್, ಫಿಜಿ, ಮಲೇಷ್ಯಾ ಇತ್ಯಾದಿಗಳಿಗೆ ವಲಸೆ ಹೋಗಿದ್ದಾರೆ. ಇದರ ಮುಂದಿನ ಪೀಳಿಗೆಗಳು ಹತ್ತೊಂಬತ್ತನೇ ಶತಮಾನದಲ್ಲಿ ಮತ್ತು ಹತ್ತೊಂಬತ್ತನೇ ಶತಮಾನದ ಅಂತ್ಯದ ವೇಳೆಗೆ ಕೋಲಾರ್ ಚಿನ್ನದ ಗಣಿಗಳಲ್ಲೂ, ಚಿಕ್ಕಮಗಳೂರು, ಕೊಡಗಿನಲ್ಲಿ ಅಭಿವೃದ್ಧಿಪಡಿಸಿದ ಪ್ಲಾಂಟೇಶನ್ ತೋಟಗಳಿಗೆ ಕರೆತರಲ್ಪಟ್ಟ ಕೂಲಿಜನರನ್ನು, ಒಪ್ಪಂದದ ಶ್ರಮ (ಇಂಡೆಂಚರ್ ಲೇಬರ್) ಅವಧಿಯ ವಲಸೆಯ ಪ್ರಕ್ರಿಯೆಯ ಪ್ರಮುಖ ಉದಾಹರಣೆಯಾಗಿ ಗುರುತಿಸಬಹುದು. ದೇಶೀಯವಾಗಿ ಈ ಪ್ರಕ್ರಿಯೆಯನ್ನು ಕೂಲಿ/ಕಂಗಾನಿ ವ್ಯವಸ್ಥೆ ಎಂದು ಗುರುತಿಸುತ್ತಿದ್ದರು, ಇದು ತೋಟ ಮತ್ತು ಗಣಿಗಳಿಗೆ ಶ್ರಮವನ್ನು ಒದಗಿಸಿತು. ಶೂನ್ಯವನ್ನು ತುಂಬಲು ಕರ್ನಾಟಕದ ಕಾರ್ಮಿಕ ಇತಿಹಾಸಕಾರರು ಈ ಅಂಶಗಳ ಬಗ್ಗೆ ಸಂಶೋಧನೆ ಮಾಡಬೇಕಾಗುತ್ತದೆ. ಉಪಯುಕ್ತ ಫಲಿತಾಂಶವನ್ನು ನೀಡುವ ದಿಕ್ಕನ್ನು ನಾವು ಸೂಚಿಸಬಹುದು.

4 ನೇ ಅಧ್ಯಾಯದಲ್ಲಿ ಸುಕೊಮಲ್ ಸೇನ್ ಭಾರತದಲ್ಲಿನ ಕೃಷಿ ಸಂಕಟವನ್ನು ವಿವರಿಸುತ್ತಾರೆ ಮತ್ತು ಮುಖ್ಯವಾಗಿ ಬಂಗಾಳದಲ್ಲಿನ ಇಂಡಿಗೊ ಕೃಷಿಕರ ಬಗ್ಗೆ ಗಮನಹರಿಸುತ್ತಾರೆ. ಗ್ರಾಮೀಣ ಬಿಕ್ಕಟ್ಟು ಕಾರ್ಮಿಕರ ಒಪ್ಪಂದಕ್ಕೆ ಒಪ್ಪಲು ಮತ್ತು ಇತರ ಭಾಗಗಳಿಗೆ ವಲಸೆ ಹೋಗಲು ಕಾರಣವಾಯಿತು ಎಂದು ಅವರು ಹೇಳುತ್ತಾರೆ. ಇಂಡಿಗೊ ಕೃಷಿಕರ ಅವಸ್ಥೆಯನ್ನು 1860 ರಲ್ಲಿ ನೀಲ್-ದರ್ಪಣ್ ನಲ್ಲಿ ಚಿತ್ರಿಸಲಾಗಿದ್ದರೂ, ಆ ಕಾಲದ ನಮ್ಮ ಪ್ರದೇಶದಲ್ಲಿ ಅಂತಹ ಸಾಹಿತ್ಯದ ಬಗ್ಗೆ ನಮಗೆ ತಿಳಿದಿಲ್ಲ. 1830-31ರ ನಗರಾ ದಂಗೆ ಮುಖ್ಯವಾಗಿ ರೈತರ ದಂಗೆಯಾಗಿದೆ. ಕೆಳದಿ-ವಂಶ ಈ ಹಿಂದೆ ಆಳಿದ ಪ್ರದೇಶವು ಉತ್ಪಾದನೆಗೆ ಸಂಬಂಧಿಸಿದ ಒಂದು ವಿಭಿನ್ನ ಭೂಕಂದಾಯ ವ್ಯವಸ್ಥೆಯನ್ನು ಹೊಂದಿತ್ತು. ಇದನ್ನು ಬ್ರಿಟಿಷ್ ರೆಸಿಡೆಂಟ್ ಸೂಚನೆಯ ಮೇರೆಗೆ ಒಡೆಯರ್ಗಳು ಪ್ರದೇಶ ಆಧಾರಿತವಾಗಿ ಬದಲಾಯಿಸಿದರು, ಅಲ್ಲಿ ಸಂಕಷ್ಟದಲ್ಲಿದ್ದ ರೈತರು ಸಹ ಭೂಕಂದಾಯವನ್ನು ಪಾವತಿಸಲು ಒತ್ತಾಯಿಸಲ್ಪಟ್ಟರು. ಕಾಸರಗೋಡಿನ ಬೇಕಲದಿಂದ ಶಿವಮೊಗ್ಗೆಯ ಸಾಗರದ ವರೆಗಿನ ಪ್ರದೇಶದ ರೈತರು ಕೂಟಗಳನ್ನು ರಚಿಸಿ ತಮ್ಮ ಪ್ರದೇಶವನ್ನು ನಿರ್ವಹಿಸಲು ಪ್ರಾರಂಭಿಸಿದರು. ಕೊನೆಗೆ ಅದನ್ನು ಬ್ರಿಟಿಷರು ಹತ್ತಿಕ್ಕಿದರು.

ಇವುಗಳಲ್ಲಿ ಮತ್ತು ಪಕ್ಕದ ಪ್ರದೇಶಗಳಲ್ಲಿ ಹತ್ತಿ ಕೃಷಿಯ ಅಭಿವೃದ್ಧಿಯ ಬಗ್ಗೆಯೂ ನಮಗೆ ತಿಳಿದಿದೆ. 1850 ರ ದಶಕದಲ್ಲಿ ಅಂತರ್ಯುದ್ಧದ ಸಮಯದಲ್ಲಿ ಯುಎಸ್ಎಯಿಂದ ಹತ್ತಿಯ ಪೂರೈಕೆಯಲ್ಲಿನ ನಷ್ಟವನ್ನು ಭರಿಸಲು ಸ್ಥಳೀಯ ಹತ್ತಿ ಕೃಷಿಯನ್ನು ಬ್ರಿಟಿಷರು ಉತ್ತೇಜಿಸಿದರು. ಇವುಗಳ ಉತ್ಪನ್ನಗಳನ್ನು ಸಾಗಿಸಲು ಬಂದರು ಪಟ್ಟಣವನ್ನು ಉತ್ತರ ಕರ್ನಾಟಕದೊಂದಿಗೆ ಸಂಪರ್ಕಿಸುವ ಕುಮಟಾ ಕಾಟನ್ ಮಾರ್ಗವನ್ನು ಅಭಿವೃದ್ಧಿಪಡಿಸಿದವು. ಜಿನ್ನಿಂಗ್ ಕೇಂದ್ರಗಳು, ವ್ಯಾಪಾರ ಕೇಂದ್ರಗಳು ಇತ್ಯಾದಿಗಳು ಈ ಪ್ರಕ್ರಿಯೆಯಲ್ಲಿ ದಾವಣಗೆರೆಯಂತಹ ಕೇಂದ್ರಗಳು ಅಭಿವೃದ್ಧಿ ಹೊಂದಿವೆ.

ಭಾರತದ ಕಾರ್ಮಿಕರಿಗೆ ಪ್ರಣಾಳಿಕೆ............

ಪುಟ 16 ರಿಂದ

ಚಹಾ ತೋಟಗಳ ಗುಲಾಮರನ್ನು ನೋಡಿದರೆ ಹತಾಶರಾಗುತ್ತೀರಿ. ಅವರ ನಿಜವಾದ ದೈನಂದಿನ ವೇತನವು ಸರ್ಕಾರದ ಕಾಯ್ದೆಗಳ ಪ್ರಕಾರ ನಿಗದಿತ ದಿನಕ್ಕೆ ಮೂರು ಆಣೆಗಿಂತ ಕಡಿಮೆ. ಅವರು ಹೆಚ್ಚಾಗಿ ಕ್ರೂರ ವ್ಯವಹಾರಕ್ಕೆ ಬಲಿಯಾಗುತ್ತಾರೆ, ಅನಿಯಮಿತ ಗಂಟೆಗಳ ಕೆಲಸದಿಂದ ಬಾಧಿತರಾಗಿದ್ದಾರೆ. ಆದರೆ ಈ ಕೆಲವು ತೋಟಗಳು ಶೇಕಡಾ 20 ರಿಂದ 40 ರಷ್ಟು ಲಾಭಾಂಶವನ್ನು ನೀಡುತ್ತವೆ. ಅವು ಸಾವು ಮತ್ತು ಹಸಿವಿನ ಲಾಭಾಂಶಗಳು ಮತ್ತು ನೀವು, ನಿಮ್ಮ ಹೆಂಡತಿಯರು, ನಿಮ್ಮ ಮಕ್ಕಳು ಮುಗ್ಧ ಬಲಿಪಶುಗಳು. ಈ ಶೋಷಣೆಯ ಅರ್ಥವನ್ನು ಅರಿತುಕೊಳ್ಳಲು ಮತ್ತು ಪ್ರತಿ ಸಂಘಗಳ ಸದಸ್ಯರಿಂದ ವಿಶೇಷ ದೇಣಿಗೆಗಳನ್ನು ನೀಡುವಂತೆ ನಾವು ನಿಮಗೆ ಕರೆನೀಡುತ್ತೇವೆ. ಚಾಂದಪುರದಲ್ಲಿ ಈ ಅರೆ-ಗುಲಾಮರ ಕದನದಲ್ಲಿ ಹೋರಾಡುತ್ತಿರುವ ಸಿ.ಎಫ್. ಆಂಡ್ರ್ಯೂಸ್ ಅವರಿಗೆ ನಾವು ಏನಾದರು ಸಹಾಯ ಮಾಡಬಹುದು!

ಭಾರತದ ಕಾರ್ಮಿಕರೇ! ಭೂಮಿಯು ನಿಮ್ಮ ಸರ್ವಸಾಮಾನ್ಯ ಪರಂಪರೆಯಾಗಿದೆ. ಇದು ವೃತ್ತಿಪರ ರಾಜಕಾರಣಿಗಳಿಗೆ ಅಥವಾ ಸಿಮ್ಲಾ ಅಧಿಕಾರಿಗಳಿಗೆ ಅಥವಾ ಮಿಲ್ ಮಾಲಿಕ ಧನವಂತರಿಗೇ ವಿಶೇಷವಾಗಿ ಮೀಸಲಾಗಿಲ್ಲ. ನಿಮ್ಮ ರಾಷ್ಟ್ರದ ನಾಯಕರು ಸ್ವರಾಜ್ಯಕ್ಕಾಗಿ ಕೇಳುತ್ತಾರೆ, ಅವರು ನಿಮ್ಮನ್ನು ಲೆಕ್ಕಾಚಾರದಿಂದ ಹೊರಗಿಡಲು ಬಿಡಬಾರದು. ನಿಮಗೆ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ರಾಜಕೀಯ ಸ್ವಾತಂತ್ರ್ಯಕ್ಕೆ ಬೆಲೆಯಿಲ್ಲ. ಆದ್ದರಿಂದ ರಾಷ್ಟ್ರೀಯ ಸ್ವಾತಂತ್ರ್ಯದ ಚಳುವಳಿಯನ್ನು ನಿರ್ಲಕ್ಷಿಸಲು ನಿಮಗೆ ಸಾಧ್ಯವಿಲ್ಲ. ನೀವು ಆ ಚಳವಳಿಯ ಅವಿಚ್ಛಿನ್ನ ಭಾಗವಾಗಿದ್ದಿರಿ, ನೀವು ಅದನ್ನು ನಿರ್ಲಕ್ಷಿಸಿದರೆ, ನಿಮ್ಮ ಸ್ವಾತಂತ್ರ್ಯವನ್ನು ಅಪಾಯದಲ್ಲಿ ಒಡ್ಡಿದಂತೆಯೇ ಸರಿ.

ಭಾರತದ ಕಾರ್ಮಿಕರೇ! ನಿಮ್ಮ ಯೂನಿಯನ್ ಸದಸ್ಯತ್ವವು ನೀವು ಭಾರತ ರಾಷ್ಟ್ರೀಯ ಕಾಂಗ್ರೆಸ್ ಗೆ ಸೇರುವುದನ್ನು ತಡೆಯುವುದಿಲ್ಲ. ಸ್ವಾತಂತ್ರ್ಯದ ಧ್ಯೇಯವನ್ನು ಎತ್ತಿಹಿಡಿಯಲು ನಿಮ್ಮ ಅಸ್ಸಾಂ ಸಂಗಾತಿಗಳು ಬಳಲುತ್ತಿರುವ ರೀತಿಯಲ್ಲೇ ನೀವು ಬಳಲುತ್ತಿರುವಿರಿ. ಸರ್ ವಿಲಿಯಂ ವಿನ್ಸೆಂಟ್ ಮಾಡಿದಂತೆ ನಿಮ್ಮ ಮಾಲಿಕರು ತಮಗೆ ಸಹಕಾರ ನೀಡದಿರುವ ನಿಮ್ಮ ನಾಯಕರನ್ನು ಕೆಲಸಗಾರರಲ್ಲಿ ಅನೈಕತೆಯನ್ನು ಬಿತ್ತುವ ಪ್ರಯತ್ನ ಮಾಡುತ್ತಾರೆ ಎಂದು ಆರೋಪಿಸಿ ಬೆದರಿಸಲು ಏನು ಬೇಕಾದರೂ ಮಾಡುತ್ತಾರೆ. ನೀವು ಭಯಪಡಬೇಕಾಗಿಲ್ಲ. ಕ್ರೂರ ವರ್ತನೆ, ಅರೆ ಗುಲಾಮಗಿರಿಯ ಪರಿಸ್ಥಿತಿಗಳು ಮತ್ತು ಮಹಿಳೆಯರು ಮತ್ತು ಮಕ್ಕಳ ಭೀಕರ ಶೋಷಣೆಯ ಬಗ್ಗೆ ಅಸಹ್ಯ ಭಾವನೆ ಸೃಷ್ಟಿಸುವುದು ಅಪರಾಧವಲ. ಮಾಲಿಕರ ಪ್ರತಿಯೊಂದು ಕುತಂತ್ರದ ಹೊರತಾಗಿಯೂ ಕಳೆದ ಹನ್ನೆರಡು ತಿಂಗಳುಗಳಲ್ಲಿ ಭಾರತದ ಪ್ರತಿಯೊಂದು ದೊಡ್ಡ ಮುಷ್ಕರದಲ್ಲೂ ಈ ನಾಯಕರ ಪ್ರಭಾವದಿಂದ ಶಾಂತಿಯನ್ನು ಕಾಪಾಡಿಕೊಳ್ಳಲಾಗಿದೆ ಮತ್ತು ಸಮಸ್ಯೆಗಳ ಇತ್ಯರ್ಥ ಸಾಧ್ಯವಾಗಿದೆ ಎಂಬುದು ನಿಮಗೆ ಚೆನ್ನಾಗಿ ತಿಳಿದಿದೆ. ನಿಮ್ಮ ಸಲುವಾಗಿ ಶ್ರಮಿಸುವುದು ಎಂದರೆ ಮಾನವತೆಗಾಗಿ ಶ್ರಮಿಸುವುದೇ ಆಗಿದೆ. ಅದನ್ನು ತಪ್ಪು ನಿರೂಪಣೆಯ ಮೂಲಕ ಬಳಲುವಂತೆ ಮಾಡಲು ಸಾಧ್ಯವಿಲ್ಲ.

ಭಾರತದ ಕಾರ್ಮಿಕರೇ! ನೀವು ಮಾಡಬೇಕಾಗಿರುವ ವಿಷಯ ಒಂದೇ ಒಂದು. ನಿಮ್ಮ ಏಕತೆಯನ್ನು ನೀವು ಸಾಧಿಸಿಕೊಳ್ಳಬೇಕು. ನಿಮ್ಮ ಸಂಘಟನೆಗಳನ್ನು ನೀವು ಗಟ್ಟಿಗೊಳಿಸಬೇಕು. ನೀವು ಮುಕ್ತಿಗಾಗಿ ಫ್ಯಾಕ್ಟರಿ ಕಾಯ್ದೆಯತ್ತ ನೋಡಬೇಡಿ. ಕಾನೂನು ನಿಮಗೆ ಏಕತೆಯನ್ನು ನೀಡಲು ಸಾಧ್ಯವಿಲ್ಲ. ಕಾನೂನು ನಿಮ್ಮಲ್ಲಿ ಸಹೋದರತ್ವದ ಮನೋಭಾವವನ್ನು ಸೃಷ್ಟಿಸಲು ಸಾಧ್ಯವಿಲ್ಲ. ಅದು ನಿಮ್ಮ ಸ್ವಂತ ಕೆಲಸವಾಗಬೇಕು. ಕಾರ್ಖಾನೆಗಳಲ್ಲಿ ಮತ್ತು ಹೊರಗೆ ಕಾರ್ಮಿಕರ ಸುಲಿಗೆಯು ಬಂಡವಾಳಶಾಹಿಗಳ ಕೂಗು. ಮಾನವರ ಐಕ್ಯತೆ ಮತ್ತು ಸಹೋದರತ್ವವು ನಿಮ್ಮ ಧ್ಯೇಯವಾಕ್ಯಗಳಾಗಿರಲಿ. ನಿಮ್ಮ ಮುಕ್ತಿಯು ನಿಮ್ಮ ಸಂಘಟನೆಗಳ ಬಲದಲ್ಲಿದೆ. ಅವುಗಳನ್ನು ಬಲವಾಗಿ ಅಪ್ಪಿಕೊಳ್ಳಿ. ನಿಮ್ಮಿಂದ ಎಲ್ಲಾ ದೌರ್ಬಲ್ಯವನ್ನು ಹೊರಹಾಕಿ, ನೀವು ಖಂಡಿತವಾಗಿಯೂ ಅಧಿಕಾರ ಮತ್ತು ಸ್ವಾತಂತ್ರ್ಯದ ಹಾದಿಯಲ್ಲಿ ಸಾಗುತ್ತೀರಿ.


ಡಿ.ಚಮನ್ ಲಾಲ್

ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್

NEW No. MAG(3)/NPP/205/2021-2022
JANASHAKTHI KANNADA VARA PATRIKE November 14-20, 2022 Price: Rs. 10/- Date of Publication: 11 November 2022 RNI No. KARKAN /2006/17926 Posted on 15-11-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ಕಾರ್ಮಿಕ ವರ್ಗದ ಚರಿತ್ರೆಯ ಕುರಿತು ಮೇರುಕೃತಿಯೆಂದು ಹೆಸರಾದ ಸುಕೋಮಲ ಸೆನ್ ಅವರ "Working Class of India: History of Emergence and Movement, 1830–2010", ಕುಂದಾಪುರದಲ್ಲಿ ನಡೆಯಲಿರುವ 15ನೆಯ ಸಿಐಟಿಯು ರಾಜ್ಯ ಸಮ್ಮೇಳನದಲ್ಲಿ ಬಿಡುಗಡೆಯಾಗಲಿದೆ.

ಸುಕೋಮಲ್ ಸೆನ್ ಮೇರುಕೃತಿ
"ಭಾರತದ ಕಾರ್ಮಿಕ ಚಳುವಳಿಯ ಚರಿತ್ರೆ (1830–2010)"
ಕುಂದಾಪುರದಲ್ಲಿ ಬಿಡುಗಡೆ



ಭಾರತದಲ್ಲಿ ಬ್ರಿಟಿಷರ ವಸಾಹತುಶಾಹಿ ಆಕ್ರಮಣದೊಂದಿಗೆ ಬಂಡವಾಳಶಾಹಿ ವ್ಯವಸ್ಥೆ ಕಾಲಿಟ್ಟಿತು. ಬಾರತದ ಕಾರ್ಮಿಕ ವರ್ಗದ ಉದಯ ಅದರೊಂದಿಗೆ ಆಯಿತು. ಸ್ವಾತಂತ್ರ್ಯ ಚಳುವಳಿಯಲ್ಲೂ ಸ್ವಾತಂತ್ರ್ಯಾ ನಂತರವೂ ದೇಶದ ಆರ್ಥಿಕ–ರಾಜಕೀಯ ಬೆಳವಣಿಗೆಯಲ್ಲಿ ಅದು ಪ್ರಮುಖ ಪಾತ್ರ ವಹಿಸಿದೆ. ಬಾರತದ ಕಾರ್ಮಿಕ ವರ್ಗದ ಉದಯ, ಬೆಳವಣಿಗೆ ಮತ್ತು ಚಳುವಳಿಯ ಕುರಿತ ಚರಿತ್ರೆ ಭಾರತದ ಚರಿತ್ರೆಯ ಪ್ರಮುಖ ಭಾಗ. ಆಧರೆ ಇದು ಅತ್ಯಂತ ನಿರ್ಲಕ್ಷಿತ ಭಾಗ. ಈ ಕುರಿತು ಪುಸ್ತಕಗಳು ಬಹಳ ಕಡಿಮೆ. ಈ ಕುರಿತ ಪುಸ್ತಕಗಳಲ್ಲಿ ಪ್ರಮುಖವಾಗಿರುವುದು ಸುಕೋಮಲ ಸೆನ್ ಅವರ "Working Class of India : History of Emergence and Movement, 1830–2010". ಈ ಪುಸ್ತಕದ ಮೊದಲ ಆವೃತ್ತಿ 1830–1970 ಅವಧಿಯ ಚರಿತ್ರೆಯನ್ನು ಒಳಗೊಂಡಿದ್ದು 1977ರಲ್ಲಿ ಪ್ರಕಟವಾಯಿತು. ಇದು ಕಾರ್ಮಿಕ ವರ್ಗದ ಚರಿತ್ರೆಯ ಕುರಿತು ಮೇರುಕೃತಿಯೆಂದು ಹೆಸರಾಗಿದ್ದು ಇದರ ಎರಡನೆಯ ಆವೃತ್ತಿ 2013ರಲ್ಲಿ ಪ್ರಕಟವಾಯಿತು.

ಈ ಮೇರುಕೃತಿ ಹೆಚ್ಚಿನ ಭಾರತೀಯ ಭಾಷೆಗಳಲ್ಲಿ ಅನುವಾದಗೊಂಡಿದೆ. ಕಾರ್ಮಿಕ ವರ್ಗದ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಮತ್ತು ಲೇಖಕರೂ ಅನುವಾದಕರೂ ಆದ ಸಿ.ಆರ್.ಶಾನಭಾಗ ಮತ್ತು ವೇದರಾಜ ಎನ್.ಕೆ. ಅವರು ಇದೀಗ ಇದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಬೆಂಗಳೂರಿನ ಕ್ರಿಯಾ ಮಾಧ್ಯಮ ಪ್ರಕಟಿಸಿದೆ. ¼ ಕ್ರೌನ್ ಸೈಜಿನಲ್ಲಿ ಮುದ್ರಿತವಾದ ಸುಮಾರು 700 ಪುಟಗಳ ಈ ಬೃಹತ್ ಕೃತಿ ನವೆಂಬರ್ 15 ರಂದು ಬಿಡುಗಡೆಯಾಗಲಿದೆ. ದೇಶದ ಪ್ರಮುಖ ಕೇಂದ್ರೀಯ ಟ್ರೇಡ್ ಯೂನಿಯನುಗಳಲ್ಲಿ ಒಂದಾದ ಸಿಐಟಿಯು ನ ಕುಂದಾಪುರದಲ್ಲಿ ನಡೆಯಲಿರುವ 15ನೆಯ ರಾಜ್ಯ ಸಮ್ಮೇಳನದಲ್ಲಿ ಬಿಡುಗಡೆಯಾಗಲಿದೆ. ಸಾದಾಪ್ರತಿಗೆ ರೂ. 1200 ಮತ್ತು ಉತ್ತಮ ಪ್ರತಿಗೆ ರೂ. 1500 ಮುಖಬೆಲೆಯ ಈ ಪುಸ್ತಕ ಭಾರೀ ರಿಯಾಯಿತಿಯೊಂದಿಗೆ ಅನುಕ್ರಮವಾಗಿ ರೂ. 500 ಮತ್ತು ರೂ.600 ರ ಬೆಲೆಗೆ ಬಿಡುಗಡೆಯ ದಿನದಂದು ದೊರೆಯಲಿದೆ ಎಂದು ಕ್ರಿಯಾ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ.

ಸೆನ್ ಮತ್ತು ಅವರ ಕೃತಿ

ಈ ಪುಸ್ತಕ ಭಾರತದ ಕಾರ್ಮಿಕ ಆಂದೋಲನದ, ಎಂದಿನ ಸಾಂಪ್ರದಾಯಿಕ ರೀತಿಯ ಚರಿತ್ರೆಯಲ್ಲ. ಬದಲಿಗೆ, ಇದರಲ್ಲಿ ಒಂದು ವಿಸ್ತೃತ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂದರ್ಭದಲ್ಲಿ, ಭಾರತದ ಕಾರ್ಮಿಕ ವರ್ಗದ ಹೋರಾಟದಲ್ಲಿ ರಾಜಕೀಯ ಮತ್ತು ಆರ್ಥಿಕ ಆಯಾಮಗಳ ಅಂತರ್–ಕ್ರಿಯೆಯನ್ನು ಆಮೂಲಾಗ್ರವಾಗಿ ಪರಿಶೀಲಿಸುವ ಪ್ರಯತ್ನವನ್ನು ಮಾಡಲಾಗಿದೆ. ಇದು ಭಾರತೀಯ ಕಾರ್ಮಿಕ ವರ್ಗದ ಹುಟ್ಟು ಮತ್ತು ಅದರ ತದನಂತರದ ಮುನ್ನಡೆಗೆ ಹಿನ್ನೆಲೆಯನ್ನು ಒದಗಿಸಿರುವ ಸಾಮಾಜಿಕ ಮತ್ತು ಆರ್ಥಿಕ ಪ್ರಕ್ರಿಯೆಗಳ ಸಾರ ಸಂಗ್ರಹವನ್ನು ಮಂದಿಡುತ್ತ ಒಂದು ಸಮಗ್ರ ರೂಪುರೇಷೆ ಮತ್ತು ಲಭ್ಯ ಜ್ಞಾನದ ಸಂಯೋಗವನ್ನು ಕೊಡುವ ಉದ್ದೇಶ ಹೊಂದಿದೆ. ಎಲ್ಲಕ್ಕಿಂತ ಮಿಗಿಲಾಗಿ, ದಸ್ತಾವೇಜುಗಳ ಸಾಕ್ಷ್ಯ ಮತ್ತು ಅವುಗಳ ವ್ಯಾಖ್ಯಾನ ಇವೆರಡಕ್ಕೂ ಸಮಾನ ಮಹತ್ವ ನೀಡುವ ಒಂದು ಸಮತೋಲದ ಸಂಕಥನವನ್ನು ಕೊಡಲಾಗಿದೆ. ಹೀಗೆಂದು ಸುಕೋಮಲ ಸೇನ್ ಹೇಳುವುದು ಅಕ್ಷರಶಃ ನಿಜವೆಂಬುದು ಈ ಪುಸ್ತಕವನ್ನು ಓದಿದ ಯಾರಿಗಾದರೂ ಸ್ಪಷ್ಟವಾಗುವಂಥದ್ದು.


ಕಲ್ಕತ್ತಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವೀಧರರಾದ ಸುಕೋಮಲ್ ಸೇನ್ ಅವರು ಭಾರತದ ಕಾರ್ಮಿಕ ಆಂದೋಲನದಲ್ಲಿ ದೀರ್ಘಕಾಲದ ಮತ್ತು ಅನುಭವಿ ನೇತಾರರಾಗಿದ್ದರು. ಅವರು 1982ರಿಂದ 2008ರ ವರೆಗೆ ಎಂಭತ್ತು ಲಕ್ಷ ಸಾರ್ವಜನಿಕ ಉದ್ಯೋಗಿಗಳನ್ನು ಪ್ರತಿನಿಧಿಸುವ ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಸಿಐಟಿಯು ಉಪಾಧ್ಯಕ್ಷ ರಾಗಿ ಸೇವೆ ಸಲ್ಲಿಸಿದ್ದ ಇವರು ಅಂತರರಾಷ್ಟ್ರೀಯ ಕಾರ್ಮಿಕ ಕ್ಷೇತ್ರದಲ್ಲೂ ಕೆಲಸ ಮಾಡಿದ್ದಾರೆ. 1982ರಲ್ಲಿ ಪ್ರಾಗ್‌ನಲ್ಲಿ ನಡೆದ 'ಟ್ರೇಡ್ ಯೂನಿಯನ್ ಇಂಟರ್‌ನ್ಯಾಷನಲ್ ಆಫ್ ಪಬ್ಲಿಕ್ ಅಂಡ್ ಅಲೈಡ್ ಎಂಪ್ಲಾಯೀಸ್' (ಸಾರ್ವಜನಿಕ ಮತ್ತು ಸಂಬಂಧಿತ ನೌಕರರ ಅಂತರರಾಷ್ಟ್ರೀಯ ಕಾರ್ಮಿಕ ಸಂಘ)ನ ನಿರ್ದೇಶನ ಸಮಿತಿ ಸಭೆಯಲ್ಲಿ ಭಾಗವಹಿಸಿದರು. 1996 ರಲ್ಲಿ ಅದರ ಪ್ರಧಾನ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡರು, 2009 ರ ಜೂನ್ ವರೆಗೆ ಈ ಹುದ್ದೆಯಲ್ಲಿದ್ದರು. 2011 ರ ವರೆಗೆ ಅವರು ವರ್ಲ್ಡ್ ಫೆಡರೇಶನ್ ಆಫ್ ಟ್ರೇಡ್ ಯೂನಿಯನ್ಸ್ (ಡಬ್ಲ್ಯೂ.ಎಫ್.ಟಿ.ಯು)ನ ಅಧ್ಯಕ್ಷಮಂಡಳಿಯ ಸದಸ್ಯರಾಗಿದ್ದರು. ಅವರು 1982 ರಿಂದ 1994 ರವರೆಗೆ ಸಿಪಿಐ(ಎಂ) ಸಂಸತ್ ಸದಸ್ಯರಾಗಿದ್ದರು. ಅವರು ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರೂ ಆಗಿದ್ದರು.

ವಿದ್ವತ್ಪೂರ್ಣ ಬರಹಗಾರರಾದ ಸುಕೋಮಲ್ ಸೆನ್ ಅವರು "ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಚಳವಳಿಯ ಇತಿಹಾಸ"; "ಮೇ ದಿನ ಮತ್ತು ಭಾರತದಲ್ಲಿ ಎಂಟು ಗಂಟೆಯ ಕೆಲಸದ ದಿನದ ಹೋರಾಟ"; "ಕಮ್ಯುನಿಸ್ಟ್ ಪ್ರಣಾಳಿಕೆ: ಕ್ರಾಂತಿಯ ಸಿದ್ಧಾಂತದ 150 ನೇ ವಾರ್ಷಿಕೋತ್ಸವದ ಕೊಡುಗೆ" ಮತ್ತು "ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಇತಿಹಾಸ" ಮುಂತಾದ ಪುಸ್ತಕಗಳ ಲೇಖಕರಾಗಿದ್ದಾರೆ.

ಅರ್ಥಪೂರ್ಣ ಮುನ್ನುಡಿ

ಹಿರಿಯ ಕಾರ್ಮಿಕ ನಾಯಕ ವಿ.ಜೆ.ಕೆ.ನಾಯರ್ ಬರೆದಿರುವ ಮುನ್ನುಡಿ ಈ ಪುಸ್ತಕದ ಇನ್ನೊಂದು ವಿಶೇಷತೆ. ಅವರು ತಮ್ಮ ಮುನ್ನುಡಿಯಲ್ಲಿ ಅಧ್ಯಾಯ ವಾರರಾಗಿ ಮತ್ತು ಅವಧಿ ವಾರಾಗಿ ಈ ಪುಸ್ತಕದಲ್ಲಿ ನಿರೂಪಿತವಾಗಿರುವ ಚರಿತ್ರೆಯ ಸಾರಾಂಶ ಕೊಡುವುದಲ್ಲದೆ, ಕಾರಣಾಂತರದಿಂದ ಈ ಪುಸ್ತಕದಲ್ಲಿ ಬಿಟ್ಟು ಹೋಗಿರುವ ಕೆಲವು ವಿದ್ಯಮಾನಗಳನ್ನು ಘಟನೆಗಳನ್ನು ನಿರೂಪಿಸುತ್ತಾರೆ. ಕೆಲವು ಕಡೆ ತಮ್ಮ ವಿಮರ್ಶಾತ್ಮಕ ಒಳನೋಟಗಳನ್ನು ನೀಡುತ್ತಾರೆ. ಇದಕ್ಕಿಂತಲೂ ಹೆಚ್ಚಾಗಿ ಈ ಪುಸ್ತಕದಲ್ಲಿ ಅಷ್ಟಾಗಿ ಸಿಗದ, ಕರ್ನಾಟಕದ ಕಾರ್ಮಿಕ ವರ್ಗದ ರಚನೆ, ಉದಯ ಮತ್ತು ಹೋರಾಟಗಳಿಗೆ ಸಂಬಂಧಿಸಿದ ಅಂತರವನ್ನು ತುಂಬುವ ಮೂಲಕ ಈ ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಕರ್ನಾಟಕದ ಕಾರ್ಮಿಕ ವರ್ಗದ ಚಳುವಳಿಯ ಬಗ್ಗೆ ಓದುಗರಿಗೆ ಮತ್ತು ಭವಿಷ್ಯದ ಸಂಶೋಧಕರಿಗೆ ಮಾರ್ಗದರ್ಶನ ನೀಡಲು, ರಾಜ್ಯಕ್ಕೆ ಸಂಬಂಧಿಸಿದ ಸಂಗತಿಗಳನ್ನು ಮತ್ತು ಪೂರಕ ವಿಶ್ಲೇಷಣೆಯನ್ನು ಸೇರಿಸಿದ್ದಾರೆ. ವಿ.ಜೆ.ಕೆ.ನಾಯರ್ ಬರೆದಿರುವ ದೀರ್ಘ ಅರ್ಥಪೂರ್ಣ ಮುನ್ನುಡಿ ಸ್ವತಂತ್ರ ಪುಸ್ತಿಕೆಯಾಗಿ ಪ್ರಕಟವಾಗುವಷ್ಟು ಸತ್ವವನ್ನು ಹೊಂದಿದೆ.

ತಿಲಕ್ ಬಂಧನವಾದಾಗ ಮುಂಬಯಿಯ ಕಾರ್ಮಿಕರು ಹೂಡಿದ ಪ್ರಖ್ಯಾತ ಕಾರ್ಮಿಕರ ಮುಷ್ಕರ, ಭಾರತದ ಮೊದಲ ಮೇದಿನ, ಮೊದಲ ಕೇಂದ್ರೀಯ ಕಾರ್ಮಿಕ ಸಂಘಟನೆ ಎಐಟಿಯುಸಿಯ ಸ್ಥಾಪನೆ, ಭಾರತದ ಮೊದಲ ಕಾರ್ಮಿಕರ ಪ್ರಣಾಳಿಕೆ, ಕಾರ್ಮಿಕ ಸಂಘಟನೆಯಲ್ಲಿ ಸುಧಾರಣಾವಾದಿ ಮತ್ತು ಕ್ರಾಂತಿಕಾರಿ ಧಾರೆಗಳ ನಡುವೆ ಸೈದ್ಧಾಂತಿಕ ಸಂಘಟನಾ ಭಿನ್ನಾಭಿಪ್ರಾಯಗಳು ಮತ್ತು ಒಡಕುಗಳು, ಎರಡನೆಯ ಮಹಾಯುದ್ಧ ನಂತರದ ರಿನ್ ನಾವಿಕರ ದಂಗೆ ಮತ್ತು ಇತರ ಬ್ರಿಟಿಷ್ ವಿರೋಧಿ ಹೋರಾಟಗಳಲ್ಲಿ ಕಾರ್ಮಿಕರ ಪಾತ್ರ, 1970ರ ದಶಕದ ರೈಲ್ವೇ ಮುಷ್ಕರ, ತುರ್ತು ಪರಿಸ್ಥಿತಿಯಲ್ಲಿ, ಮೊದಲು ಮತ್ತು ನಂತರ ಕಾರ್ಮಿಕ ವಿರೋಧಿ ದಬ್ಬಾಳಿಕೆಯ ವಿರುದ್ಧ ಹೋರಾಟಗಳು, 1991ರ ಚಾರಿತ್ರಿಕ ಸಾರ್ವತ್ರಿಕ ಮುಷ್ಕರ, – ಇವು ಈ ಪುಸ್ತಕದಲ್ಲಿ ಬರುವ ಕೆಲವು ಆಸಕ್ತಿದಾಯಕ ಭಾಗಗಳು.



ಭಾರತದ ಕಾರ್ಮಿಕರಿಗೆ ಪ್ರಣಾಳಿಕೆ ಭಾರತದ ಕಾರ್ಮಿಕರೇ!

ನಿಮ್ಮ ದೇಶದ ಅದೃಷ್ಟದ ತೀರ್ಪುಗಾರರಾಗಿ ನಿಮ್ಮ ಹಕ್ಕನ್ನು ಪ್ರತಿಪಾದಿಸುವ ಸಮಯ ಬಂದಿದೆ. ನೀವು ರಾಷ್ಟ್ರೀಯ ಜೀವನದ ಪ್ರವಾಹದಿಂದ ದೂರವಿರಲು ಸಾಧ್ಯವಿಲ್ಲ. ಭಾರತಕ್ಕಾಗಿ ಇಂದು ಇತಿಹಾಸ ನಿರ್ಮಿಸುತ್ತಿರುವ ಘಟನೆಗಳನ್ನು ಎದುರಿಸಲು ನೀವು ನಿರಾಕರಿಸಲಾಗುವುದಿಲ್ಲ. ನೀವು ಜನರ ಸಮೂಹ. ರಾಜಕೀಯ ಚದುರಂಗದಲ್ಲಿ ಪ್ರತಿಯೊಂದು ಚಳುವಳಿ, ನಿಮ್ಮ ದೇಶದ ಆರ್ಥಿಕ ಅಥವಾ ಆರ್ಥಿಕ ವ್ಯವಸ್ಥೆಗಳ ಪ್ರತಿಯೊಂದು ಹೆಜ್ಜೆಯೂ ಇತರ ವರ್ಗದ ಮೇಲೆ ಪರಿಣಾಮ ಬೀರುವುದಕ್ಕಿಂತ ಹೆಚ್ಚಾಗಿ ನಿಮ್ಮ ಮೇಲೆ ಪರಿಣಾಮ ಬೀರುತ್ತದೆ. ನಿಮ್ಮ ಜವಾಬ್ದಾರಿಗಳ ಬಗ್ಗೆ ನೀವು ಜಾಗೃತರಾಗಬೇಕು. ನಿಮ್ಮ ಹಕ್ಕುಗಳನ್ನು ನೀವು ಅರ್ಥಮಾಡಿಕೊಳ್ಳಬೇಕು. ನಿಮ್ಮ ಅದೃಷ್ಟವನ್ನು ಸಾಧಿಸಿಕೊಳ್ಳಲು ನೀವು ನಿಮ್ಮನ್ನು ಸಿದ್ಧಪಡಿಸಿಕೊಳ್ಳಬೇಕು.

'ಭಾರತದ ಕಾರ್ಮಿಕರೇ! ನೀವು ಬಹಳಷ್ಟು ಕಷ್ಟದಲ್ಲಿದ್ದಿರಿ. ನೀವು ಅದನ್ನು ಹೇಗೆ ಉತ್ತಮಗೊಳಿಸುತ್ತೀರಿ? ಅಸ್ಸಾಂ ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**